ಶನಿವಾರ, ಜೂನ್ 17, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಅಭಿಮಾನ
ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದ ಬಾಲಿವುಡ್ ನಟ ಸಲ್ಮಾನ್ ಖಾನ್

ಸರ್ಕಾರಗಳು ಬದಲಾದಂತೆ ಸಾಂಸ್ಕೃತಿಕ ಕೇಂದ್ರಗಳ ನೇಮಕಾತಿಯೂ ರದ್ದು • ಅಧ್ಯಕ್ಷಗಾದಿಗೆ ತೆರೆಮರೆಯಲ್ಲಿ ಕಸರತ್ತು

ಸಾಂಸ್ಕೃತಿಕ ನೀತಿ: ಜಾರಿಗಿಲ್ಲ ಇಚ್ಛಾಶಕ್ತಿ

• ವರುಣ ಹೆಗಡೆ

ಬೆಂಗಳೂರು: ರಾಜ್ಯ ಸರ್ಕಾರದ ‘ಸಾಂಸ್ಕೃತಿಕ ನೀತಿ’ ಏನಿರಬೇಕು ಎಂಬುದರ ಕುರಿತು ವರದಿ ಸಿದ್ಧಪಡಿಸಿ ಒಂಬತ್ತು ವರ್ಷಗಳಾದರೂ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಇದರಿಂದಾಗಿ ರಾಜ್ಯದಲ್ಲಿ ಹೊಸ ಸರ್ಕಾರ ರಚನೆಯಾದ ಬೆನ್ನಲ್ಲಿಯೇ ಸಾಂಸ್ಕೃತಿಕ ಕೇಂದ್ರಗಳ ಅಧ್ಯಕ್ಷಗಾದಿಗೂ ತೆರೆಮರೆಯಲ್ಲಿ ಇನ್ನಿಲ್ಲದ ಕಸರತ್ತು ನಡೆಯುತ್ತಿದೆ.

ಅಧಿಕಾರಕ್ಕೆ ಬಂದ ಬಳಿಕ ಕಾಂಗ್ರೆಸ್ ನೇತೃತ್ವದ ಸರ್ಕಾರವು ಸಾಂಸ್ಕೃತಿಕ ಕೇಂದ್ರಗಳಿಗೆ ಹಿಂದಿನ ಸರ್ಕಾರದ ನೇಮಕಾತಿಗಳನ್ನು ರದ್ದುಪಡಿಸಿದೆ. ಈ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರವೂ 3 ವರ್ಷದ ಅವಧಿ ಮುಗಿಯುವ ಮುನ್ನವೇ ಅಧ್ಯಕ್ಷರಿಂದ ರಾಜೀನಾಮೆ ಪಡೆದು, ಹೊಸ ನೇಮಕಾತಿ ಮಾಡಿತ್ತು.

ಸರ್ಕಾರ ಬದಲಾದಂತೆ ಅಕಾಡೆಮಿಗಳು, ಪ್ರಾಧಿಕಾರಗಳ ಕಾರ್ಯಕಾರಿ ಸಮಿತಿಯನ್ನೂ ಬದಲಾಯಿಸಲಾಗುತ್ತಿದೆ. ಆಡಳಿತಾರೂಢ ಸರ್ಕಾರಗಳು ತಮ್ಮ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪುವವರಿಗೆ ಅಧ್ಯಕ್ಷ ಸ್ಥಾನ ನೀಡಿ, ಆಡಳಿತಾತ್ಮಕ ವಿಚಾರಗಳಿಗೆ ಹಸ್ತಕ್ಷೇಪ ಮಾಡುತ್ತಿವೆ ಎಂಬ ಅಸಮಾಧಾನ ಸಾಂಸ್ಕೃತಿಕ ವಲಯದಲ್ಲಿದೆ. ಹೀಗಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಬಲೀಕರಣ, ಅಕಾಡೆಮಿಗಳಿಗೆ ಸಂಪೂರ್ಣ ಸ್ವಾಯತ್ತೆ ಸೇರಿ ಸಾಂಸ್ಕೃತಿಕ ಕ್ಷೇತ್ರದ ಸಮಗ್ರ ಸುಧಾರಣೆಗೆ ‘ಸಾಂಸ್ಕೃತಿಕ ನೀತಿ’ ಅಗತ್ಯ ಎಂಬ ಕೂಗು ಮತ್ತೆ ಮುನ್ನೆಲೆಗೆ ಬಂದಿದೆ.

44 ಶಿಫಾರಸು: ಸಾಂಸ್ಕೃತಿಕ ನೀತಿ ರಚನೆಗೆ ಸಂಬಂಧಿಸಿದಂತೆ 2013ರ ಆ.8ರಂದು ಸಿದ್ದರಾಮಯ್ಯ ನೇತೃತ್ವದ ಅಂದಿನ ಕಾಂಗ್ರೆಸ್ ಸರ್ಕಾರವು ಸಾಹಿತಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ‘ಸಮಗ್ರ ಸಾಂಸ್ಕೃತಿಕ ನೀತಿ ನಿರೂಪಣಾ ಸಮಿತಿ’ ರಚಿಸಿತ್ತು. ಈ ಸಮಿತಿಯು 2014ರ ಜೂನ್ 25ರಂದು ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಇದರ ಪರಾಮರ್ಶೆಗೆ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ಎಚ್‌.ಕೆ. ಪಾಟೀಲ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ರಚಿಸಲಾಗಿತ್ತು.

ಸಣ್ಣ ಪುಟ್ಟ ತಿದ್ದುಪಡಿಯೊಂದಿಗೆ ಸಚಿವ ಸಂಪುಟದ ಒಪ್ಪಿಗೆ ಪಡೆದ ಸರ್ಕಾರ, 2017ರ ಅ.10ರಂದು ಶಿಫಾರಸುಗಳ ಜಾರಿಗೆ ಆದೇಶ ಹೊರಡಿಸಿತ್ತು. ಆದರೆ, ಸಮಿತಿ ಮಾಡಿದ್ದ 44 ಶಿಫಾರಸುಗಳ ಪೈಕಿ, ‘ಅಕಾಡೆಮಿಗಳ ಅಧ್ಯಕ್ಷರ ಆಯ್ಕೆಗೆ ಶೋಧನಾ ಸಮಿತಿ ರಚನೆ’ ಸೇರಿ ಕೆಲವೊಂದು ಶಿಫಾರಸುಗಳನ್ನು ಕೈಬಿಡಲಾಗಿತ್ತು. ಇದಕ್ಕೆ ಸಾಂಸ್ಕೃತಿಕ ವಲಯದಲ್ಲಿ ವಿರೋಧವೂ ವ್ಯಕ್ತವಾಗಿತ್ತು.

ಸಾಂಸ್ಕೃತಿಕ ನೀತಿಗೆ ಸಂಬಂಧಿಸಿದ ಶಿಫಾರಸುಗಳ ಜಾರಿಗೆ ಸರ್ಕಾರ ಆದೇಶ ಹೊರಡಿಸಿದ್ದರೂ ಬಹುತೇಕ ಶಿಫಾರಸುಗಳು ಕಡತದಲ್ಲಿಯೇ ಇವೆ. ಇದರಿಂದಾಗಿಯೇ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 13 ಅಕಾಡೆಮಿಗಳು, ನಾಲ್ಕು ಪ್ರಾಧಿಕಾರಗಳು, 24 ಟ್ರಸ್ಟ್ ಹಾಗೂ ಪ್ರತಿಷ್ಠಾನಗಳು, ಐದು ರಂಗಾಯಣಗಳು, ಸಂಶೋಧನಾ ಕೇಂದ್ರಗಳಿಗೆ ಸರ್ಕಾರ ಬದಲಾದಂತೆ ಕಾರ್ಯಕಾರಿ ಸಮಿತಿಯನ್ನೂ ಬದಲಾಯಿಸಲಾಗುತ್ತಿದೆ.

ಸಾಂಸ್ಕೃತಿಕೆ ನೀತಿಗೆ ಸಂಬಂಧಿಸಿದಂತೆ ಈ ಹಿಂದೆ ಹೊರಡಿಸಿದ ಆದೇಶದಲ್ಲಿ ಅಕಾಡೆಮಿ ಹಾಗೂ ಪ್ರಾಧಿಕಾರಗಳ ನೇಮಕಾತಿ ಹಾಗೂ ಸಬಲೀಕರಣದ ಬಗ್ಗೆ ವಿವರಿಸಲಾಗಿತ್ತು. ‘ಅಧ್ಯಕ್ಷರು ಹಾಗೂ ಸದಸ್ಯರ ಅವಧಿ ಮುಗಿದ ನಂತರವೂ ಹೊಸ ನೇಮಕಾತಿ ಆಗುವವರೆಗೆ ಅವರನ್ನೇ ಮುಂದುವರಿಸಬೇಕು’ ಎಂದು ತಿಳಿಸಲಾಗಿತ್ತು. ಆದರೆ, ಇದು ಪಾಲನೆಯಾಗುತ್ತಿಲ್ಲ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಾಟಕ, ಸಾಹಿತ್ಯ ಸೇರಿ ವಿವಿಧ ಅಕಾಡೆಮಿಗಳ ಅಧ್ಯಕ್ಷರ ಹಾಗೂ ಸದಸ್ಯರ ಮೂರು ವರ್ಷದ ಅಧಿಕಾರಾವಧಿ 2022ರ ಅಕ್ಟೋಬರ್‌ನಲ್ಲಿ ಮುಕ್ತಾಯವಾಗಿತ್ತು. ಸರ್ಕಾರ ಅವರನ್ನು ಮುಂದುವರಿಸಲಿಲ್ಲ. ಆಡಳಿತಾಧಿಕಾರಿಗಳನ್ನು ನೇಮಿಸಲಾಗಿತ್ತು. ಆದರೂ ಅಕಾಡೆಮಿಗಳ ಕಾರ್ಯಚಟುವಟಿಕೆ ಸಂಪೂರ್ಣ ಸ್ಥಗಿತಗೊಂಡಿತ್ತು.

ಜಾರಿಯಾಗದ ಪ್ರಮುಖ ಶಿಫಾರಸು

- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಬಲೀಕರಣ ಮತ್ತು ಆಡಳಿತ ವಿಕೇಂದ್ರೀಕರಣ
- ಜಾನಪದ ರೆಪರ್ಟರಿಗಳ ಸ್ಥಾಪನೆ
- ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆ
- ಸೂಫಿ ಸಂಸ್ಕೃತಿ ಮತ್ತು ತತ್ವಪದ ಅಧ್ಯಯನ ಕೇಂದ್ರ ಸ್ಥಾಪನೆ
- ಪ್ರಾಕೃತ ಮತ್ತು ಪಾಲಿ ಅಧ್ಯಯನ ಕೇಂದ್ರ ಸ್ಥಾಪನೆ
- ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರಕ್ಕೆ ಸ್ವತಂತ್ರ ಅಸ್ತಿತ್ವ (ತಮಿಳುನಾಡು ಮಾದರಿ)
- ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಹೊರನಾಡು ಕನ್ನಡಿಗರು
- ಅಕಾಡೆಮಿಗಳಿಗೆ ಸಂಪೂರ್ಣ ಸ್ವಾಯತ್ತೆ

ಜಾರಿಯಾದ ಶಿಫಾರಸು

- ಸಾಂಸ್ಕೃತಿಕ ಸಂಸ್ಥೆಗಳಿಗೆ ಧನಸಹಾಯಕ್ಕೆ ತಜ್ಞರ ಸಮಿತಿ ರಚನೆ
- ಕರ್ನಾಟಕ ಯಕ್ಷಗಾನ–ಬಯಲಾಟ ಅಕಾಡೆಮಿ ಬೇರ್ಪಡಿಸುವಿಕೆ
- ಯುವಜನ ಸಂಸ್ಕೃತಿ ಶಿಬಿರ
- ಸಂಘ–ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ಸದ್ಬಳಕೆ ಬಗ್ಗೆ ಪರಿಶೀಲನೆ
- ಪ್ರಶಸ್ತಿಗಳ ವಿತರಣೆಗೆ ಕಾಲ ಬದ್ಧತೆ
- ಸಾಹಿತಿ ಕಲಾವಿದರಿಗೆ ಮಾಸಾಶನ
- ಶಿಷ್ಯವೇತನ ಮತ್ತು ಫೆಲೋಶಿಪ್ ನೀಡುವಿಕೆ

ಕೈಬಿಟ್ಟಿದ್ದ ಪ್ರಮುಖ ಶಿಫಾರಸು

- ಸಂಸ್ಕೃತಿ ಇಲಾಖೆ, ವಿವಿಧ ಅಕಾಡೆಮಿಗಳ ಕಾರ್ಯಕ್ರಮಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸಲೇಬೇಕು ಎಂಬ ‘ಶಿಷ್ಟಾಚಾರ’ ರದ್ದು ಮಾಡಬೇಕು.
- ಅಕಾಡೆಮಿ ಹಾಗೂ ಪ್ರಾಧಿಕಾರಗಳಿಗೆ ಅಧ್ಯಕ್ಷರ ನೇಮಕಾತಿಗೆ ಕುಲಪತಿಗಳ ಆಯ್ಕೆಯ ರೀತಿಯಲ್ಲೇ ಒಂದು ಶೋಧನಾ ಸಮಿತಿ ರಚಿಸಿ, ಆಯ್ಕೆ ಮಾಡಬೇಕು.
- ವಿವಿಧ ಕಲಾ ಪ್ರಕಾರಗಳಲ್ಲಿನ ಕಲಾವಿದರ ಮತ್ತು ಸಾಹಿತಿಗಳ ಮಕ್ಕಳಿಗೆ ಜಾತಿ, ಧರ್ಮದ ಪರಿಗಣನೆ ಮೀರಿ ಆರ್ಥಿಕ ಸ್ಥಿತಿಯನ್ನು ಮಾನದಂಡವಾಗಿ ಇಟ್ಟುಕೊಂಡು ಶೈಕ್ಷಣಿಕ ಮೀಸಲಾತಿ ನೀಡಬೇಕು.
- ರಂಗಾಯಣಗಳ ಉಸ್ತುವಾರಿಗಾಗಿ ‘ಕರ್ನಾಟಕ ರಂಗಾಯಣ ಪ್ರಾಧಿಕಾರ’ವನ್ನು ರಚಿಸಬೇಕು.



ಸಾಂಸ್ಕೃತಿಕ ನೀತಿಗೆ ಸಂಬಂಧಿಸಿದ ಶಿಫಾರಸುಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ. ಬರಗೂರು ರಾಮಚಂದ್ರಪ್ಪ ಅವರ ಜತೆಗೂ ಮಾತನಾಡುತ್ತೇನೆ.

ಶಿವರಾಜ್ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಸಚಿವ

ಸಮಿತಿಯಲ್ಲಿ ಯಾರೆಲ್ಲ ಇದ್ದರು?

ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಗ್ರ ಸಾಂಸ್ಕೃತಿಕ ನೀತಿ ನಿರೂಪಣಾ ಸಮಿತಿಯಲ್ಲಿ ಗುರುಲಿಂಗ ಕಾಪಸೆ, ಚಂದ್ರಕಾಂತ ಕೂಸನೂರು, ಗೀತಾ ನಾಗಭೂಷಣ, ಸಿ. ಬಸವಲಿಂಗಯ್ಯ, ಭಾನು ಮುಷ್ತಾಕ್, ಡಿ.ಕೆ. ಚೌಟ ಸದಸ್ಯರಾಗಿದ್ದರು.

‘ಆದ್ಯತೆ ಮೇರೆಗೆ ಜಾರಿ ಮಾಡಿ’



ಸಾಂಸ್ಕೃತಿಕ ವಲಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಕಾರ್ಯಸ್ವರೂಪ ಹೇಗಿರಬೇಕು ಎಂಬ ಮಾರ್ಗದರ್ಶಿ ಸೂತ್ರಗಳನ್ನು ಒಳಗೊಂಡ ಸಾಂಸ್ಕೃತಿಕ ನೀತಿಯ ಶಿಫಾರಸುಗಳನ್ನು ಆದ್ಯತೆ ಮೇರೆಗೆ ಜಾರಿ ಮಾಡಬೇಕು. ಸಂಸ್ಕೃತಿ ಇಲಾಖೆ ಸಬಲೀಕರಣ ಮತ್ತು ವಿಕೇಂದ್ರೀಕರಣಕ್ಕೆ ಸಂಬಂಧಿಸಿದಂತೆ ಅಗತ್ಯ ಸಿಬ್ಬಂದಿ ನೇಮಕ, ವಿಭಾಗವಾರು ಆಡಳಿತ ಕಚೇರಿಗಳ ಸ್ಥಾಪನೆ, ಇತ್ಯಾದಿ ಶಿಫಾರಸುಗಳಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. ಆದ್ದರಿಂದ ಸರ್ಕಾರ ಒಪ್ಪಿ, ಆದೇಶಿಸಿದ ಶಿಫಾರಸುಗಳನ್ನು ಹಂತ ಹಂತವಾಗಿ ಅನುಷ್ಠಾನ ಮಾಡಬೇಕು.

ಸರ್ಕಾರವು 2016ರಲ್ಲಿ ಶಿಫಾರಸುಗಳ ಜಾರಿಗೆ ಆದೇಶ ಹೊರಡಿಸಿತು. ಆರ್ಥಿಕ ಇಲಾಖೆಯೂ ತಾತ್ವಿಕ ಒಪ್ಪಿಗೆ ನೀಡಿತ್ತು. ಆದರೂ ಶಿಫಾರಸುಗಳು ಪೂರ್ಣ ಪ್ರಮಾಣದಲ್ಲಿ ಜಾರಿಯಾಗಲಿಲ್ಲ. ಇಷ್ಟು ವರ್ಷಗಳಲ್ಲಿ ಕೆಲವೊಂದು ಶಿಫಾರಸುಗಳನ್ನು ಮಾತ್ರ ಜಾರಿ ಮಾಡಲಾಗಿದೆ. ಆಗ ಕಾಂಗ್ರೆಸ್ ಸರ್ಕಾರವೇ ಸಮಿತಿ ರಚಿಸಿ, ವರದಿ ಸ್ವೀಕರಿಸಿತ್ತು. ಮತ್ತೆ ಅದೇ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಈ ಶಿಫಾರಸುಗಳ ಜಾರಿಗೆ ಆದ್ಯತೆ ನೀಡಬೇಕು.

ಬರಗೂರು ರಾಮಚಂದ್ರಪ್ಪ, ಸಾಹಿತಿ


‘ಪಕ್ಷ ರಾಜಕಾರಣ ಮಾಡಬಾರದು’



ಸಾಂಸ್ಕೃತಿಕ ಲೋಕದ ನಾಯಕರು ರಾಜಕೀಯ ಪಕ್ಷದ ಕಾರ್ಯಕರ್ತರ ರೀತಿ ವರ್ತನೆ ಹಾಗೂ ಯೋಚನೆ ಮಾಡಬಾರದು. ಕಾರ್ಯಕರ್ತರ ರೀತಿ ವರ್ತಿಸಿದರೆ ಅದು ಸಾಂಸ್ಕೃತಿಕ ಜಗತ್ತಾಗದೆ, ರಾಜಕೀಯ ಜಗತ್ತಾಗುತ್ತದೆ. ಪಕ್ಷದವರೂ ಸಾಂಸ್ಕೃತಿಕ ಕೇಂದ್ರಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು

ಬಿ.ವಿ. ವಸಂತಕುಮಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ

‘ಅವಧಿ ಪೂರೈಸಲು ಅವಕಾಶ ನೀಡಿ’



ಸರ್ಕಾರ ಬದಲಾದ ಕೂಡಲೇ ಅಕಾಡೆಮಿ ಮುಂತಾದ ಸಾಂಸ್ಕೃತಿಕ ಕೇಂದ್ರಗಳ ನೇಮಕಾತಿಯನ್ನು ರದ್ದು ಮಾಡುವುದು ಅತ್ಯಂತ ಖೇದಕರ. ಬರಗೂರು ಸಮಿತಿ ಶಿಫಾರಸಿನಂತೆ ಸಾಂಸ್ಕೃತಿಕ ಕೇಂದ್ರಗಳ ಅಧ್ಯಕ್ಷರು ತಮ್ಮ ಅವಧಿ ಪೂರೈಸುವುದಕ್ಕೆ ಅನುವು ಮಾಡಿಕೊಡಬೇಕು. ಸಮಿತಿಯ ಶಿಫಾರಸುಗಳನ್ನು ಸರ್ಕಾರ ಒಪ್ಪಿಕೊಂಡು ಆದೇಶ ಹೊರಡಿಸಿದರೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅದನ್ನು ಜಾರಿಗೊಳಿಸದಿರುವುದು ವಿಪರ್ಯಾಸ

ಜೆ. ಲೋಕೇಶ, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ


‘ಸಂವಿಧಾನದ ರೀತಿ ಇರಬೇಕು’



ಸರ್ಕಾರಗಳ ಮನಸ್ಸು, ಆಶಯದ ರೀತಿ ಸಾಂಸ್ಕೃತಿಕ ಕೇಂದ್ರಗಳ ಅಧ್ಯಕ್ಷರನ್ನೂ ಬದಲಾಯಿಸಲಾಗುತ್ತಿದೆ. ಸಾಂಸ್ಕೃತಿಕ ಕ್ಷೇತ್ರಕ್ಕೆ ಸಾಂಸ್ಕೃತಿಕ ನೀತಿ ಅತ್ಯಗತ್ಯ. ಅದು ಯಾವಾಗಲೂ ಮನುಷ್ಯ ಪರವಾಗಿರಬೇಕು. ಎಲ್ಲ ಸಮುದಾಯದ ಸಂಸ್ಕೃತಿ, ಕಲೆ ಪ್ರೋತ್ಸಾಹಿಸಬೇಕು. ಸರ್ಕಾರ ಬದಲಾದಂತೆ ನೀತಿಯನ್ನೂ ಬದಲಾಯಿಸಬಾರದು

ಎಚ್.ಎಲ್. ಪುಷ್ಪಾ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ

‘ಒಂದು ಸರ್ಕಾರದ ಅವಧಿ ಇರಲಿ’



ಅಕಾಡೆಮಿ, ಪ್ರಾಧಿಕಾರದ ಕಾರ್ಯಕಾರಿ ಸಮಿತಿಯ ಅವಧಿಯನ್ನು ಒಂದು ಸರ್ಕಾರದ ಅವಧಿ ಅಂತ ಮಾಡಿದರೆ ಉತ್ತಮ. ಇಲ್ಲವಾದಲ್ಲಿ ಕಾರ್ಯಯೋಜನೆಗಳು ಸ್ಥಗಿತವಾಗುವ ಸಾಧ್ಯತೆ ಇರುತ್ತದೆ. ಹೊಸ ನೇಮಕಾತಿಯ ಬಳಿಕವೂ ಹಿಂದಿನ ಕಾರ್ಯಯೋಜನೆಯನ್ನು ಮುಂದುವರಿಸಬೇಕು. ಯೋಜನೆಗಳನ್ನು ಅರ್ಧಕ್ಕೆ ಬಿಟ್ಟರೆ ಸರ್ಕಾರಕ್ಕೂ ನಷ್ಟವಾಗಲಿದೆ. ಸಾಂಸ್ಕೃತಿಕ ಜಗತ್ತಿಗೆ ಸಾಂಸ್ಕೃತಿಕ ನೀತಿ ಅಗತ್ಯ

ಅಜಕ್ಕಳ ಗಿರೀಶ್ ಭಟ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ

ಸುದ್ದಿ 2 ನಿಮಿಷ

ಕೊಲೆಯಾದ ನಾಲ್ವರ ಕುಟುಂಬಕ್ಕೆ ತಲಾ ₹25 ಲಕ್ಷ ಪರಿಹಾರ

ಮಂಗಳೂರು: ದುಷ್ಕರ್ಮಿಗಳಿಂದ ಕೊಲೆಯಾದ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ವರು ಯುವಕರ ಕುಟುಂಬದವರಿಗೆ ತಲಾ ₹25 ಲಕ್ಷ ಪರಿಹಾರವನ್ನು ರಾಜ್ಯ ಸರ್ಕಾರ ಮಂಜೂರು ಮಾಡಿದೆ.

2022ರ ಜುಲೈ 19ರಂದು ಬೆಳ್ಳಾರೆಯಲ್ಲಿ ಕೊಲೆಯಾಗಿದ್ದ ಮಸೂದ್, 2022ರ ಜುಲೈ 28ರಂದು ಕೊಲೆಯಾಗಿದ್ದ ಸುರತ್ಕಲ್‌ನ ಕಾಟಿಪಳ್ಳದ ಮೊಹಮ್ಮದ್ ಫಾಜಿಲ್, 2022ರ ಡಿಸೆಂಬರ್ 24ರಂದು ಕೊಲೆಯಾಗಿದ್ದ ಕಾಟಿಪಳ್ಳದ ಅಬ್ದುಲ್ ಜಲೀಲ್ ಹಾಗೂ 2018ರ ಜನವರಿ 3ರಂದು ಕೊಲೆಯಾಗಿದ್ದ ಕಾಟಿಪಳ್ಳದ ದೀಪಕ್ ರಾವ್ ಅವರ ಕುಟುಂಬದವರಿಗೆ ಪರಿಹಾರ ಘೋಷಣೆ ಆಗಿದೆ.

ಮುಖ್ಯಮಂತ್ರಿ ಅವರ ಪರಿಹಾರ ನಿಧಿಯಿಂದ ಈ ಹಣ ಮಂಜೂರು ಮಾಡಿ ಮುಖ್ಯಮಂತ್ರಿ ಅವರು ಆದೇಶಿಸಿದ್ದಾರೆ. ಮೃತರ ಕುಟುಂಬ ವರ್ಗದವರಿಗೆ ಇದೇ 19ರಂದು ಬೆಳಿಗ್ಗೆ 8 ಗಂಟೆಗೆ ಬೆಂಗಳೂರಿನಲ್ಲಿರುವ ತಮ್ಮ ಗೃಹ ಕಚೇರಿ ಕೃಷ್ಣದಲ್ಲಿ ಮುಖ್ಯಮಂತ್ರಿ ಅವರು ಪರಿಹಾರದ ಚೆಕ್ ವಿತರಿಸಲಿದ್ದಾರೆ. ಮೃತರ ಕುಟುಂಬದವರೊಂದಿಗೆ ಹಾಜರಿರಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯು ತಹಶೀಲ್ದಾರರಿಗೆ ಪತ್ರ ಬರೆದು ಸೂಚಿಸಿದ್ದಾರೆ.

2022ರ ಜುಲೈ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರು ಕೊಲೆಗಳು ನಡೆದಿದ್ದವು. ಪ್ರವೀಣ್ ನೆಟ್ಟಾರು ಕುಟುಂಬದವರಿಗೆ ಮಾತ್ರ ಅಂದಿನ ಬಿಜೆಪಿ ನೇತೃತ್ವದ ಸರ್ಕಾರ ₹25 ಲಕ್ಷ ಪರಿಹಾರ ನೀಡಿತ್ತು. ಉಳಿದವರ ಕುಟುಂಬದವರಿಗೂ ಪರಿಹಾರ ನೀಡಬೇಕು ಎಂಬ ಒತ್ತಾಯ ಕೇಳಿ ಬಂದಿತ್ತು.

ಅಧಿಕಾರಿ ಕಟ್ಟಿ ಹಾಕಲು ಮುಂದಾದರು!



ಮುಳಬಾಗಿಲು (ಕೋಲಾರ): ಇಲ್ಲಿನ 8 ಸ್ತ್ರೀಶಕ್ತಿ ಸಂಘಗಳಿಗೆ ಡಿಸಿಸಿ ಬ್ಯಾಂಕ್‌ನಿಂದ ಕೊಟ್ಟಿದ್ದ ₹ 40 ಲಕ್ಷ ಸಾಲವನ್ನು ಮರು ಪಾವತಿಸುವಂತೆ ಕೋರಿದ ಅಧಿಕಾರಿಯನ್ನು ತಾಲ್ಲೂಕಿನ ಬೈರಕೂರು ಹೋಬಳಿ ಹಿರಣ್ಯಗೌಡನ ಹಳ್ಳಿ ಮಹಿಳೆಯರು ಶುಕ್ರವಾರ ಹಗ್ಗದಿಂದ ಕಟ್ಟಿ ಹಾಕಲು ಪ್ರಯತ್ನಿಸಿದ್ದಾರೆ.

‘ಸಿದ್ದರಾಮಯ್ಯ ಅವರು ಚುನಾವಣಾ ಪ್ರಚಾರಕ್ಕೆ ಬಂದ ಸಮಯದಲ್ಲಿ ಕಾಂಗ್ರೆಸ್ ಗೆದ್ದರೆ ಡಿಸಿಸಿ ಬ್ಯಾಂಕ್‌ನಿಂದ ನೀಡಿದ ಸಾಲವನ್ನು ಮನ್ನಾ ಮಾಡುವುದಾಗಿ ಹೇಳಿದ್ದರು. ಆದ್ದರಿಂದ ಯಾರೂ ಸಾಲ ಪಾವತಿಸುವುದಿಲ್ಲ’ ಎಂದು ಎಂಟು ಮಹಿಳಾ ಸಂಘದ ಸದಸ್ಯೆಯರು ಪಟ್ಟು ಹಿಡಿದು, ಬೈರಕೂರಿನ ವ್ಯವಸಾಯ ಸಹಕಾರ ಸೇವಾ ಸಂಘದ ಕಾರ್ಯದರ್ಶಿ ನಾಗರಾಜ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಬೊಮ್ಮಾಯಿ ಕುರಿತು ಪ್ರತಾಪ ಟೀಕೆ

ಮೈಸೂರು: ‘ಕೋವಿಡ್ ಸಂದರ್ಭವನ್ನು ಸಮರ್ಥವಾಗಿ ನಿಭಾಯಿಸಿ ಬಿ.ಎಸ್. ಯಡಿಯೂರಪ್ಪ ಅಧಿಕಾರ ಬಿಟ್ಟುಕೊಟ್ಟರು. ಆದರೆ, ನಂತರ ಬಂದವರು ಕಾರ್ಯಕರ್ತರ ಇಚ್ಛೆಗೆ ತಕ್ಕಂತೆ ನಡೆದುಕೊಳ್ಳಲಿಲ್ಲ. ಹರ್ಷ ಹಾಗೂ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣಗಳಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಿಲ್ಲ’ ಎಂದು ಸಂಸದ ಪ್ರತಾಪಸಿಂಹ, ತಮ್ಮದೇ ಪಕ್ಷದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಪರೋಕ್ಷವಾಗಿ ಕಿಡಿಕಾಡಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘2018ರ ವಿಧಾನಸಭಾ ಚುನಾವಣೆಯಲ್ಲಿ ಯಡಿಯೂರಪ್ಪ ನೇತೃತ್ವ ಹಾಗೂ ಕಾರ್ಯಕರ್ತರ ಛಲದಿಂದ ಪಕ್ಷವು 104 ಸ್ಥಾನಗಳನ್ನು ಗೆದ್ದಿತ್ತು. ಒಂದು ವರ್ಷದ ನಂತರ ಅಧಿಕಾರಕ್ಕೆ ಬಂದಿತ್ತು. ಯಡಿಯೂರಪ್ಪ ನಂತರ ಚುಕ್ಕಾಣಿ ಹಿಡಿದವರಿಗೆ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರಬೇಕೆನ್ನುವ ಛಲವಿರಲಿಲ್ಲ’ ಎಂದು ಆರೋಪಿಸಿದರು.

ಕಾವೇರಿ ನೀರು ಬಿಡಲು ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕರ್ನಾಟಕಕ್ಕೆ ಮುಂಗಾರು ಪ್ರವೇಶವಾಗಿದ್ದರೂ ನಿರೀಕ್ಷಿತ ಮಳೆಯಾಗಿಲ್ಲ. ರಾಜ್ಯದ ಜಲಾಶಯಗಳಲ್ಲೂ ನೀರಿಲ್ಲ. ಇಂತಹ ಸನ್ನಿವೇಶದಲ್ಲಿ ತಮಿಳುನಾಡಿಗೆ ಜೂನ್ ತಿಂಗಳ ಕೋಟಾದ ಕಾವೇರಿ ನೀರನ್ನು ಹರಿಸುವುದು ಕಷ್ಟ ಸಾಧ್ಯ’ ಎಂದು ಕರ್ನಾಟಕ ಸರ್ಕಾರ ಅಸಹಾಯಕತೆ ವ್ಯಕ್ತಪಡಿಸಿದೆ.

ಶುಕ್ರವಾರ ಇಲ್ಲಿ ನಡೆದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯದ ಪ್ರತಿನಿಧಿಗಳು, ‘ವಾರದೊಳಗೆ ಉತ್ತಮ ಮಳೆಯಾಗಿ ಜಲಾಶಯಗಳ ಮಟ್ಟದಲ್ಲಿ ಸುಧಾರಣೆಯಾಗಬಹುದು. ಆಗ ನೀರನ್ನು ತಮಿಳುನಾಡಿಗೆ ಹರಿಸಲಾಗುವುದು’ ಎಂದೂ ಭರವಸೆ ನೀಡಿದರು.

‘ರಾಜ್ಯದಲ್ಲಿ ಮುಂಗಾರಿನಲ್ಲಿ (ಜೂನ್‌ನಿಂದ ಸೆಪ್ಟೆಂಬರ್ ಅಂತ್ಯ) ವಾಡಿಕೆಯಂತೆ 839 ಮಿ.ಮೀ. ಮಳೆಯಾಗಬೇಕು. ಇಲ್ಲಿಯವರೆಗೆ 26.9 ಮಿ.ಮೀ. ಮಾತ್ರ ಮಳೆಯಾಗಿದೆ. ಕೆಆರ್‌ಎಸ್‌ನಲ್ಲಿ 82 ಅಡಿಯಷ್ಟು ನೀರು ಇದೆ. ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿದಿರುವುದರಿಂದ ಬೆಳೆಗಳಿಗೂ ನೀರು ಹರಿಸಲು ಸಾಧ್ಯವಾಗುತ್ತಿಲ್ಲ. ಜನತೆಗೆ ಕುಡಿಯುವ ನೀರು ಪೂರೈಸಲು ಆದ್ಯತೆ ನೀಡಬೇಕಿದೆ. ಜಲಾಶಯಗಳಲ್ಲಿ ಸಂಗ್ರಹವಾಗಿರುವ ಅತ್ಯಲ್ಪ ನೀರನ್ನು ತಮಿಳುನಾಡಿಗೆ ಹರಿಸಿದರೆ ರಾಜ್ಯದಲ್ಲಿನ ಕಾವೇರಿ ಅಚ್ಚುಕಟ್ಟು ಪ್ರದೇಶದ ಜನರು ಸಂಕಷ್ಟಕ್ಕೆ ಈಡಾಗಲಿದ್ದಾರೆ’ ಎಂದು ಕರ್ನಾಟಕದ ಅಧಿಕಾರಿಗಳು ಗಮನ ಸೆಳೆದರು.

ಕಾವೇರಿ ನ್ಯಾಯಮಂಡಳಿಯ 2007ರ ಫೆ.5ರ ಅಂತಿಮ ತೀರ್ಪಿನ ಅನ್ವಯ ಸಾಮಾನ್ಯ ಜಲವರ್ಷದಲ್ಲಿ ಕಾವೇರಿಯಿಂದ ತಮಿಳುನಾಡಿಗೆ 192 ಟಿಎಂಸಿ ಅಡಿ ಹರಿಸಬೇಕಿತ್ತು. ಈ ನೀರಿನ ಪ್ರಮಾಣದ ಹಂಚಿಕೆಯನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ವಿಶೇಷ ಮೇಲ್ಮನವಿಯ ಮೇಲೆ ಸುಪ್ರೀಂ ಕೋರ್ಟ್ 2018ರ ಫೆ. 16ರಂದು ನೀಡಿದ ತೀರ್ಪಿನಲ್ಲಿ 177.25 ಟಿಎಂಸಿ ಅಡಿಗೆ ಇಳಿಸಿತ್ತು. ಇದರ ಪ್ರಕಾರ, ಕರ್ನಾಟಕವು ಜೂನ್ ತಿಂಗಳಲ್ಲಿ 9.19 ಟಿಎಂಸಿ ಅಡಿ ನೀರು ಬಿಡಬೇಕಿದೆ.

‘ಕರ್ನಾಟಕವು ಜೂನ್ 15ರವರೆಗೆ 3.5 ಟಿಎಂಸಿ ಅಡಿ ನೀರು ಹರಿಸಬೇಕಿತ್ತು. ಆದರೆ, 1.5 ಟಿಎಂಸಿ ಅಡಿ ನೀರು ಮಾತ್ರ ಬಿಟ್ಟಿದೆ. ಇದರಿಂದ, ನಮ್ಮ ರಾಜ್ಯಕ್ಕೆ ತೊಂದರೆಯಾಗಿದೆ. ಈ ಸಂಬಂಧ ಪ್ರಾಧಿಕಾರವು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ತಮಿಳುನಾಡಿನ ಅಧಿಕಾರಿಗಳು ಪಟ್ಟು ಹಿಡಿದರು. ಜೂನ್ ತಿಂಗಳ ಕೋಟಾದ ನೀರನ್ನು ಹರಿಸುವಂತೆ ಪ್ರಾಧಿಕಾರದ ಅಧ್ಯಕ್ಷರು ಸೂಚಿಸಿದರು. ಆಗ ಕರ್ನಾಟಕದ ಪ್ರತಿನಿಧಿಗಳು, ‘ನಮ್ಮ ಜಲಾಶಯಗಳಲ್ಲೇ ನೀರಿಲ್ಲ. ಇಂತಹ ಸನ್ನಿವೇಶದಲ್ಲಿ ತಮಿಳುನಾಡಿಗೆ ಎಲ್ಲಿಂದ ನೀರು ಹರಿಸುವುದು’ ಎಂದು ಪ್ರಶ್ನಿಸಿದರು.

ಜಲಾಶಯಗಳಲ್ಲಿನ ನೀರಿನ ಸಂಗ್ರಹ, ಇದುವರೆಗೆ ಸುರಿದ ಮಳೆಯ ಪ್ರಮಾಣ, ಕುಡಿಯಲು, ಕೃಷಿಗೆ ಇರುವ ನೀರಿನ ಅಗತ್ಯ ಕುರಿತ ವಿವರಗಳನ್ನು ಪ್ರಾಧಿಕಾರಕ್ಕೆ ರಾಜ್ಯದ ಅಧಿಕಾರಿಗಳು ನೀಡಿ ಮನವರಿಕೆ ಮಾಡುವ ಪ್ರಯತ್ನ ನಡೆಸಿದರು. ಜಲಾಶಯಗಳಲ್ಲಿ ನೀರಿನ ಲಭ್ಯತೆ ಆಧರಿಸಿ ಮುಂದಿನ ದಿನಗಳಲ್ಲಿ ತಮಿಳುನಾಡಿನ ಪಾಲಿನ ನೀರನ್ನು ಹರಿಸಬೇಕು ಎಂದು ಪ್ರಾಧಿಕಾರದ ಅಧ್ಯಕ್ಷರು ಸಲಹೆ ನೀಡಿದರು.

ಸೌಜನ್ಯ ಕೊಲೆ: ಆರೋಪಿ ದೋಷಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳ ಗ್ರಾಮದ ಪಾಂಗಾಳ ನಿವಾಸಿ ಚಂದಪ್ಪ ಗೌಡ ಮತ್ತು ಕುಸುಮಾವತಿ ದಂಪತಿಯ ಪುತ್ರಿ ಸೌಜನ್ಯ ಕೊಲೆ ಪ್ರಕರಣದ ಆರೋಪಿ ಸಂತೋಷ್ ರಾವ್ ಅವರನ್ನು ದೋಷಮುಕ್ತಗೊಳಿಸಿ ಸಿಬಿಐ ವಿಶೇಷ ಕೋರ್ಟ್ ತೀರ್ಪು ನೀಡಿದೆ.

‘ಸಾಕ್ಷ್ಯಾಧಾರ ಕೊರತೆಯ ಹಿನ್ನೆಲೆಯಲ್ಲಿ ಸಂತೋಷ್ ರಾವ್ ಅವರನ್ನು ದೋಷಮುಕ್ತಗೊಳಿಸಲಾಗಿದೆ’ ಎಂದು ಸಿಬಿಐ ವಿಶೇಷ ಕೋರ್ಟ್‌ನ ನ್ಯಾಯಾಧೀಶ ಸಿ.ಬಿ.ಸಂತೋಷ್ ಶುಕ್ರವಾರ ತೀರ್ಪು ಪ್ರಕಟಿಸಿದರು.

ಪ್ರಕರಣವೇನು?: ಉಜಿರೆಯ ಎಸ್‌ಡಿಎಂ ಕಾಲೇಜು ವಿದ್ಯಾರ್ಥಿನಿಯಾಗಿದ್ದ ಸೌಜನ್ಯ 2012ರ ಅಕ್ಟೋಬರ್ 9ರಂದು ಸಂಜೆ ಕಾಲೇಜಿನಿಂದ ಮನೆಗೆ ತೆರಳುವ ವೇಳೆ ನಾಪತ್ತೆಯಾಗಿದ್ದರು. ಮರುದಿನ ರಾತ್ರಿ ಧರ್ಮಸ್ಥಳದ ಮಣ್ಣಸಂಕ ಬಳಿ ಅವರ ಶವ ಪತ್ತೆಯಾಗಿತ್ತು. ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ ಮತ್ತು ಕೊಲೆ ಪ್ರಕರಣ ದಾಖಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಕಳ ತಾಲ್ಲೂಕಿನ ಕುಕ್ಕುಂದೂರು ಗ್ರಾಮದ ಸಂತೋಷ್ ರಾವ್ ಅವರನ್ನು ಪೊಲೀಸರು ಬಂಧಿಸಿದ್ದರು. ಆರೋಪಿ ಪರ ವಕೀಲ ಮೋಹಿತ್ ಕುಮಾರ್ ವಾದ ಮಂಡಿಸಿದ್ದರು.

ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ರಚಿಸಿದ್ದ ಪಠ್ಯಗಳ ಮುಂದುವರಿಕೆ

ಪ್ರಸಕ್ತ ವರ್ಷ: ಹಳೇ ಪಠ್ಯದ ಪಾಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಣೆ ಮಾಡಿದ್ದ ಎಲ್ಲ ಪಾಠಗಳನ್ನೂ ಕೈಬಿಟ್ಟು, ಸಾಹಿತಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿ ಹಿಂದೆ ರೂಪಿಸಿದ್ದ ಹಳೆಯ ಪಠ್ಯ ಪುಸ್ತಕಗಳನ್ನೇ ಈ ಶೈಕ್ಷಣಿಕ ವರ್ಷದಲ್ಲೂ ಬೋಧಿಸಲಾಗುತ್ತದೆ.

ವಿವಾದಿತ ಪಠ್ಯಗಳನ್ನು ಹಿಂಪಡೆಯಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಸಮ್ಮತಿ ಸೂಚಿಸಿದ ಒಂದೇ ದಿನದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ತಿದ್ದುಪಡಿ ರೂಪುರೇಷೆ ಸಿದ್ಧಪಡಿಸಿದ್ದು, ಮೂರ್‍ನಾಲ್ಕು ದಿನಗಳಲ್ಲಿ ಆದೇಶ ಹೊರಬೀಳಲಿದೆ.

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಪಠ್ಯಪುಸ್ತಕಗಳ ಕುರಿತು ಶಿಕ್ಷಣ ತಜ್ಞರು, ಸಾಹಿತಿಗಳ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸುದೀರ್ಘ ಚರ್ಚೆ ನಡೆಸಿದ್ದರು.

‘ಸಾಮಾಜಿಕ ನ್ಯಾಯ, ಸಂವಿಧಾನಕ್ಕೆ ವಿರುದ್ಧವಾಗಿ ಸನಾತನ ಧರ್ಮ, ಭಾರತೀಯತೆ ಹೆಸರಲ್ಲಿ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಆರ್‌ಎಸ್‌ಎಸ್ ಸಿದ್ಧಾಂತಗಳಿಂದ ಪ್ರೇರಿತವಾದ ಪಾಠಗಳನ್ನು ಸೇರಿಸಲಾಗಿದೆ. ಇಂತಹ ಪಾಠಗಳಿಂದ ಮಕ್ಕಳ ಮನಸ್ಸಿನ ಮೇಲೆ ಜಾತಿ, ಧರ್ಮದ ಒಲವು ಬೆಳೆಯುವ ಸಾಧ್ಯತೆ ಇದೆ. ಹಾಗಾಗಿ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಾಡಿದ್ದ ಎಲ್ಲ ಬದಲಾವಣೆಗಳನ್ನೂ ತೆಗೆದು ಹಾಕಬೇಕು’ ಎಂದು ತಜ್ಞರು ಸಲಹೆ ನೀಡಿದ್ದರು.

ಬರಗೂರು ರಾಮಚಂದ್ರಪ್ಪ, ರಾಜಪ್ಪ ದಳವಾಯಿ, ರಘುನಂದನ್ ಸೇರಿದಂತೆ ಕೆಲ ಸಾಹಿತಿಗಳು ಹಾಗೂ ಎಸ್.ಜಿ.ಸಿದ್ದರಾಮಯ್ಯ ನೇತೃತ್ವದ ‘ಸಮಾನ ಮನಸ್ಕರ ಒಕ್ಕೂಟ’ ಹಿಂದೆ ಬರಗೂರು ನೇತೃತ್ವದ ಸಮಿತಿ ರಚಿಸಿದ್ದ ಪಠ್ಯಗಳನ್ನೇ ಇದೇ ಶೈಕ್ಷಣಿಕ ವರ್ಷದಲ್ಲೂ ಮುಂದುವರಿಸಲು ಸಲಹೆ ನೀಡಿತ್ತು. ಅವರ ಮಾತುಗಳಿಗೆ ಮನ್ನಣೆ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದು ತಕ್ಷಣ ಅಗತ್ಯ ಕ್ರಮ ಕೈಗೊಳ್ಳುವಂತೆ ಸಚಿವ ಮಧು ಬಂಗಾರಪ್ಪ ಅವರಿಗೆ ಸೂಚಿಸಿದ್ದರು.

ಪ್ರಸ್ತುತ ಶೈಕ್ಷಣಿಕ ವರ್ಷಕ್ಕೆ ಬರಗೂರು ರಾಮಚಂದ್ರಪ್ಪ ಸಮಿತಿಯ ಪಠ್ಯಗಳನ್ನೇ ಮುಂದುವರಿಸಿದರೂ, 2024–25ನೇ ಶೈಕ್ಷಣಿಕ ವರ್ಷದಿಂದ ಪಠ್ಯಗಳಲ್ಲಿ ಮತ್ತಷ್ಟು ಬದಲಾವಣೆ ತರಲು ನಿರ್ಧರಿಸಿರುವ ಸರ್ಕಾರ, ಅದಕ್ಕಾಗಿ ತಿಂಗಳ ಒಳಗೆ ಅಧ್ಯಕ್ಷರು, 9 ಸದಸ್ಯರನ್ನು ಒಳಗೊಂಡ ಹೊಸ ಸಮಿತಿ ರಚಿಸಲು ನಿರ್ಧರಿಸಿದೆ. ಸಮಿತಿಗೆ 6 ತಿಂಗಳು ಕಾಲಾವಕಾಶ ನೀಡಲಾಗುತ್ತಿದೆ.

ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ, ಶೈಕ್ಷಣಿಕ ವಿಷಯಗಳಲ್ಲಿ ರಾಜಕೀಯ ಹಿತಾಸಕ್ತಿ ನುಸುಳದಂತೆ, ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಪಠ್ಯಗಳನ್ನು ರೂಪಿಸದಂತೆ ಪಠ್ಯ ಪರಿಷ್ಕರಣೆಗಾಗಿ ತಜ್ಞರನ್ನು ಒಳಗೊಂಡ ಶಾಶ್ವತ ಆಯೋಗ ರಚನೆಯ ಚಿಂತನೆಯೂ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಚಕ್ರತೀರ್ಥ ಸಮಿತಿಯ ಪ್ರಮುಖ ತಿದ್ದುಪಡಿಗಳು

2019ರಲ್ಲಿ ಅಧಿಕಾರ ಹಿಡಿದ ಬಿಜೆಪಿ ಸರ್ಕಾರ ಬರಗೂರು ಸಮಿತಿ ರೂಪಿಸಿದ್ದ ಪಠ್ಯ ಪುಸ್ತಕಗಳಲ್ಲಿ ‘ಲೋಪ’ಗಳಿವೆ ಎಂದು ಪ್ರತಿಪಾದಿಸಿತ್ತು. ಭಾಷಾ ವಿಷಯಗಳು, ಪರಿಸರ ಅಧ್ಯಯನ ಹಾಗೂ 6ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಗಳಲ್ಲಿ ಇರಬಹುದಾದ ಸೂಕ್ಷ್ಮ–ಸಂಕೀರ್ಣ ವಿಷಯಗಳನ್ನು ಪರಿಶೀಲಿಸಿ ಒಂದು ತಿಂಗಳಲ್ಲಿ ವರದಿ ನೀಡುವಂತೆ 2021ರಲ್ಲಿ ರೋಹಿತ್ ಚಕ್ರತೀರ್ಥ ನೇತೃತ್ವದಲ್ಲಿ ಸಮಿತಿ ರಚಿಸಿತ್ತು.

ಸಮಿತಿಯು ಹತ್ತನೇ ತರಗತಿ ಪಠ್ಯ ಪುಸ್ತಕದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಅವರ ಭಾಷಣ, ವಿದ್ವಾಂಸ ಬನ್ನಂಜೆ ಗೋವಿಂದಾಚಾರ್ಯರ ‘ಶುಕನಾಶನ ಉಪದೇಶ’ ಮತ್ತು ಶತಾವಧಾನಿ ಆರ್. ಗಣೇಶ್ ಅವರ ‘ಶ್ರೇಷ್ಠ ಭಾರತೀಯ ಚಿಂತನೆಗಳು’ ಚಕ್ರವರ್ತಿ ಸೂಲಿಬೆಲೆ ಅವರ ‘ತಾಯಿ ಭಾರತಿಯ ಅಮರಪುತ್ರರು’ ಪಾಠವನ್ನೂ ಸೇರಿಸಿತ್ತು. ಲಂಕೇಶ್ ಅವರ ‘ಮೃಗ ಮತ್ತು ಸುಂದರಿ’ ಸೇರಿದಂತೆ ಹಲವು ಪಠ್ಯಗಳನ್ನು ಕೈಬಿಟ್ಟು ಶಿವಾನಂದ ಕಳವೆ ಅವರ ‘ಸ್ವದೇಶಿ ಸೂತ್ರದ ಸರಳ ಹಬ್ಬ’ ಮತ್ತು ಎಂ. ಗೋವಿಂದ ಪೈ ಅವರ ‘ನಾನು ಪ್ರಾಸ ಬಿಟ್ಟ ಕಥೆ’ ಸೇರ್ಪಡೆ ಮಾಡಿತ್ತು.

ಸಾಮಾಜಿಕ ಕ್ರಾಂತಿಯ ಹರಿಕಾರ ಬ್ರಹ್ಮಶ್ರೀ ನಾರಾಯಣ ಗುರುಗಳ ಜೀವನ ಸಾಧನೆ ಪರಿಚಯಿಸುವ ಸುದೀರ್ಘ ಪಾಠವನ್ನು ಕತ್ತರಿಸಿ, ಒಂದು ಪ್ಯಾರಾಕ್ಕೆ ಇಳಿಸಲಾಗಿತ್ತು. ಜತೆಗೆ ಈ ಪಾಠವನ್ನು ಸಮಾಜ ವಿಜ್ಞಾನದಿಂದ ತೆಗೆದು, ಕನ್ನಡ ವಿಷಯಕ್ಕೆ ಸೇರಿಸಲಾಗಿತ್ತು. 12ನೇ ಶತಮಾನದ ಜಗಜ್ಯೋತಿ ಬಸವೇಶ್ವರ, ದಾಸಶ್ರೇಷ್ಠ ಕನಕ ದಾಸರು, ಡಾ. ಬಿ.ಅಂಬೇಡ್ಕರ್, ರಾಷ್ಟ್ರಕವಿ ಕುವೆಂಪು, ಮೈಸೂರು ಹುಲಿ ಟಿಪ್ಪುಸುಲ್ತಾನ್ ಅವರ ಕುರಿತ ವಿಷಯಗಳಲ್ಲೂ ಹಲವು ಅಂಶಗಳನ್ನು ಕೈಬಿಟ್ಟು, ಕೆಲವು ವಿಷಯಗಳನ್ನು ತಿದ್ದುಪಡಿ ಮಾಡುವ ಮೂಲಕ ಯಡವಟ್ಟು ಮಾಡಲಾಗಿತ್ತು.

ಸಮಿತಿಯ ನಿರ್ಧಾರ ವಿರೋಧಿಸಿ ಸಾಹಿತಿ ದೇವನೂರು ಮಹಾದೇವ, ಜಿ. ರಾಮಕೃಷ್ಣ, ಚಂದ್ರಶೇಖರ ತಾಳ್ಯ, ರೂಪ ಹಾಸನ ಸೇರಿದಂತೆ ಹಲವರು ತಮ್ಮ ಬರಹಗಳನ್ನು ಬಳಸಿಕೊಳ್ಳದಂತೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಕೆಲ ಸಮುದಾಯಗಳು, ಸಂಘಟನೆಗಳು ಪ್ರತಿಭಟನೆಗಳನ್ನೂ ನಡೆಸಿದ್ದವು.

130 ಪುಟ, ₹ 40 ಲಕ್ಷ ಹೆಚ್ಚುವರಿ ವೆಚ್ಚ

ರಾಜ್ಯದ ಸರ್ಕಾರಿ, ಅನುದಾನಿತ ಶಾಲೆಗಳ 57 ಲಕ್ಷ ಮಕ್ಕಳಿಗೆ (ಖಾಸಗಿ ಶಾಲೆಗಳನ್ನು ಹೊರತುಪಡಿಸಿ) 3.40 ಕೋಟಿಗೂ ಹೆಚ್ಚು ಪುಸ್ತಕಗಳು ಮುದ್ರಣಗೊಂಡು ಶಾಲೆಗಳನ್ನು ತಲುಪಿವೆ. ರೋಹಿತ್ ಚಕ್ರತೀರ್ಥ ಸಮಿತಿ 1ರಿಂದ 5ನೇ ತರಗತಿಯವರೆಗಿನ ಪಾಠಗಳಲ್ಲಿ ಯಾವುದೇ ಬದಲಾವಣೆ ಮಾಡಿರಲಿಲ್ಲ. 6ರಿಂದ 10ನೇ ತರಗತಿಯವರೆಗಿನ ಪಠ್ಯಗಳಲ್ಲಿ ಸಮಾಜ ವಿಜ್ಞಾನ ಹಾಗೂ ಕನ್ನಡ ವಿಷಯಗಳ 45 ಪಾಠಗಳನ್ನು ಬದಲಾವಣೆ ಮಾಡಿತ್ತು. 9 ಪಾಠಗಳನ್ನು ಹೊಸದಾಗಿ ಸೇರಿಸಿತ್ತು. ಗಣಿತ, ವಿಜ್ಞಾನ ಸೇರಿದಂತೆ ಯಾವ ಬದಲಾವಣೆಗಳೂ ಇರಲಿಲ್ಲ. ಹಾಗಾಗಿ, ಹಿಂದಿನ ಪಠ್ಯಪುಸ್ತಕಗಳನ್ನೇ ಮುಂದುವರಿಸಿದರೆ ಹೆಚ್ಚಿನ ವಿಷಯಗಳಲ್ಲಿ ವ್ಯತ್ಯಾಸವಾಗುವುದಿಲ್ಲ. ಸುಮಾರು 130 ಪುಟಗಳಷ್ಟು ಮರು ಮುದ್ರಣ ಮಾಡಬೇಕಾಗುತ್ತದೆ. ಅದಕ್ಕೆ ₹ 35 ಲಕ್ಷದಿಂದ ಗರಿಷ್ಠ ₹ 40 ಲಕ್ಷ ವೆಚ್ಚವಾಗಬಹುದು ಎನ್ನುತ್ತಾರೆ ಕರ್ನಾಟಕ ಪಠ್ಯಪುಸ್ತಕ ಸಂಘದ ಹಿರಿಯ ಅಧಿಕಾರಿಗಳು.

ಬೆಳಗಾವಿ- ಖಾನಾಪುರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಅರ್ಧಕ್ಕೆ ನಿಲ್ಲಲು ಕಾರಣವಾದ ದೇವಸ್ಥಾನ

ಗ್ರಾಮಸ್ಥರ ಸಹಮತದಿಂದ ದೇಗುಲ ಸ್ಥಳಾಂತರ


ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಝಾಡ್ ಶಹಾಪುರ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಮಧ್ಯದಲ್ಲಿದ್ದ ಹನುಮಂತ ದೇವಾಲಯವನ್ನು ಶುಕ್ರವಾರ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಗ್ರಾಮಸ್ಥರ ಸಮ್ಮುಖದಲ್ಲಿ ತೆರವು ಮಾಡಲಾಯಿತು.

ಬೆಳಗಾವಿ- ಪಣಜಿ (ಗೋವಾ) ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವೇಳೆ ಈ ದೇವಸ್ಥಾನ ಹೆದ್ದಾರಿಯ ಮಧ್ಯೆ ಇತ್ತು. ದೇವಸ್ಥಾನದ ತೆರವು ಮಾಡಬಾರದು ಎಂದು 3 ವರ್ಷಗಳಿಂದ ಗ್ರಾಮಸ್ಥರು ಪಟ್ಟು ಹಿಡಿದಿದ್ದರು. ಖಾನಾಪುರದವರೆಗೆ ಹೆದ್ದಾರಿ ಕಾಮಗಾರಿ ಮುಗಿದರೂ ದೇಗುಲ ಜಾಗದಲ್ಲಿ ಮಾತ್ರ ಬಾಕಿ ಇತ್ತು.

ಗ್ರಾಮಸ್ಥರ ಬೇಡಿಕೆಯಂತೆ ಕಳೆದ ವರ್ಷವೇ ಜಿಲ್ಲಾಡಳಿತವು ಬೇರೆಡೆ ದೇವಸ್ಥಾನ ನಿರ್ಮಿಸಿತ್ತು. ಅಲ್ಲಿ ಹನುಮಂತನ ಮೂರ್ತಿ ಪ್ರತಿಷ್ಠಾಪನೆ ಮಾತ್ರ ಬಾಕಿ ಇತ್ತು. ಆದರೆ, ಗ್ರಾಮವನ್ನು ರಾಷ್ಟ್ರೀಯ ಹೆದ್ದಾರಿ ಇಬ್ಭಾಗ ಮಾಡಿದ್ದರಿಂದ ಒಂದು ಭಾಗದ ಜನ ಇದನ್ನು ಒಪ್ಪಲಿಲ್ಲ. ಹೀಗಾಗಿ, ಜಿಲ್ಲಾಡಳಿತ ಇನ್ನೊಂದು ಬದಿಗೆ ಮತ್ತೊಂದು ದೇವಸ್ಥಾನವನ್ನೂ ಕಟ್ಟಿಸಿತು. ಇದಕ್ಕೆ ಸ್ಪಂದಿಸಿದ ಗ್ರಾಮಸ್ಥರು ದೇವಸ್ಥಾನ ತೆರವು ಮಾಡಲು ಅನುವು ಮಾಡಿಕೊಟ್ಟರು.

‘ಗ್ರಾಮಸ್ಥರ ಬೇಡಿಕೆ ಈಡೇರಿಸಿದ್ದೇವೆ. ಕಾನೂನು ಪಾಲನೆಯ ಅನಿವಾರ್ಯಗಳ ಬಗ್ಗೆಯೂ ಮನವರಿಕೆ ಮಾಡಿದ್ದೇವೆ. ಗ್ರಾಮಸ್ಥರ ಭಕ್ತಿ– ಭಾವಕ್ಕೆ ತೊಂದರೆ ಆಗದಂತೆ ದೇವಸ್ಥಾನ ತೆರವು ಮಾಡಿದ್ದೇವೆ. ಎಲ್ಲವೂ ಶಾಂತ ರೀತಿ ನೆರವೇರಿದೆ. ಬೆಳಗಾವಿ- ಖಾನಾಪುರ ಮಾರ್ಗದ ರಾಷ್ಟ್ರೀಯ ಹೆದ್ದಾರಿ ಸಂಚಾರಕ್ಕೆ ಇದು ಅನುಕೂಲಕರ’ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.



ಬೆಳಗಾವಿ ತಾಲ್ಲೂಕಿನ ಝಾಡ್ ಶಹಾಪುರದಲ್ಲಿ ಶುಕ್ರವಾರ, ರಾಷ್ಟ್ರೀಯ ಹೆದ್ದಾರಿ ಮಧ್ಯದಲ್ಲಿದ್ದ ಹನುಮಾನ್ ದೇವಸ್ಥಾನವನ್ನು ತೆರವುಗೊಳಿಸುವ ಮುನ್ನ ಪೂಜಾ ಕೈಂಕರ್ಯ ನೆರವೇರಿಸಲಾಯಿತು

ವರ್ಗಾವಣೆ: ಜೂನ್ 30ರವರೆಗೆ ವಿಸ್ತರಣೆ

ಬೆಂಗಳೂರು: 2023–24ನೇ ಸಾಲಿನ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಯ ಅವಧಿಯನ್ನು ಜೂನ್ 30ರವರೆಗೆ ವಿಸ್ತರಿಸಲಾಗಿದೆ.

ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಸರ್ಕಾರಿ ನೌಕರರ ವರ್ಗಾವಣೆಗೆ ಮೇ 30ರಂದು ಆದೇಶ ಹೊರಡಿಸಿತ್ತು. ಜೂನ್ 15ರ ವರೆಗೆ ಅವಕಾಶ ನೀಡಲಾಗಿತ್ತು. ಹಲವು ನೌಕರರ ಸಂಘಟನೆಗಳ ಮನವಿ ಹಿನ್ನೆಲೆಯಲ್ಲಿ ಅವಧಿ ವಿಸ್ತರಿಸಲಾಗಿದೆ. ಉಳಿದಂತೆ ಮೇ 30ರ ಆದೇಶದಲ್ಲಿನ ಎಲ್ಲ ನಿಯಮಗಳು ಅನ್ವಯವಾಗಲಿವೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶದಲ್ಲಿ ಹೇಳಿದೆ.



ರಾಮನಗರ ತಾಲ್ಲೂಕಿನಲ್ಲಿ ನರೇಗಾದಡಿ ಕೊಟ್ಟಿಗೆ ನಿರ್ಮಾಣದ ಬಿಲ್ ಬಿಡುಗಡೆ ವಿಳಂಬವಾದ್ದರಿಂದ ಆಕ್ರೋಶಗೊಂಡ ರೈತ ರವಿ, ಮೈಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಚೇರಿ ಆವರಣದೊಳಗೆ ಶುಕ್ರವಾರ ಮೇಕೆಗಳನ್ನು ಕೂಡಿಹಾಕಿ ಪ್ರತಿಭಟನೆ ನಡೆಸಿದರು


ಶನಿವಾರ, ಜೂನ್ 17, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 167 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮದುವೆ ಎನ್ನುವುದು ಎರಡು ಜೀವಗಳ ನಡುವೆ ಸಂಭ್ರಮ ಹುಟ್ಟಲು ಕಾರಣವಾಗಬೇಕೆ ಹೊರತು ಅವಿವಾಹಿತರನ್ನು ಹಿಂಸಿಸುವ ಅಸ್ತ್ರವಾಗಬಾರದು



ಸೆನ್ಸೆಕ್ಸ್ 63,384 | ನಿಫ್ಟಿ 18,826 | ಚಿನ್ನ (Std. 10g) ₹61,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹74,200 (ಬೆಂಗಳೂರು) | ₹/$ 81.97

ನೆಹರೂ ಹೆಸರಿಗೆ ಕೇಂದ್ರದಿಂದ ಕೊಕ್ 5

ಮಂಜೂರಾದ ಹುದ್ದೆಗಳಲ್ಲಿ 3ನೇ ಒಂದರಷ್ಟು ಖಾಲಿ • ಭರ್ತಿಯೇ ಸವಾಲು

2.58 ಲಕ್ಷ ಹುದ್ದೆ ಖಾಲಿ

• ಚಂದ್ರಹಾಸ ಹಿರೇಮಳಲಿ


ಬೆಂಗಳೂರು: ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ನೀಡಿದ್ದ ಭರವಸೆಯಂತೆ ಖಾಲಿ ಇರುವ 2.58 ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಸವಾಲು ರಾಜ್ಯ ಸರ್ಕಾರದ ಮುಂದಿದೆ.

2023–24ನೇ ಹಣಕಾಸು ವರ್ಷದಲ್ಲಿ ವೇತನಕ್ಕಾಗಿಯೇ ₹ 68 ಸಾವಿರ ಕೋಟಿ ನಿಗದಿ ಮಾಡಲಾಗಿದೆ. 7ನೇ ವೇತನ ಆಯೋಗ ರಚನೆಯ ನಂತರ ನೀಡಿದ ನೌಕರರ ಮೂಲ ವೇತನದ ಶೇ 17ರಷ್ಟು ಮಧ್ಯಂತರ ಪರಿಹಾರವೇ ₹ 10 ಸಾವಿರ ಕೋಟಿಯಾಗಿದೆ. ವೇತನ ಆಯೋಗ ಶಿಫಾರಸಿನ ನಂತರ ಹೆಚ್ಚುವರಿ ವೆಚ್ಚ ₹12 ಸಾವಿರ ಕೋಟಿಯಿಂದ ₹ 18 ಸಾವಿರ ಕೋಟಿವರೆಗೆ ಆಗಬಹುದು ಎಂದು ಅಂದಾಜಿಸಲಾಗಿದೆ. ಅಲ್ಲದೇ, 1.46 ಲಕ್ಷದಷ್ಟಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿ ವೇತನಾನುದಾನ ಮತ್ತು ಪಿಂಚಣಿಗೆ ಹಣ ಒದಗಿಸಬೇಕಿದೆ. ಇದೆಲ್ಲವೂ ಸೇರಿ ನೌಕರರ ವೇತನ ವೆಚ್ಚಗಳು ರಾಜ್ಯದ ಆದಾಯದ ಶೇ 30ಕ್ಕೆ ತಲುಪಿದೆ.

ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ನಿರುದ್ಯೋಗಿಗಳನ್ನು ಸಮಾಧಾನ ಪಡಿಸಬೇಕಾದರೆ ಈಗ ವೆಚ್ಚ ಮಾಡುತ್ತಿರುವ ₹68 ಸಾವಿರ ಕೋಟಿ ಜತೆಗೆ, ಅಂದಾಜು ಇನ್ನೂ ₹25 ಸಾವಿರ ಕೋಟಿಯನ್ನು ಹೊಂದಿಸಬೇಕಾಗುತ್ತದೆ ಎಂದು ಆಡಳಿತ ತಜ್ಞರು ವಿವರಿಸುತ್ತಾರೆ.

ಸದ್ಯ, ವಿವಿಧ ಇಲಾಖೆಗಳಲ್ಲಿ ಮಂಜೂರಾದ ಹುದ್ದೆಗಳಲ್ಲಿ ಮೂರನೇ ಒಂದು ಭಾಗದಷ್ಟು ಖಾಲಿ ಇವೆ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಆಶ್ವಾಸನೆ ನೀಡುತ್ತಾ ಬಂದಿವೆ. ಹಾಗಿದ್ದರೂ, ಎರಡು ದಶಕಗಳಿಂದ ಅಧಿಕ ಸಂಖ್ಯೆಯ ಹುದ್ದೆಗಳು ಖಾಲಿ ಇದ್ದರೂ ಪೂರ್ಣ ಪ್ರಮಾಣದಲ್ಲಿ ನೇಮಕಾತಿಯೇ ಆಗಿಲ್ಲ. ಕೆಲ ಇಲಾಖೆಗಳಲ್ಲಿ ಖಾಲಿ ಇರುವ ಒಂದಷ್ಟು ಸ್ಥಾನಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಆದರೆ, ಖಾಲಿ ಇರುವ ಸಂಖ್ಯೆಗೆ ಹೋಲಿಸಿದರೆ ಅದು ಅತ್ಯಲ್ಪ.

8ನೇ ಪುಟ ನೋಡಿ



ಹುದ್ದೆಗಳ ವಿವರ

7,69,981 ಮಂಜೂರಾದ ಹುದ್ದೆಗಳು

5,11,272 ಕಾರ್ಯನಿರ್ವಹಿಸುತ್ತಿರುವ ನೌಕರರು

2,58,709 ಖಾಲಿ ಹುದ್ದೆಗಳು

ಪ್ರಮುಖ ಇಲಾಖೆಗಳು	ಮಂಜೂರಾದ ಹುದ್ದೆಗಳು	ಕಾರ್ಯನಿರ್ವಹಿಸುತ್ತಿರುವ ನೌಕರರು	ಖಾಲಿ ಹುದ್ದೆಗಳು
ಶಾಲಾ ಶಿಕ್ಷಣ	2,81,862	2,15,803	66,059
ಒಳಾಡಳಿತ	1,26,913	1,03,356	23,557
ಉನ್ನತ ಶಿಕ್ಷಣ	24,785	12,111	12,674
ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ	74,857	40,213	34,644
ಕಂದಾಯ	32,309	21,688	10,621
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	6,940	3,710	3,230
ಆರ್ಥಿಕ	18,892	10,113	8,779
ಕೃಷಿ	10,324	4,008	6,316
ಪಶುಸಂಗೋಪನೆ	18,553	8,581	9,972
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ	10,986	5,248	5,738
ಗ್ರಾಮೀಣಾಭಿವೃದ್ಧಿ	28,223	17,814	10,409
ಸಮಾಜಕಲ್ಯಾಣ	15,177	5,585	9,592

ಶಾಲಾ ಕೊಠಡಿ ಗೋಡೆ ಕುಸಿದು ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ


ವಿಶ್ರುತ್ ಬಳಗಲಿ

ಹುಬ್ಬಳ್ಳಿ: ತಾಲ್ಲೂಕಿನ ಕಿರೇಸೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಿರ್ಮಾಣ ಹಂತದಲ್ಲಿರುವ ಕೊಠಡಿಯ ಗೋಡೆ ಶುಕ್ರವಾರ ಕುಸಿದು ಮೂರನೇ ತರಗತಿ ವಿದ್ಯಾರ್ಥಿ ವಿಶ್ರುತ್ ಪ್ರಕಾಶ ಬಳಗಲಿ (9) ಮೃತಪಟ್ಟಿದ್ದಾನೆ. ಇನ್ನೊಬ್ಬ ವಿದ್ಯಾರ್ಥಿ ಪ್ರಜ್ವಲ್ ನಾಗಾವಿಗೆ ಗಂಭೀರ ಗಾಯಗಳಾಗಿವೆ.

ನಿರ್ಮಾಣ ಹಂತದ ಕಟ್ಟಡದ ಆವರಣದಲ್ಲಿ ಮಕ್ಕಳು ಆಟವಾಡುತ್ತಿದ್ದ ವೇಳೆ ಆಸರೆಗೆ ಇದ್ದ ಕಟ್ಟಿಗೆ ಕಂಬವು ಸರಿದ ಕೂಡಲೇ ಗೋಡೆ ಕುಸಿದಿದೆ. ವಿಶ್ರುತ್ ತಲೆ ಮೇಲೆ ಇಟ್ಟಿಗೆಗಳು ಬಿದ್ದು, ರಕ್ತಸ್ರಾವವಾಗಿದೆ. ಆತನಿಗೆ ಸ್ಥಳೀಯ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಕೊಡಿಸಿ, ಕಿಮ್ಸ್‌ಗೆ ಕರೆದೊಯ್ದಲಾಯಿತು. ಆದರೆ ಪ್ರಯೋಜನ ವಾಗಲಿಲ್ಲ' ಎಂದು ಗ್ರಾಮೀಣ ಠಾಣೆಯ ಪೊಲೀಸರು ತಿಳಿಸಿದ್ದಾರೆ.

'ಗೋಡೆ ಕುಸಿಯಲು ಕಳಪೆ ಕಾಮಗಾರಿಯೇ ಕಾರಣ. ವಿಶ್ರುತ್ ಕುಟುಂಬಕ್ಕೆ ₹25 ಲಕ್ಷ ಪರಿಹಾರ ಕೊಡಬೇಕು. ಅಲ್ಲಿಯವರೆಗೆ ಶವವನ್ನು ಒಯ್ಯುವುದಿಲ್ಲ' ಎಂದು ಗ್ರಾಮಸ್ಥರು ಕಿಮ್ಸ್ ಶವಾಗಾರದ ಎದುರು ಪ್ರತಿಭಟನೆ ನಡೆಸಿದರು.

ಪರಿಹಾರದ ಕುರಿತು ಅಧಿಕಾರಿಗಳು ಭರವಸೆ ನೀಡಿದ ಬಳಿಕ ಗ್ರಾಮಸ್ಥರು ಪ್ರತಿಭಟನೆ ಹಿಂಪಡೆದರು.

'ಕಾಮಗಾರಿ ಗುಣಮಟ್ಟದ ಬಗ್ಗೆ ಎಂಜಿನಿಯರ್ ಕಡೆಯಿಂದ ಪರೀಕ್ಷಿಸಿ, ವರದಿ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗುವುದು' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಎ.ಎಸ್. ಕೆಳದಿಮಠ ಹೇಳಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



₹150 ಕೋಟಿ ಅಕ್ರಮ

ಆರ್‌ಆರ್ ನಗರ: ಲೋಕಾಯುಕ್ತದಿಂದ ಪ್ರಾಥಮಿಕ ತನಿಖೆ

• ಆರ್. ಮಂಜುನಾಥ್

ಬೆಂಗಳೂರು: ರಾಜರಾಜೇಶ್ವರಿ ನಗರ ವಲಯದಲ್ಲಿ ಆಯುಕ್ತರ ಅನುಮತಿಯೇ ಇಲ್ಲದೆ ತುರ್ತು ಕಾಮಗಾರಿಗಳಿಗೆ ₹7.77 ಕೋಟಿಯನ್ನು ಪಾವತಿಸಿರುವುದು ಲೋಕಾಯುಕ್ತ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

2014ರಿಂದ 2018ರವರೆಗೆ ಡಿ.ಸಿ. ಬಿಲ್‌ಗಳ ಮೂಲಕ ₹196 ಕೋಟಿ ಮೊತ್ತದ ಕಾಮಗಾರಿಗಳ ಲೆಕ್ಕ ತೋರಿಸಲಾಗಿದೆ. ಈ ಮೊತ್ತದ ಪೈಕಿ ಕಾಮಗಾರಿಗಳನ್ನು ನಡೆಸದಿದ್ದರೂ ₹150 ಕೋಟಿ ಹಣ ಪಾವತಿಸಲಾಗಿದೆ ಎಂದು ದೂರಲಾಗಿತ್ತು. ಈ ಬಗ್ಗೆ ತನಿಖೆ ನಡೆಸಿದ ಲೋಕಾಯುಕ್ತ ತನಿಖಾಧಿಕಾರಿಗಳಿಗೆ ಹಗರಣದ ಸಾಕ್ಷ್ಯ ದೊರೆತಿದ್ದು, ಸಂಪೂರ್ಣ ದಾಖಲಾತಿಗಳ ಪತ್ತೆಗೆ ಕಾರ್ಯಾಚರಣೆ ಶುರು ಮಾಡಿದ್ದಾರೆ.

ಬಿಬಿಎಂಪಿಯ ಆಡಳಿತ ಪಕ್ಷ ಮಾಜಿ ನಾಯಕ ರಮೇಶ್ ಎನ್.ಆರ್. ಅವರು 2018ರ ಜ.23ರಂದು ನೀಡಿದ್ದ ದೂರಿನನ್ವಯ, ಲೋಕಾಯುಕ್ತ ತನಿಖಾಧಿಕಾರಿ ಅವರು ರಾಜರಾಜೇಶ್ವರಿ ನಗರ ಜಂಟಿ ಆಯುಕ್ತರಿಗೆ ಮೇ 17ರಂದು ಪತ್ರ ಬರೆದಿದ್ದಾರೆ. 16 ಎಂಜಿನಿಯರ್‌ಗಳು ನೀಡಿರುವ ಅನುಮೋದನೆಯ ಕಡತಗಳನ್ನು ದೃಢೀಕರಿಸಿ ನೀಡುವಂತೆ ಕೋರಿದ್ದಾರೆ.

ಯಾರ ಮೇಲೆ ದೂರು?

- ವೀರಭದ್ರಪ್ಪ, ಜಂಟಿ ಆಯುಕ್ತ
- ತಿಪ್ಪೇಸ್ವಾಮಿ, ಜಂಟಿ ಆಯುಕ್ತ
- ನಾಗರಾಜ್, ಸಿಇ
- ಗೋವಿಂದರಾಜ್, ಸಿಇ,
- ಇದಯ ವೆಂಡನ್, ಇಇ
- ರುದ್ರವಾಡಿ, ಇಇ
- ಶ್ರೀನಿವಾಸ್, ಇಇ
- ಬಸವರಾಜು, ಎಇಇ
- ಭಾಸ್ಕರ್, ಎಇಇ
- ನಂಜಪ್ಪ, ಎಇಇ
- ವೀರಪ್ಪ, ಎಇಇ
- ಡಿ.ಸಿ. ಉಮೇಶ್,ಇಇ
- ಲೋಕೇಶ್, ಇಇ
- ವೆಂಕಟೇಶ್, ಎಇಇ
- ವಿಜಯಕುಮಾರ್, ಎಇಇ
- ಶಶಿಕುಮಾರ್, ಎಇಇ

ಪತ್ರದ ಸಾರಾಂಶ: ವಾರ್ಡ್‌ಗಳ ವ್ಯಾಪ್ತಿಯಲ್ಲಿ ಅನಿರೀಕ್ಷಿತ ಸಂದರ್ಭಗಳಲ್ಲಿ ಆಯಾ ವಿಭಾಗಗಳ ಕಾರ್ಯಪಾಲಕ ಎಂಜಿನಿಯರ್, ಆಯಾ ವಲಯಗಳ ಮುಖ್ಯ ಎಂಜಿನಿಯರ್ ಮತ್ತು ಅಂತಿಮವಾಗಿ ಜಂಟಿ ಆಯುಕ್ತರ ಅನುಮೋದನೆ ಪಡೆದ ನಂತರ ತುರ್ತು ಕಾಮಗಾರಿ ಮಾಡಲಾಗುತ್ತದೆ. ಈ ತುರ್ತು ಕಾರ್ಯಗಳಿಗೆ ಸಂಬಂಧಿಸಿದ ಅಂದಾಜು ಪಟ್ಟಿಯಲ್ಲಿರುವಂತೆ ಕೆಲಸಗಳು ಪೂರ್ಣಗೊಂಡ ನಂತರ ಹಣ ಬಿಡುಗಡೆ ಮಾಡುವ ಪ್ರಕ್ರಿಯೆಗೆ ಡಿ.ಸಿ. ಬಿಲ್ (ಡೀಟೈಲ್ಡ್ ಕಂಟಿಂಜೆನ್ಸಿ ಬಿಲ್) ಎಂದು ಕರೆಯಲಾಗುತ್ತದೆ.

ನಿಯಮಾನುಸಾರ ಡಿ.ಸಿ ಬಿಲ್ ಮೊತ್ತ ₹1 ಲಕ್ಷಕ್ಕಿಂತ ಕಡಿಮೆ ಇರಬೇಕು. ಅದಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ ಕೆಟಿಪಿಪಿ ಕಾಯ್ದೆ ಅನ್ವಯ ಟೆಂಡರ್ ಆಹ್ವಾನಿಸಬೇಕು. ಆದರೆ, ರಾಜರಾಜೇಶ್ವರಿನಗರ ವಲಯದ ವ್ಯಾಪ್ತಿಯಲ್ಲಿ ರಾಜರಾಜೇಶ್ವರಿ ನಗರ ಹಾಗೂ ಯಶವಂತಪುರ ವಿಧಾನಸಭೆ ಕ್ಷೇತ್ರಗಳಿಗೆ ಸೇರಿದ 14 ವಾರ್ಡ್‌ಗಳಿವೆ.

8ನೇ ಪುಟ ನೋಡಿ

ಒಳ ಪುಟಗಳಲ್ಲಿ

ಮರಳು ತುಂಬಿದ ಟ್ರ್ಯಾಕ್ಟರ್ ಹಾಯಿಸಿ ಕಾನ್‌ಸ್ಟೆಬಲ್ ಕೊಲೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಹುಲ್ಲೂರು ಬಳಿ ಭೀಮಾ ನದಿಯ ಪಕ್ಕದಲ್ಲಿದ್ದ ಮರಳನ್ನು ಗುರುವಾರ ರಾತ್ರಿ ಅಕ್ರಮವಾಗಿ ಸಾಗಿಸುತ್ತಿದ್ದ ಟ್ರ್ಯಾಕ್ಟರ್ ಅಡ್ಡಗಟ್ಟಲು ಮುಂದಾದ ನೆಲೋಗಿ ಠಾಣೆ ಕಾನ್‌ಸ್ಟೆಬಲ್ ಮಯೂರ ಭೀಮು ಚವ್ಹಾಣ (51) ಮೇಲೆ ಚಾಲಕ ಟ್ರ್ಯಾಕ್ಟರ್ ಹಾಯಿಸಿ ಕೊಲೆ ಮಾಡಿದ್ದಾನೆ.

ನಾರಾಯಣಪುರ ನಿವಾಸಿ, ಟ್ರ್ಯಾಕ್ಟರ್ ಚಾಲಕ ಸಿದ್ದಣ್ಣ ಕರ್ಜಗಿಯನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. 'ಲೋಕೋಪಯೋಗಿ ಇಲಾಖೆಯ ವಶದಲ್ಲಿದ್ದ ಮರಳನ್ನು ಸಿದ್ದಣ್ಣ ಕರ್ಜಗಿ ಅಕ್ರಮವಾಗಿ ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಹೋಗುತ್ತಿದ್ದನು. ರಾತ್ರಿ ಗಸ್ತಿನಲ್ಲಿದ್ದ ಮಯೂರ ಚವ್ಹಾಣ ಅವರು ಸಿದ್ದಣ್ಣನ ಟ್ರ್ಯಾಕ್ಟರ್ ಅನ್ನು ಬೈಕ್‌ನಲ್ಲಿ ಹಿಂಬಾಲಿಸಿದರು. ಪೊಲೀಸರು ಬೆನ್ನಟ್ಟಿರುವುದನ್ನು ಅರಿತ ಸಿದ್ದಣ್ಣ ಟ್ರ್ಯಾಕ್ಟರ್ ವೇಗವನ್ನು ಹೆಚ್ಚಿಸಿ ಪರಾರಿಯಾಗಲು ಮುಂದಾದನು. ಆಗ ಅಡ್ಡಗಟ್ಟಲು ಯತ್ನಿಸಿದ ಮಯೂರ ಅವರ ಮೇಲೆಯೇ ಟ್ರ್ಯಾಕ್ಟರ್ ಹಾಯಿಸಿ ಕೊಲೆ ಮಾಡಿದ್ದಾನೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ 'ಪ್ರಜಾವಾಣಿ'ಗೆ ತಿಳಿಸಿದರು.


ಮಯೂರ ಭೀಮು ಚವ್ಹಾಣ


ಸಿದ್ದಣ್ಣ ಕರ್ಜಗಿ

2019ರಲ್ಲಿ ಮರಳು ತೆಗೆಯಲು ಗುತ್ತಿಗೆ ಪಡೆದಿದ್ದ ಗುತ್ತಿಗೆದಾರ ಶಿವಪ್ಪ ಮರಡಿ ಸರ್ಕಾರ ಅನುಮತಿ ನೀಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದ ಮರಳನ್ನು ಭೀಮಾ ನದಿಯಿಂದ ಸಂಗ್ರಹಿಸಿದ್ದರು. ಹೀಗಾಗಿ, ಜಿಲ್ಲಾಡಳಿತ ಗುತ್ತಿಗೆದಾರನಿಗೆ ₹80 ಲಕ್ಷ ದಂಡ ವಿಧಿಸಿತ್ತು. ಈ ಆದೇಶ ಪ್ರಶ್ನಿಸಿ ಗುತ್ತಿಗೆದಾರ ನ್ಯಾಯಾಲಯಕ್ಕೆ ಹೋಗಿದ್ದರು. ಜಿಲ್ಲಾಡಳಿತದ ತೀರ್ಮಾನವನ್ನು ನ್ಯಾಯಾಲಯ ಎತ್ತಿ ಹಿಡಿದಿತ್ತು. ಆದರೆ, ಗುತ್ತಿಗೆದಾರ ದಂಡದ ಮೊತ್ತವನ್ನು ಪಾವತಿಸಿರಲಿಲ್ಲ. ಹೀಗಾಗಿ, ಅದಾಗಲೇ ಸಂಗ್ರಹಿಸಿದ್ದ ಮರಳನ್ನು ಜಪ್ತಿ ಮಾಡಿ ಲೋಕೋಪಯೋಗಿ ಇಲಾಖೆಯ ವಶಕ್ಕೆ ನೀಡಿದ್ದೆವು ಎಂದು ಜಿಲ್ಲಾಧಿಕಾರಿ ಯಶವಂತ ವಿ. ಗುರುಕರ್ ಮಾಹಿತಿ ನೀಡಿದರು.

ಮಾಹಿತಿ ಪಡೆದ ಸಚಿವ : ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಘಟನೆಯ ಮಾಹಿತಿ ಪಡೆದಿದ್ದಾರೆ. ಕುಟುಂಬದವರಿಗೆ ಸಾಂತ್ವನ ಹೇಳಿರುವ ಸಚಿವರು, ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

'ಘಟನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜೊತೆ ಮಾತನಾಡಿದ್ದು, ತನಿಖೆಗೆ ಆದೇಶಿಸಿದ್ದೇನೆ' ಎಂದು ಪ್ರಿಯಾಂಕ್ ಹೇಳಿದ್ದಾರೆ.

ಮೂರು ವರ್ಷಗಳ ಹಿಂದೆ ಜಿಲ್ಲೆಯ ಅಫಜಲಪುರ ತಾಲ್ಲೂಕಿನಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಸಾಗಾಟವನ್ನು ತಡೆಯಲು ಮುಂದಾಗಿದ್ದ ತಹಶೀಲ್ದಾರ್ ಶಶಿಕಲಾ ಪಾದಗಟ್ಟಿ ಅವರ ಮೇಲೆ ದುಷ್ಕರ್ಮಿಗಳು ಟ್ರ್ಯಾಕ್ಟರ್ ಹಾಯಿಸಲು ಯತ್ನಿಸಿದ್ದರು. ಶಶಿಕಲಾ ಅವರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದರು.

ವರ್ಷದ ಹಿಂದೆ ಪೊಲೀಸ್ ಸಿಬ್ಬಂದಿಯ ಮೇಲೆ ಮರಳು ತುಂಬಿದ ವಾಹನ ಹಾಯಿಸಿದ್ದರು. ಆಗ ಪೊಲೀಸ್ ಸಿಬ್ಬಂದಿಯ ಕಾಲಿಗೆ ಗಾಯವಾಗಿತ್ತು.

ಕಟ್ಟಡ ತೆರವು ಸ್ಥಗಿತ: ಎಸ್‌.ಎಂ. ರಸ್ತೆಯಿಂದ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಕಲ್ಪಿಸುವ ಮಾರ್ಗ

ನಿರ್ಮಾಣವಾಗದ 'ಅಂಡರ್‌ಪಾಸ್'

• ಆದಿತ್ಯ ಕೆ.ಎ.

ಬೆಂಗಳೂರು: ನಗರದಲ್ಲೇ ಅತ್ಯಂತ ದಟ್ಟಣೆ ಪ್ರದೇಶಗಳಲ್ಲಿ ಒಂದಾಗಿರುವ ಜಾಲಹಳ್ಳಿ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ನಿರ್ಮಾಣಕ್ಕೆಂದು ಎಸ್‌ಎಂ ರಸ್ತೆಯ ಎರಡೂ ಬದಿಯಲ್ಲೂ ನಡೆಯುತ್ತಿದ್ದ ಕಟ್ಟಡ ತೆರವು ಕಾರ್ಯವು ಕಳೆದ ಕೆಲವು ತಿಂಗಳಿಂದ ಸ್ಥಗಿತಗೊಂಡಿದ್ದು, ಕಾಮಗಾರಿ ಮತ್ತಷ್ಟು ವಿಳಂಬವಾಗುವ ಸಾಧ್ಯತೆಯಿದೆ.

ವಿಧಾನಸಭೆ ಚುನಾವಣೆಯ ದಿನಾಂಕ ಘೋಷಣೆಗೂ ಮುನ್ನವೇ ಎಸ್‌.ಎಂ.ರಸ್ತೆಯ ಬಲಬದಿಯಲ್ಲಿ ಕಟ್ಟಡ ತೆರವು ಕಾರ್ಯವು ವೇಗ ಪಡೆದುಕೊಂಡಿತ್ತು. ಚುನಾವಣೆ ವೇಳೆ ಸ್ಥಗಿತಗೊಂಡಿದ್ದ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ. ಈ ಜಂಕ್ಷನ್ ಸದಾ ವಾಹನಗಳು ಹಾಗೂ ಜನರಿಂದ ಗಿಜಿಗುಡುತ್ತದೆ. ಹೆದ್ದಾರಿ ದಾಟಲು ಸರಿಯಾದ ವ್ಯವಸ್ಥೆಯಿಲ್ಲದೇ ಚಾಲಕರು ಹಾಗೂ ಪಾದಚಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಲವು ವರ್ಷದಿಂದಲೂ ಈ ಸಮಸ್ಯೆಗೆ ಮುಕ್ತಿಯೇ ಸಿಕ್ಕಿಲ್ಲ!

ರಾಷ್ಟ್ರೀಯ ಹೆದ್ದಾರಿ, ಪೀಣ್ಯ ಕೈಗಾರಿಕಾ ಪ್ರದೇಶ, ಸುಂಕದಕಟ್ಟೆ, ಯಲಹಂಕ, ದೇವನಹಳ್ಳಿ ಭಾಗದಿಂದ ಬರುವ ವಾಹನಗಳಿಂದಾಗಿ ಜಾಲಹಳ್ಳಿ ಜಂಕ್ಷನ್ ಸದಾ ಗಿಜಿಡುತ್ತಿರುತ್ತದೆ. ವಾಹನಗಳು ಸಿಗ್ನಲ್‌ಗಳಲ್ಲೇ ಕಾಯುವ ಸ್ಥಿತಿಯಿದೆ. ಅಂಡರ್‌ಪಾಸ್ ಕಾಮಗಾರಿ ವಿಳಂಬದಿಂದ ದಿನದ 24 ಗಂಟೆಯೂ ದಟ್ಟಣೆ ಇರುತ್ತದೆ. ರಾತ್ರಿ ವೇಳೆ ನೂರಾರು ಲಾರಿಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ. ರಸ್ತೆಯ ಮತ್ತೊಂದು ಭಾಗಕ್ಕೆ ತೆರಳುವ ಪಾದಚಾರಿಗಳು ಅಪಾಯಕ್ಕೆ ಸಿಲುಕುತ್ತಿದ್ದಾರೆ. ಅಪಘಾತಗಳು ಸಂಭವಿಸುತ್ತಿವೆ. ಮಧ್ಯರಾತ್ರಿ ಒಂದು ಗಂಟೆವರೆಗೂ ಸಂಚಾರ ಪೊಲೀಸರು ಕರ್ತವ್ಯ ನಿರ್ವಹಿಸಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ.

ಜಾಲಹಳ್ಳಿಯ ಎಸ್‌.ಎಂ. ರಸ್ತೆಯಿಂದ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ (ಜಾಲಹಳ್ಳಿ ಕ್ರಾಸ್) ಸಂಪರ್ಕ ಕಲ್ಪಿಸುವ ಅಂಡರ್‌ಪಾಸ್ ಕಾಮಗಾರಿಗೆ 2019ರಲ್ಲೇ ಯೋಜನೆ ರೂಪಿಸಲಾಗಿತ್ತು. 'ಗ್ರೇಡ್ ಸಪರೇಟರ್' ಹೆಸರಿನ ಕಾಮಗಾರಿಗೆ ₹ 57 ಕೋಟಿ ನಿಗದಿಪಡಿಸಿ ಟೆಂಡರ್ ಕರೆಯಲಾಗಿತ್ತು. 24 ತಿಂಗಳ ಕಾಲಾವಧಿ ನಿಗದಿ ಪಡಿಸಲಾಗಿತ್ತು. ಕಳೆದ ವರ್ಷ ಕಾಮಗಾರಿ ಆರಂಭಿಸಿದ್ದರೂ ಒಂದು ಬದಿಯಲ್ಲಿ ನಾಲ್ಕು ಕಟ್ಟಡ ತೆರವು ಬಿಟ್ಟರೆ ಬೇರೆ ಕೆಲಸಗಳೂ ಪ್ರಗತಿ ಕಂಡಿಲ್ಲ ಎಂದು ಸ್ಥಳೀಯರು ಆಪಾದಿಸಿದ್ದಾರೆ.

ಈ ಜಂಕ್ಷನ್ ರಾಜ್ಯದ ಹಲವು ಜಿಲ್ಲೆಗಳಿಗೆ ಸಂಪರ್ಕ ಕೊಂಡಿ. ಹಗಲು ರಾತ್ರಿಯೆನ್ನದೇ ಬಸ್‌ಗಳು, ಲಾರಿಗಳು ಬೇರೆ ಬೇರೆ ಪ್ರದೇಶಕ್ಕೆ ತೆರಳುತ್ತವೆ. ತುಮಕೂರು, ಹಾಸನ, ಹುಬ್ಬಳ್ಳಿ–ಧಾರವಾಡ, ದಾವಣಗೆರೆ, ಚಿತ್ರದುರ್ಗ, ಮಂಗಳೂರು, ಚಿಕ್ಕಮಗಳೂರು ಕಡೆಗೆ ತೆರಳುವ ಪ್ರಯಾಣಿಕರು ಈ ಜಂಕ್ಷನ್‌ಗೆ ಬರುತ್ತಾರೆ. ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ ಕೆಲಸಕ್ಕೆ ತೆರಳುವ ಕಾರ್ಮಿಕರು ಬಿಎಂಟಿಸಿ ಬಸ್ ಹತ್ತಲು ಇದೇ ಜಂಕ್ಷನ್‌ಗೆ ಬರುತ್ತಾರೆ. ಅವರಿಗೆ ಸುರಕ್ಷಿತವಾಗಿ ನಿಲ್ಲಲು ಸ್ಥಳದ ಕೊರತೆ ಇದೆ. ತುಮಕೂರು ರಸ್ತೆಯ ಒಂದು ಬದಿಯಲ್ಲಿ ಬ್ಯಾರಿಕೇಡ್ ಹಾಕಿದ್ದರೂ ಜನರಿಗೆ ಭಯ ಕಾಡುತ್ತಿದೆ.

'ಈ ಜಂಕ್ಷನ್‌ನಲ್ಲಿ ಶೌಚಾಲಯ ನಿರ್ಮಿಸಲು ಜಾಗವಿಲ್ಲ. ಹೊಸ ಸರ್ಕಾರಕ್ಕೆ ಈ ಸಮಸ್ಯೆ ತಿಳಿಸಿ ಸ್ಥಗಿತವಾಗಿರುವ ಕಾಮಗಾರಿ ಆರಂಭಿಸಲಾಗುವುದು' ಎಂದು ಶಾಸಕ ಎಸ್‌.ಮುನಿರಾಜು 'ಪ್ರಜಾವಾಣಿ'ಗೆ ತಿಳಿಸಿದರು.



ಅಂಡರ್‌ಪಾಸ್ ಕಾಮಗಾರಿಗೆ ಕಟ್ಟಡ ತೆರವು ಮಾಡಲಾಗಿದ್ದ ಸ್ಥಳ



ಈ ಜಂಕ್ಷನ್‌ನಲ್ಲಿ ಅಂಡರ್‌ಪಾಸ್‌ನ ಅಗತ್ಯವಿದೆ. ರಾತ್ರಿ ಜನರು ರಸ್ತೆ ದಾಟಲು ಭಯ ಪಡುತ್ತಿದ್ದಾರೆ. ಮುಂದಿನ ಅಧಿವೇಶನದಲ್ಲಿ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸುತ್ತೇನೆ.

ಎಸ್‌.ಮುನಿರಾಜು, ಶಾಸಕ

ಪರಿಹಾರಕ್ಕಾಗಿ ಕೋರ್ಟ್ ಮೊರೆ

ಕೆಲವರು ಹೆಚ್ಚಿನ ಪರಿಹಾರ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಮೆಟ್ರೊ ಕಾಮಗಾರಿಯಂತೆಯೇ 'ಗ್ರೇಡ್ ಸಪರೇಟರ್' ಕಾಮಗಾರಿಗೆ ಸ್ವಾಧೀನ ಮಾಡಿಕೊಳ್ಳುವ ಜಾಗಕ್ಕೂ ಪರಿಹಾರ ನೀಡಬೇಕು. ಕಟ್ಟಡದ ಮಾಲೀಕರಿಗೆ, ಬಾಡಿಗೆದಾರರಿಗೂ ಪರಿಹಾರ ನೀಡುವಂತೆ ವ್ಯಾಪಾರಿಗಳು ಪಟ್ಟು ಹಿಡಿದಿದ್ದಾರೆ. ಕಾಮಗಾರಿ ವಿಳಂಬಕ್ಕೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕ್ಷೇತ್ರದ ಹಗ್ಗಜಗ್ಗಾಟ

ಎಸ್‌ಎಂ ರಸ್ತೆಯ ಎಡಭಾಗದ ಫುಟ್‌ಪಾತ್ ದಾಸರಹಳ್ಳಿ ಕ್ಷೇತ್ರಕ್ಕೆ ಸೇರಿದರೆ, ಬಲಬದಿ ಫುಟ್‌ಪಾತ್ ರಾಜರಾಜೇಶ್ವರಿ ಕ್ಷೇತ್ರಕ್ಕೆ ಒಳಪಡುತ್ತಿದೆ. ಎರಡರ ಅಭಿವೃದ್ಧಿಯಾಗುತ್ತಿಲ್ಲ. ಗಡಿ ಸಮಸ್ಯೆ ಎದುರಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಸುದ್ದಿ 2 ನಿಮಿಷ

ರೇವಾ ವಿ.ವಿ: ಪ್ಲಾಸ್ಟಿಕ್‌ನಿಂದ ನದಿ ಮುಕ್ತಗೊಳಿಸಲು ಎಐ ಹ್ಯಾಕಥಾನ್

ಬೆಂಗಳೂರು: ಪ್ಲಾಸ್ಟಿಕ್‌ನಿಂದ ನದಿಗಳನ್ನು ಮುಕ್ತಗೊಳಿಸಲು ರೇವಾ ವಿಶ್ವವಿದ್ಯಾಲಯವು ಕಿಂಡ್ರಿಲ್ ಸಹಯೋಗದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಹ್ಯಾಕಥಾನ್‌ಗೆ ಚಾಲನೆ ನೀಡಿದೆ.

ಡ್ರೋನ್ ಚಿತ್ರಗಳ ಸಹಾಯದಿಂದ ನದಿ ನೀರಿನಲ್ಲಿ ಪ್ಲಾಸ್ಟಿಕ್ ಅನ್ನು ಪತ್ತೆ ಮಾಡುವುದು, ವರ್ಗೀಕರಿಸುವುದು ಹಾಗೂ ಅವುಗಳನ್ನು ಪ್ರತ್ಯೇಕಗೊಳಿಸುವುದು ಈ ಹ್ಯಾಕಥಾನ್ ಉದ್ದೇಶವಾಗಿದೆ ಎಂದು ವಿ.ವಿ ತಿಳಿಸಿದೆ.

2021ರ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ ವರದಿಯ ಪ್ರಕಾರ 17 ಮಿಲಿಯನ್ ಮೆಟ್ರಿಕ್ ಟನ್‌ಗಳಿಗಿಂತ ಹೆಚ್ಚು ಪ್ಲಾಸ್ಟಿಕ್ ಈ ವಿಶ್ವದ ನದಿಗಳು ಮತ್ತು ಸಾಗರಗಳನ್ನು ಪ್ರವೇಶಿಸಿದೆ. ಇದು ಸಮುದ್ರ ತ್ಯಾಜ್ಯದ ಶೇ 85ರಷ್ಟು ಇದೆ. ಸಾಗರದ ಜೀವ ಪ್ರಭೇದಗಳು ಪ್ಲಾಸ್ಟಿಕ್ ಅವಶೇಷಗಳನ್ನು ಸೇವಿಸುತ್ತಿವೆ. ಜಲಚರಗಳು ಗಾಯಗೊಳ್ಳುವುದು ಹೆಚ್ಚಿದೆ. ಅವುಗಳ ಸಾವಿಗೂ ಕಾರಣವಾಗುತ್ತಿದೆ ಎಂದು ವಿ.ವಿ ತಿಳಿಸಿದೆ.

ರೇವಾ ವಿ.ವಿ ಕುಲಪತಿ ಡಾ.ಪಿ. ಶ್ಯಾಮರಾಜು ಮಾತನಾಡಿ, 'ಈ ಹ್ಯಾಕಥಾನ್ ಮೂಲಕ ನಮ್ಮ ಜಲಮೂಲಗಳ ಮೇಲೆ ಪ್ಲಾಸ್ಟಿಕ್ ಅಪಾಯವನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಎಐ ನೆರವು ಪಡೆಯಲಾಗುತ್ತಿದೆ' ಎಂದು ತಿಳಿಸಿದರು.

ಕಿಂಡ್ರಿಲ್ ಇಂಡಿಯಾದ ಡೇಟಾ ಮತ್ತು ಎಐ ಸೇವೆಗಳ ಉಪಾಧ್ಯಕ್ಷ ನವೀನ್ ಕಾಮತ್ ಮಾತನಾಡಿ, 'ಪ್ಲಾಸ್ಟಿಕ್ ತ್ಯಾಜ್ಯ ಪತ್ತೆಗಾಗಿ ಈ ಹ್ಯಾಕಥಾನ್ ಆಯೋಜಿಸಲಾಗಿದೆ. ರೇವಾ ವಿವಿ ಜತೆಗೆ ಕೆಲಸ ಮಾಡಲು ಹೆಮ್ಮೆ ಎನಿಸುತ್ತದೆ' ಎಂದು ಹೇಳಿದರು.



ಲಾಸ್ಟಿಕ್ ಫಿಶರ್ ಇಂಡಿಯಾದ ನಿರ್ದೇಶಕ ಹರೀಶ್ ಶೆಣೈ ಹಾಗೂ ಡಾ.ಜೆ.ಬಿ.ಸಿಂಹ ಇದ್ದರು.

ಸವಾಲು ಸೃಷ್ಟಿಸಲಿರುವ ಕೃತಕ ಬುದ್ಧಿಮತ್ತೆ: ಎಸ್‌.ಎಸ್‌. ಅಯ್ಯಂಗಾರ್

ಬೆಂಗಳೂರು: 'ಇತ್ತೀಚೆಗೆ ಕೃತಕ ಬುದ್ಧಿಮತ್ತೆಯ ಉಪಯೋಗ ಹೆಚ್ಚಾಗಿದೆ. ಮಾನವನ ವಿಕಾಸಕ್ಕೆ ಮತ್ತು ಉದ್ಯೋಗದ ನೆಲೆಯಲ್ಲಿ ಇದು ಸವಾಲನ್ನು ಒಡ್ಡಲಿದೆ' ಎಂದು ಶಿಕ್ಷಣ ತಜ್ಞ ಎಸ್‌.ಎಸ್‌. ಅಯ್ಯಂಗಾರ್ ಆತಂಕ ವ್ಯಕ್ತಪಡಿಸಿದರು.

ಚಾಣಕ್ಯ ವಿಶ್ವವಿದ್ಯಾಲಯವು ಬೆಂಗಳೂರಿನ ಯುವ ಪಥದಲ್ಲಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಮಾಲಿಕೆಯಲ್ಲಿ ಅವರು ಮಾತನಾಡಿದರು.

ಚಾಟ್ ಜಿಪಿಟಿ ಮನುಷ್ಯನ ಎಲ್ಲ ಕಾರ್ಯಗಳಿಗೂ ಪ್ರತಿಸ್ಪಂದನೆ ನೀಡುತ್ತಿದೆ. ವಿಶ್ವದಾದ್ಯಂತ ಇದರ ಉಪಯೋಗ ಹರಡಲಿದ್ದು, ಅದು ಒಡ್ಡುವ ಸವಾಲುಗಳನ್ನು ಗಮನಿಸಬೇಕು ಎಂದು ಎಚ್ಚರಿಸಿದರು.

ಹವಾಮಾನ ವೈಪರೀತ್ಯ, ಯಂತ್ರ ಚಾಲನೆ ಹಾಗೂ ಮಾಹಿತಿ ನೀಡಲು ಹೆಚ್ಚು ಬಳಕೆಯಾಗಲಿದೆ. ಚಾಟ್ ಜಿಪಿಟಿ ತನ್ನ ವಿಷಯ ಸಂಗ್ರಹವನ್ನು ಲಭ್ಯವಿರುವ ಎಲ್ಲ ಸರ್ಚ್ ಎಂಜಿನ್‌ಗಳ ಮೂಲಕ ಪಡೆದುಕೊಂಡು ಬಳಕೆದಾರನ ಬೆರಳಂಚಿಗೆ ತಲುಪಿಸಲಿದೆ. ಈ ಮಾಹಿತಿಗಳ ಅಧಿಕೃತತೆಯ ಕುರಿತು ಅನುಮಾನಗಳು ಇವೆ. ಈ ಮಾಹಿತಿಯ ತಪ್ಪು ಸರಿ ಕುರಿತು ಮನುಷ್ಯನೇ ಅವಲೋಕಿಸಬೇಕು ಎಂದು ವಿಶ್ಲೇಷಿಸಿದರು. ಶಿಕ್ಷಣ ತಜ್ಞ ಎಂ.ಕೆ. ಶ್ರೀಧರ್, ಕೆ. ವೆಂಕಟೇಶ್ ಇದ್ದರು.

ಮದ್ರಾಸ್ ವಿ.ವಿ: ಎಂ.ಎ, ಪಿಎಚ್‌.ಡಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಚೆನ್ನೈಯ ಮದ್ರಾಸ್ ವಿಶ್ವ ವಿದ್ಯಾಲಯದ ಕನ್ನಡ ವಿಭಾಗವು 2023–24ನೇ ಸಾಲಿಗೆ ಕನ್ನಡ ಎಂ.ಎ ಮತ್ತು ಪಿಎಚ್‌.ಡಿ ಪದವಿ ಅಧ್ಯಯನ ಮಾಡಲು ಇಚ್ಛಿಸುವವರಿಂದ ಅರ್ಜಿ ಆಹ್ವಾನಿಸಿದೆ.

ಬಿ.ಎ ಪದವಿಯಲ್ಲಿ ಐಚ್ಛಿಕ ಕನ್ನಡ ಅಥವಾ ಇತರ ಪದವಿಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡಿರುವವರು ಕನ್ನಡ ಎಂ.ಎ ಪದವಿ ಅಧ್ಯಯನಕ್ಕೆ ಅರ್ಜಿ ಸಲ್ಲಿಸಬಹುದು. ಎಂ.ಎ (ಕನ್ನಡ) ಅಧ್ಯಯನ ಮಾಡಿರುವವರು ಪಿಎಚ್‌.ಡಿ ಪದವಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆಗೆ ಜೂನ್ 30 ಕೊನೆಯ ದಿನ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 8939387354/ 98402 39321.

26ಕ್ಕೆ ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ

ವಂದೇ ಭಾರತ್ ರೈಲು 19ಕ್ಕೆ ಪ್ರಾಯೋಗಿಕ ಸಂಚಾರ

• ಬಾಲಕೃಷ್ಣ ಪಿ.ಎಚ್‌.

ಬೆಂಗಳೂರು: ಬೆಂಗಳೂರು–ಧಾರವಾಡ ಮಧ್ಯೆ ಸಂಚರಿಸಲು 'ವಂದೇ ಭಾರತ್' ಇಂಟರ್‌ಸಿಟಿ ಸೆಮಿ ಹೈಸ್ಪೀಡ್ ರೈಲು ಸಜ್ಜಾಗಿದೆ. ಜೂನ್ 19ರಂದು ಪ್ರಾಯೋಗಿಕವಾಗಿ ಸಂಚರಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಜೂನ್ 26ರಂದು ಚಾಲನೆ ನೀಡಿದ ಬಳಿಕ ಅಧಿಕೃತವಾಗಿ ಓಡಾಟ ಆರಂಭಿಸಲಿದೆ.

ಪೆರಂಬೂರಿನಲ್ಲಿರುವ ಚೆನ್ನೈ ಇಂಟೆಗ್ರಲ್ ಕೋಚ್ ಫ್ಯಾಕ್ಟರಿಯಲ್ಲಿ ಈ ರೈಲು ನಿರ್ಮಾಣಗೊಂಡಿದೆ. ಬೆಂಗಳೂರು–ಧಾರವಾಡದ ಅಂತರ 487 ಕಿಲೋಮೀಟರ್ ಇದ್ದು, ಸುಮಾರು ಏಳು ಗಂಟೆಗಳಲ್ಲಿ ಕ್ರಮಿಸಲಿದೆ. ಗಂಟೆಗೆ 160 ಕಿಲೋ ಮೀಟರ್ ವೇಗದ ಸಾಮರ್ಥ್ಯ ಇದ್ದರೂ ಈ ಮಾರ್ಗದಲ್ಲಿ ಗಂಟೆಗೆ 120 ಕಿಲೋ ಮೀಟರ್ ವೇಗದಲ್ಲಿ ಚಲಿಸಲಿದೆ. ತಿರುವುಗಳು ಹೆಚ್ಚಿರುವುದು ವೇಗ ಕಡಿಮೆಯಾಗಲು ಕಾರಣ.



ವಾರಕ್ಕೆ ಆರುದಿನ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ 8ನೇ ಫ್ಲಾಟ್‌ಫಾರ್ಮ್‌ನಿಂದ ಹೊರಡುವ 'ವಂದೇ ಭಾರತ್' ರೈಲು ಧಾರವಾಡ ತಲುಪುವ ಮಧ್ಯೆ ಯಶವಂತಪುರ, ದಾವಣಗೆರೆ, ಹುಬ್ಬಳ್ಳಿಯಲ್ಲಿ ನಿಲ್ಲಲಿದೆ ಎಂದು ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ) ಕುಸುಮಾ ಹರಿಪ್ರಸಾದ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ನೈರುತ್ಯ ರೈಲ್ವೆಯಲ್ಲಿ ಇದೇ ಪ್ರಥಮ ಬಾರಿಗೆ 'ವಂದೇ ಭಾರತ್' ಇಂಟರ್‌ಸಿಟಿ ರೈಲು ಸಂಚರಿಸಲಿದೆ. ದರ ನಿಗದಿ ಕಾರ್ಯ ಕೆಲವೇ ದಿನಗಳಲ್ಲಿ ಆಗಲಿದೆ.

ಕುಸುಮಾ ಹರಿಪ್ರಸಾದ್, ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕಿ (ಆಡಳಿತ)

ಕವಚ್: ರೈಲು ಅಪಘಾತಗಳನ್ನು ತಪ್ಪಿಸುವ ತಂತ್ರಜ್ಞಾನವನ್ನು (Train Collision Avoidance System) 2022ರಲ್ಲಿ ಅಭಿವೃದ್ಧಿ ಪಡಿಸಲಾಗಿದೆ. 'ಕವಚ್' ಎಂಬ ಈ ತಂತ್ರಜ್ಞಾನವು ಎದುರಿನಿಂದ ರೈಲು ಬರುತ್ತಿದ್ದರೆ ಅದರ ಮುನ್ಸೂಚನೆಯನ್ನು ಮೊದಲೇ ನೀಡುತ್ತದೆ. ಇದರಿಂದ ಮುಂದಾಗುವ ಅನಾಹುತ ತಪ್ಪಲಿದೆ. ಈ ತಂತ್ರಜ್ಞಾನವನ್ನು 'ವಂದೇ ಮಾತರಂ'ನಲ್ಲಿ ಅಳವಡಿಸಲಾಗಿದೆ.

ಆಧುನಿಕ ತಂತ್ರಜ್ಞಾನ: ಪೂರ್ಣ ಹವಾನಿಯಂತ್ರಿತ ವ್ಯವಸ್ಥೆ ಇರುವ ಈ ಸೆಮಿ ಎಕ್ಸ್‌ಪ್ರೆಸ್ ವಿಶೇಷ ರೈಲಿನಲ್ಲಿ 8 ಕೋಚ್‌ಗಳು, ಎರಡು ಮೋಟರ್ ಕಾರುಗಳಿವೆ. ಜಿಪಿಎಸ್ ವ್ಯವಸ್ಥೆ ಇರುವುದರಿಂದ ರೈಲು ಎಲ್ಲಿದೆ ಎಂಬುದನ್ನು ನೋಡಲು ಸಾಧ್ಯ. ಮೆಟ್ರೋದಲ್ಲಿ ಇರುವಂತೆ ಈ ರೈಲಿನಲ್ಲಿ ಯಾವ ನಿಲ್ದಾಣಕ್ಕೆ ತಲುಪುತ್ತಿದೆ ಎಂಬ ಮಾಹಿತಿ ಪ್ರದರ್ಶನಗೊಳ್ಳಲಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ವೈಫೈ, ಇನ್ಫೋಟೆಕ್ ವ್ಯವಸ್ಥೆಯನ್ನೂ ಅಳವಡಿಸಲಾಗಿದೆ ಎಂದು ಕುಸುಮಾ ಮಾಹಿತಿ ನೀಡಿದರು.

ವಂದೇ ಭಾರತ್ ವೇಳಾಪಟ್ಟಿ

ವಂದೇ ಭಾರತ್ ಇಂಟರ್‌ಸಿಟಿ ರೈಲು ಮಂಗಳವಾರ ಬಿಟ್ಟು ವಾರದಲ್ಲಿ ಆರು ದಿನ ಸಂಚರಿಸಲಿದೆ.

ಪ್ರತಿದಿನ ಬೆಂಗಳೂರಿನಿಂದ ಬೆಳಿಗ್ಗೆ 5.45ಕ್ಕೆ ಹೊರಡಲಿದೆ. ಬೆಳಿಗ್ಗೆ 5.55ಕ್ಕೆ ಯಶವಂತಪುರ, ಬೆಳಿಗ್ಗೆ 9.55ಕ್ಕೆ ದಾವಣಗೆರೆ, ಮಧ್ಯಾಹ್ನ 12.10ಕ್ಕೆ ಹುಬ್ಬಳ್ಳಿ ಜಂಕ್ಷನ್‌ಗೆ ಬಂದು ಮಧ್ಯಾಹ್ನ 12.40ಕ್ಕೆ ಧಾರವಾಡಕ್ಕೆ ತಲುಪಲಿದೆ.

ಧಾರವಾಡದಿಂದ ಮಧ್ಯಾಹ್ನ 1.15ಕ್ಕೆ ಹೊರಡುವ ಈ ರೈಲು. ಮಧ್ಯಾಹ್ನ 1.35ಕ್ಕೆ ಹುಬ್ಬಳ್ಳಿ ಜಂಕ್ಷನ್, ಮಧ್ಯಾಹ್ನ 3.48ಕ್ಕೆ ದಾವಣಗೆರೆ, ರಾತ್ರಿ 7.45ಕ್ಕೆ ಯಶವಂತಪುರ ತಲುಪಲಿದ್ದು, ರಾತ್ರಿ 8.10ಕ್ಕೆ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ತಲುಪಲಿದೆ.



ಸಭೆಯಲ್ಲಿ ಮಹೇಶ ಜೋಶಿ ಮಾತನಾಡಿದರು. ಚಲುವರಾಯಸ್ವಾಮಿ ಇದ್ದಾರೆ.

ಸಾಹಿತ್ಯ ಸಮ್ಮೇಳನ: ಬಜೆಟ್‌ನಲ್ಲಿ ಅನುದಾನ

ಬೆಂಗಳೂರು: 'ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಂಬರುವ ಬಜೆಟ್‌ನಲ್ಲಿಯೇ ಅನುದಾನ ಘೋಷಿಸಲು ಮುಖ್ಯಮಂತ್ರಿಗೆ ಮನವಿ ಸಲ್ಲಿಸಬೇಕು' ಎಂಬ ತೀರ್ಮಾನವನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಹಮ್ಮಿಕೊಂಡ ಸಭೆಯಲ್ಲಿ ಕೈಗೊಳ್ಳಲಾಯಿತು.

ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರು ಪರಿಷತ್ತಿಗೆ ಶುಕ್ರವಾರ ಭೇಟಿ ನೀಡಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಜತೆಗೆ ಚರ್ಚಿಸಿದರು.

'86ನೇ ಸಾಹಿತ್ಯ ಸಮ್ಮೇಳನವನ್ನು ಸಾಮರಸ್ಯದ ನಾಡಾದ ಹಾವೇರಿಯಲ್ಲಿ ನಡೆಸಲಾಯಿತು. 87ನೇ ಸಮ್ಮೇಳನ ಸಕ್ಕರೆ ನಾಡಾದ ಮಂಡ್ಯಕ್ಕೆ ಪಯಣ ಬೆಳೆಸಿದೆ. ಇದು ಯಶಸ್ವಿಯಾಗಲು ಸರ್ಕಾರದ ಸಹಕಾರ ಹಾಗೂ ಸಹಯೋಗ ಅತ್ಯಗತ್ಯ' ಎಂದು ಮಹೇಶ ಜೋಶಿ ಹೇಳಿದರು.

'ಹಾವೇರಿ ಸಮ್ಮೇಳನದ ಕೆಲವು ಸಣ್ಣ ಪುಟ್ಟ ಲೋಪದೋಶಗಳನ್ನು ಮುಂದಿನ ಸಮ್ಮೇಳನದಲ್ಲಿ ಆಗದಂತೆ ಎಚ್ಚರಿಕೆ ವಹಿಸಬೇಕು' ಎಂದು ತಿಳಿಸಿದರು.

ಚಲುವರಾಯಸ್ವಾಮಿ, 'ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಭೂತಪೂರ್ವ ಯಶಸ್ಸು ಪಡೆಯಲು ಎಲ್ಲ ರೀತಿಯ ಸಹಕಾರವನ್ನು ಸರ್ಕಾರದಿಂದ ನೀಡಲಾಗುವುದು' ಎಂದು ಆಶ್ವಾಸನೆ ನೀಡಿದರು.

ಮುಂದಿನ ಹಂತಗಳಲ್ಲಿ ಮಂಡ್ಯದಲ್ಲಿ ಎಲ್ಲ ಶಾಸಕರೂ ಮತ್ತು ಅಧಿಕಾರಿಗಳ ಸಭೆಯನ್ನು ನಡೆಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಮುಖ್ಯಮಂತ್ರಿಯನ್ನು ಭೇಟಿ ಮಾಡಬೇಕು ಎಂದು ನಿರ್ಧರಿಸಿದರು.

ಮಂಡ್ಯದ ಶಾಸಕ ಗಾಣಿಕ ರವಿ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜ್, ನೇ.ಭ. ರಾಮಲಿಂಗ ಶೆಟ್ಟಿ, ಕೋಶಾಧ್ಯಕ್ಷ ಪಟೇಲ ಪಾಂಡು, ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗಯ್ಯ ಹಿರೇಮಠ ಹಾಗೂ ಪದಾಧಿಕಾರಿಗಳು ಇದ್ದರು.

ಜಾನಪದ ಪರಿಕರಗಳ ಪ್ರದರ್ಶನ



ಜಾನಪದ ವಾದ್ಯಗಳೊಂದಿಗೆ ಏಕತಾರಿ ರಾಮಯ್ಯ

ಬೆಂಗಳೂರು: ಅವಸಾನದತ್ತ ಸಾಗುತ್ತಿರುವ ತಂಬೂರಿ, ಚೌಡಿಕೆ ಸೇರಿ ವಿವಿಧ 15 ಮೂಲ ಜಾನಪದ ಪರಿಕರಗಳ ಪ್ರದರ್ಶನವನ್ನು ಇದೇ ಭಾನುವಾರ ಬೆಳಿಗ್ಗೆ 10.30ಕ್ಕೆ ಮಲೈಮಹದೇಶ್ವರ ಸಾಂಸ್ಕೃತಿಕ ಸೇವಾ ಟ್ರಸ್ಟ್ ಹಮ್ಮಿಕೊಂಡಿದೆ.

ಕೆಂಚನಪಾಳ್ಯದ ಏಕತಾರಿ ರಾಮಯ್ಯ ರಸ್ತೆಯ ಜಾನಪದ ಕುಟೀರದಲ್ಲಿ ಈ ಪ್ರದರ್ಶನ ನಡೆಯಲಿದೆ. ಈ ವಾದ್ಯ ಪರಿಕರಗಳನ್ನು ತಯಾರಿಸಿ, ಪ್ರದರ್ಶನ ನೀಡುತ್ತಿರುವ ಕೆ.ಎಂ. ರಾಮಯ್ಯ ಅವರು ಈ ಪ್ರದರ್ಶನದ ನೇತೃತ್ವ ವಹಿಸಿದ್ದಾರೆ. ಅವರು 25 ವರ್ಷಗಳಲ್ಲಿ ಸಾವಿರಕ್ಕೂ ಅಧಿಕ ತಂಬೂರಿ ತಯಾರಿ ಮಾಡಿದ್ದಾರೆ. ವಾದ್ಯಗಳನ್ನು ನುಡಿಸುವಿಕೆ ಬಗ್ಗೆ ತರಬೇತಿಯನ್ನೂ ನೀಡುತ್ತಿದ್ದಾರೆ.

ಮೂಲ ವಾದ್ಯಗಳಾದ ಏಕತಾರಿ, ತಂಬೂರಿ 4 ತಂತಿ, ಕಿನ್ನೂರಿ, ಚೌಡಿಕೆ, ಗುಮ್ಮ ಚೌಡಿಕೆ, ತೆಂಗಿನ ಚಿಪ್ಪು ಪಿಟೀಲು, ಪುಂಗಿ, ದಮಡಿ, ಚಿಟಿಕಿ, ಕೊಳಲು, ಗೆಜ್ಜೆ, ಸ್ತುತಿ ಪೆಟ್ಟಿಗೆ, ಬುಡುಬುಡಿಕೆ, ಏಕನಾದ ಹಾಗೂ ಮರದ ಚಿಟಿಕೆ ಪ್ರದರ್ಶನದಲ್ಲಿ ಇರಲಿವೆ.

'ಎಲ್ಲಾ ವಾದ್ಯಗಳಿಗೂ ತಂಬೂರಿಯೇ ಮೂಲ. ಆದರೆ ಇಂದಿನ ಆಧುನಿಕ ಸಂಗೀತ ವಾದ್ಯಗಳ ಅಬ್ಬರದಲ್ಲಿ ತಂಬೂರಿಯಂಥ ಮೂಲವಾದ್ಯಗಳು ದನಿ ಕಳೆದುಕೊಂಡಿವೆ. ಅದನ್ನು ಉಳಿಸಬೇಕು, ಮುಂದಿನ ಪೀಳಿಗೆಗೆ ಅದರ ಮಹತ್ವವನ್ನು ತಿಳಿಸಬೇಕು ಎಂಬ ಕನಸಿದೆ. ಊರೂರು ಸುತ್ತಿ ಕಾರ್ಯಕ್ರಮ ನಡೆಸುತ್ತೇನೆ, ತರಬೇತಿ ನೀಡುತ್ತೇನೆ. ಪ್ರದರ್ಶನದಲ್ಲಿ ವಾದ್ಯಗಳನ್ನು ಮಾರಾಟವೂ ನಡೆಯಲಿದೆ. ಸದ್ಯ 25 ಜನ ಈ ವಾದ್ಯಗಳ ಬಗ್ಗೆ ತರಬೇತಿ ಪಡೆಯುತ್ತಿದ್ದಾರೆ' ಎಂದು ರಾಮಯ್ಯ ತಿಳಿಸಿದರು.

ಸಂಪರ್ಕಕ್ಕೆ: 9008831169

ರೋಮಾಂಚಕ 'ಗುರುತ್ವ' ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜವಾಹರ್‌ಲಾಲ್ ನೆಹರೂ ತಾರಾಲಯ ನಿರ್ಮಿಸಿರುವ 'ಗುರುತ್ವ–ವಿಶ್ವದ ನಿರ್ಮಾತೃ ನಿರ್ವಾಹಕ' ಹೊಸ ಪ್ರದರ್ಶನ ನೋಡುಗರನ್ನು ರೋಮಾಂಚನಗೊಳಿಸುತ್ತದೆ. 'ಗುರುತ್ವ'ದ ಬಗೆಗಿನ ಸಂಶೋಧನೆಗಳನ್ನು ಕಣ್ಣಮುಂದೆ ತೆರೆದಿಡುತ್ತಿದೆ.

ಡಿಜಿಟಲ್ ಪ್ರಾಜೆಕ್ಟರ್‌ಗಳ ಜೊತೆಗೆ ಆಪ್ಟೊ–ಮೆಕ್ಯಾನಿಕಲ್ ಪ್ರಾಜೆಕ್ಟರ್ ಬಳಸಿಕೊಂಡು ತಯಾರಿಸಿದ 37 ನಿಮಿಷಗಳ ದೃಕ್ ಶ್ರಾವ್ಯ ಪ್ರದರ್ಶನ ಶುಕ್ರವಾರ ಆರಂಭವಾಯಿತು.

ಬೀಳುವ ವಸ್ತುಗಳಿಂದ ಹಿಡಿದು ಭೂಗೋಳ ಮತ್ತು ಖಗೋಳದ ಹಲವಾರು ವಿದ್ಯಮಾನಗಳನ್ನು ಅರ್ಥ ಮಾಡಿಕೊಳ್ಳಲು, ವಿವರಿಸಲು ಗುರುತ್ವ ಪ್ರಮುಖ ಪಾತ್ರ ವಹಿಸಿದೆ. ಪ್ರಕ್ಷೇಪಗಳು, ನಕ್ಷತ್ರ ಜೀವನ ಚಕ್ರ, ಗ್ರಹಗಳು, ಅವುಗಳ ಉಪಗ್ರಹಗಳ ಚಲನೆ, ಕಪ್ಪುಕುಳಿಗಳು ಗುರುತ್ವದ ಅಲೆಗಳ ರಚನೆ ಇವುಗಳನ್ನು ಅರಿಯಲು ಎರಡು ಕ್ರಾಂತಿಕಾರಿ ಕಲ್ಪನೆಗಳು ಕಾರಣ. 17ನೇ ಶತಮಾನದಲ್ಲಿ ಐಸಾಕ್ ನ್ಯೂಟನ್‌ರಿಂದ ಮತ್ತು ಇಪ್ಪತ್ತನೇ ಶತಮಾನದಲ್ಲಿ ಅಲ್ಬರ್ಟ್ ಐನ್‌ಸ್ಟೈನ್ ಅವರ ಸಾಪೇಕ್ಷ ಸಿದ್ಧಾಂತಗಳು ಅವು. ಈ ಪ್ರದರ್ಶನದಲ್ಲಿ ಮೊದಲಾರ್ಧವು ನ್ಯೂಟನ್ ಅವರ ಸಾರ್ವತ್ರಿಕ ಗುರುತ್ವ ನಿಯಮ ಮತ್ತು ದ್ವಿತೀಯಾರ್ಧದಲ್ಲಿ ಐನ್‌ಸ್ಟೈನ್ ಅವರ ಗುರುತ್ವಾಕರ್ಷಣೆಯ ಕಲ್ಪನೆ ಮತ್ತು ಸಿದ್ಧಾಂತ ಪಡಿಮೂಡಿವೆ. ಫುಲ್‌ಡೋಂ ವಿಡಿಯೊ, ಕಾರ್ಟೂನ್, ಚಿತ್ರಣ, ಸಂಗೀತದಿಂದ ಅದ್ಭುತ ಅನುಭವ ನೀಡುವ ಈ ಪ್ರದರ್ಶನವನ್ನು ಜೂನ್ 17ರಿಂದ ಸಾರ್ವಜನಿಕರಿಗೆ ವೀಕ್ಷಿಸಲು ಅವಕಾಶ ನೀಡಲಾಗಿದೆ.



ನಗರದ ಜವಾಹರ್‌ಲಾಲ್ ನೆಹರೂ ತಾರಾಲಯದಲ್ಲಿ ಶುಕ್ರವಾರ ಆರಂಭಗೊಂಡ 'ಗುರುತ್ವ: ವಿಶ್ವದ ನಿರ್ಮಾತೃ ನಿರ್ವಾಹಕ' ಕಾರ್ಯಕ್ರಮದಲ್ಲಿ ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್‌. ಕಿರಣ್ ಕುಮಾರ್ ವಿಜ್ಞಾನ ಪರಿಶೋಧನಾ ಕಿಟ್ ಅನ್ನು ತಾರಾಲಯದ ನಿರ್ದೇಶಕ ಪ್ರಮೋದ್ ಜಿ. ಗಲಗಲಿ ಅವರಿಗೆ ಹಸ್ತಾಂತರಿಸಿದರು. ಭಾರತೀಯ ಖಭೌತವಿಜ್ಞಾನ ಸಂಸ್ಥೆಯ ನಿರ್ದೇಶಕಿ ಅಣ್ಣಪೂರ್ಣಿ ಇದ್ದರು – ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಎಸ್ಸೆಸ್ಸೆಲ್ಸಿ: ವಿದ್ಯಾರ್ಥಿಗಳಿಗೆ ಸನ್ಮಾನ

ಬೆಂಗಳೂರು: ಎಸ್ಸೆಸ್ಸೆಲ್ಸಿಯಲ್ಲಿ ಶೇ 90ಕ್ಕೂ ಅಧಿಕ ಅಂಕ ಪಡೆದ ನಗರದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದು ಕನ್ನಡ ಗೆಳೆಯರ ಬಳಗ ತಿಳಿಸಿದೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ತಲಾ ₹ 1 ಸಾವಿರ ನಗದು ಹಾಗೂ ತಲಾ ₹ 1 ಸಾವಿರ ಮೌಲ್ಯದ ಪುಸ್ತಕಗಳನ್ನು ನೀಡಲಾಗುವುದು. ಇದೇ ವೇಳೆ ಕನ್ನಡದಲ್ಲಿ ಅಧಿಕ ಅಂಕ ಪಡೆದ ಕನ್ನಡ ಮಾತೃಭಾಷೆಯಲ್ಲದ 10 ವಿದ್ಯಾರ್ಥಿಗಳನ್ನೂ ಸನ್ಮಾನಿಸಲಾಗುವುದು ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಅರ್ಹ ಅಭ್ಯರ್ಥಿಗಳು ಇದೇ 30ರೊಳಗೆ ಅಂಕಪಟ್ಟಿ, ಓದಿದ ಶಾಲೆ ಹಾಗೂ ಮನೆಯ ವಿಳಾಸ, ಸಂಪರ್ಕ ಸಂಖ್ಯೆ ಸೇರಿ ಅಗತ್ಯ ವಿವರವನ್ನು ವಾಟ್ಸ್‌ಆ್ಯಪ್ ಸಂಖ್ಯೆ 9945691172, 9880081983ಕ್ಕೆ ಅಥವಾ ಅಂಚೆ ವಿಳಾಸ #1, ಶ್ರೀನಿಲಯ, ಮಾರಮ್ಮ ದೇವಸ್ಥಾನದ ರಸ್ತೆ, ಕತ್ರಿಗುಪ್ಪೆ, ಬೆಂಗಳೂರು-560085ಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ನಗರ ವಿವಿ ಘಟಿಕೋತ್ಸವ ಜುಲೈ 10ಕ್ಕೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಎರಡನೇ ವಾರ್ಷಿಕ ಘಟಿಕೋತ್ಸವವು ಜುಲೈ 10ರಂದು ಬೆಳಿಗ್ಗೆ 11ಕ್ಕೆ ನಗರದ ಅರಮನೆ ರಸ್ತೆಯಲ್ಲಿರುವ ಬೆಂಗಳೂರು ನಗರ ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸುವರು. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್ ಘಟಿಕೋತ್ಸವದ ಭಾಷಣ ಮಾಡುವರು. ಉನ್ನತ ಶಿಕ್ಷಣ ಸಚಿವ ಡಾ. ಎಂ. ಸಿ. ಸುಧಾಕರ, ಭಾಗವಹಿಸುವರು. ಕುಲಪತಿ ಪ್ರೊ. ಲಿಂಗರಾಜ ಗಾಂಧಿ ವರದಿ ಪ್ರಸ್ತುತಪಡಿಸುವರು ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಭರತನಾಟ್ಯ ರಂಗಪ್ರವೇಶ: ದಿವ್ಯಶ್ರೀ ವಿ., ಅತಿಥಿಗಳು: ಸುನಿಲ್ ಕುಮಾರ್ ಸಿಂಗ್, ಸತ್ಯನಾರಾಯಣ ರಾಜು, ಆಯೋಜನೆ: ಕಾವಶ್ರೀ ಆರ್ಟ್ ಫೌಂಡೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 10

ಅಭಿನಂದನಾ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅಭಿನಂದನೆ: ದಿನೇಶ್ ಗುಂಡೂರಾವ್, ಅತಿಥಿ: ಜಿ.ಎಸ್‌. ಪಾಟೀಲ, ಅಧ್ಯಕ್ಷತೆ: ಅಶೋಕಕುಮಾರ್ ದೇ. ಬಾಗಮಾರ, ಆಯೋಜನೆ: ಕರ್ನಾಟಕ ಆಯುರ್ವೇದ ಮೆಡಿಕಲ್ ಕಾಲೇಜು, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30



ನಿರ್ಮಲಾನಂದನಾಥ ಸ್ವಾಮೀಜಿ

ರಾವ್ ಬಹದ್ದೂರ್ ಎಚ್‌.ಸಿ. ಜವರಯ್ಯ ಅವರ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ 'ಎ ಗಾರ್ಡನರ್ ಆ್ಯಂಡ್ ಎ ಜೆಂಟಲ್‌ಮ್ಯಾನ್' ಪುಸ್ತಕದ ಬಗ್ಗೆ ಚರ್ಚೆ: ಮೀರಾ ಅಯ್ಯರ್, ಗಣೇಶ್ ಶಂಕರ್ ರಾಜ್, ಹರಿಣಿ ನಾಗೇಂದ್ರ, ಆಯೋಜನೆ: ಜವರಯ್ಯ ಕುಟುಂಬ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಚಾವುಂಡರಾಯ ದತ್ತಿ ಪ್ರಶಸ್ತಿ ಪ್ರದಾನ: ಜಿ. ಪರಮೇಶ್ವರ, ಉದ್ಘಾಟನೆ: ಶಿವರಾಜ ತಂಗಡಗಿ, ಮುಖ್ಯ ಅತಿಥಿ: ನ್ಯಾ.ಎಂ.ಐ. ಅರುಣ್, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪುರಸ್ಕೃತರು: ಕೆ.ಈ. ರಾಧಾಕೃಷ್ಣ, ಉಪಸ್ಥಿತಿ: ಎಸ್. ಜಿತೇಂದ್ರ ಕುಮಾರ್, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11

ಡಾ.ಎಚ್‌.ನರಸಿಂಹಯ್ಯ ಸ್ಮರಣಾರ್ಥ ಸಾಂಸ್ಕೃತಿಕ ಉತ್ಸವ: ಉದ್ಘಾಟನೆ: ಗೀತಾ ರಾಮಾನುಜಂ, ಅತಿಥಿ: ಎ. ಶ್ರೀನಿವಾಸನ್, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್, ಸ್ಥಳ: ಡಾ.ಎಚ್‌.ಎನ್. ಕಲಾಕ್ಷೇತ್ರ, ನ್ಯಾಷನಲ್ ಕಾಲೇಜು, ಜಯನಗರ, ಮಧ್ಯಾಹ್ನ 2

ಮಹಾನಾದ ಮಹೋತ್ಸವ: ಗಾಯನ: ಗಣಪತಿ ಭಟ್ ಹಾಸಣಗಿ, ಅನುಜಾ ಝೋಕರ್ಕರ್, ಸಂತೂರ್: ಬಿಪುಲ್ ಕುಮಾರ್, ತಬಲಾ: ರಾಜೇಂದ್ರ ನಾಕೋಡ್, ಕೇಶವ್ ಜೋಶಿ, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ತೇಜಸ್ ಕಾಟೋಟಿ, ಆಯೋಜನೆ: ರಾಗಾಂಜಲಿ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸಂಜೆ 4.45



ಗಣಪತಿ ಭಟ್ ಹಾಸಣಗಿ

'ಸ್ವರ ತ್ರಿವೇಣಿ' ಸಂಗೀತ ಕಾರ್ಯಕ್ರಮ: ಸಿತಾರ: ರಫೀಕ್ ಖಾನ್, ಶಫೀಕ್ ಖಾನ್, ವಯೋಲಿನ್: ಸಂತೋಷ್ ನಹರ್, ತಬಲಾ: ರಾಹುಲ್ ಪೋಫಲಿ, ಪ್ರವೀಣ್ ನಾರಾಯಣ್, ಆಯೋಜನೆ ಹಾಗೂ ಸ್ಥಳ: ಸ್ವರತರಂಗ್ ಸಂಗೀತ ಅಕಾಡೆಮಿ, 17ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಸಂಜೆ 6

'ಮಾಹಾಮಾಯಿ' ನಾಟಕ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ಲೋಕನಾಥ್ ಸೋಗುಂ, ಬೆಳಕು: ಮನೋಜ್ ಮೂಕನಹಳ್ಳಿ, ಆಯೋಜನೆ: ಸ್ಥಾಯಿ ಥಿಯೇಟರ್ ಕೊಯಮತ್ತೂರು, ಸ್ಥಳ: ಡಾ.ಸಿ.ಅಶ್ವತ್ಥ ಕಲಾ ಭವನ, ಎನ್‌.ಆರ್. ಕಾಲೊನಿ, ಸಂಜೆ 5.30

'ಇಟ್ಟಾ' ಶಾಸ್ತ್ರೀಯ ನೃತ್ಯ ಪ್ರದರ್ಶನ: ಸುರಭಿ, ಆಯೋಜನೆ: ಪ್ರಭಾತ್ ಆರ್ಟ್ಸ್ ಇಂಟರ್ ನ್ಯಾಷನಲ್, ಸ್ಥಳ: ಜೆ.ಎಸ್‌.ಎಸ್. ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 6.30

ಸಂಗೀತ ಕಛೇರಿ: ಗಾಯನ: ಕೆ.ಎಸ್. ವಿಷ್ಣುದೇವ್, ಬೆಂಗಳೂರು ವಿ. ಪ್ರವೀಣ್, ಸ್ಮಿತಾ ಎಚ್‌.ಎಂ., ವ್ಯಾಸ ವಿಠ್ಠಲ, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಸಭಾಂಗಣ, 15ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6.30

ವಿದ್ಯುತ್ ಚಾಲಿತ ಪರಿಸರ ಸ್ನೇಹಿ ಯಂತ್ರ: ಶಬ್ದ–ವಾಯು ಮಾಲಿನ್ಯವಿಲ್ಲ

ಪರಿಸರಸ್ನೇಹಿ 'ಎಲೆಕ್ಟ್ರಿಕ್ ಎಕ್ಸ್‌ವೇಟರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಕೂಟರ್, ಆಟೊ, ಕಾರು, ಬಸ್, ಟ್ರ್ಯಾಕ್ಟರ್... ಹೀಗೆ ಜನರ ಪ್ರಯಾಣ ಹಾಗೂ ಸರಕು ಸಾಗಣೆಗೆ ಸೀಮಿತವಾಗಿದ್ದ ಎಲೆಕ್ಟ್ರಿಕ್ ವಾಹನದ ವ್ಯಾಪ್ತಿ ಮತ್ತಷ್ಟು ವಿಸ್ತರಿಸಿದ್ದು, ಇದೀಗ ನೆಲ ಅಗೆಯಲು 'ಎಲೆಕ್ಟ್ರಿಕ್ ಎಕ್ಸ್‌ವೇಟರ್' ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ.

ಕೆರೆ ಹೊಳೆತ್ತಲು, ಕಾಲುವೆ ತೋಡಲು, ಜಮೀನು ಮಣ್ಣು ಅಗೆಯಲು, ಗಣಿಗಾರಿಕೆ, ಕೃಷಿ, ಕಾಲುವೆ ಸ್ವಚ್ಛಗೊಳಿಸಲು ಹಾಗೂ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ಗೋಡೆಗಳನ್ನು ಕೊರೆಯಲು ಎಕ್ಸ್‌ವೇಟರ್ ಉಪಯೋಗವಾಗಲಿದೆ.

ತುಮಕೂರು ರಸ್ತೆಯ ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) 'ಗ್ರೀನ್ ವೇಹಿಕಲ್ ಎಕ್ಸ್‌ಪೋ'ದಲ್ಲಿ ವಿದ್ಯುತ್ ಚಾಲಿತ ಎಕ್ಸ್‌ವೇಟರ್ ಗಮನ ಸೆಳೆಯುತ್ತಿದೆ. ದೆಹಲಿಯ ಇಂಜಿನ್ ಕಾರ್ಪ್ ಕಂಪನಿ ಈ ಯಂತ್ರ ಅಭಿವೃದ್ಧಿಪಡಿಸಿದ್ದಾರೆ.

'ಕಂಪನಿಯಿಂದ ಬ್ಯಾಟರಿ ತಯಾರಿಕೆ ಮಾಡುತ್ತಿದ್ದೇವೆ. 250 ಕೆ.ಜಿ ತೂಕದ ಈ ಯಂತ್ರವು ಕೃಷಿ, ಗಣಿಗಾರಿಕೆ, ಕಟ್ಟಡ ತೆರವು ಸೇರಿದಂತೆ 9 ಕೆಲಸಗಳನ್ನು ಮಾಡುತ್ತದೆ. ಯಾವುದೇ ಶಬ್ದ ಹಾಗೂ ಮಾಲಿನ್ಯ ಆಗುವುದಿಲ್ಲ. ಚಿಕ್ಕ ಜಾಗದಲ್ಲೂ ಇದು ಸಂಚರಿಸುತ್ತದೆ' ಎಂದು ಇಂಜಿನ್ ಕಾರ್ಪ್ ಕಂಪನಿ ಸಂಸ್ಥಾಪಕ ಆಶ್ರಯ ನಾಗಪಾಲ್ 'ಪ್ರಜಾವಾಣಿ'ಗೆ ತಿಳಿಸಿದರು.



ವಿದ್ಯುತ್ ಚಾಲಿತ ಎಕ್ಸ್‌ವೇಟರ್ ಯಂತ್ರ

ಟೆಸ್ಟ್‌ಡ್ರೈವ್ ಲಭ್ಯ

ಜೂನ್ 16ರಿಂದ 18ರವರೆಗೆ ನಡೆಯಲಿರುವ ಮೂರು ದಿನಗಳ ಎಕ್ಸ್‌ಪೋದಲ್ಲಿ ದೇಶ–ವಿದೇಶಗಳ 138 ಕಂಪನಿಗಳು ಮಳಿಗೆ ತೆರೆದಿವೆ. ಟೆಸ್ಟ್ ಡ್ರೈವ್‌ಗೂ ಅವಕಾಶ ಕಲ್ಪಿಸಲಾಗಿದೆ.

ಜೂನ್ 12ರಂದು ನಡೆದಿದ್ದ ಘಟನೆ ● ಸಿ.ಸಿ.ಟಿ.ವಿ ಮೂಲಕ ಪುರಾವೆ ಸಂಗ್ರಹ– ಯುವಕನ ಅಮಾಯಕತನ ಸಾಬೀತು

ಸುಳ್ಳು ಹೇಳಿದ್ದ ಬಾಲಕಿ: ಡೆಲಿವರಿ ಬಾಯ್‌ಗೆ ಥಳಿತ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: 'ನನ್ನನ್ನು ಅಪಹರಣ ಮಾಡುತ್ತಿದ್ದಾನೆ' ಎಂಬುದಾಗಿ ಬಾಲಕಿ ಹೇಳಿದ್ದನ್ನು ನಂಬಿದ್ದ ಪೋಷಕರು ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ನಿವಾಸಿಗಳು, ಡೆಲಿವರಿ ಬಾಯ್‌ಯೊಬ್ಬರನ್ನು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಆದರೆ, ಬಾಲಕಿ ಹೇಳಿದ್ದ ಸುಳ್ಳಿನಿಂದಾಗಿ ಡೆಲಿವರಿ ಬಾಯ್ ಸಂಕಷ್ಟಕ್ಕೆ ಸಿಲುಕಿದ್ದರೆಂಬುದು ಪೊಲೀಸರ ತನಿಖೆಯಿಂದ ಪತ್ತೆಯಾಗಿದೆ.

'ಜೂನ್ 12ರಂದು ನಡೆದಿರುವ ಘಟನೆ ಸಂಬಂಧ ಡೆಲಿವರಿ ಬಾಯ್ ಅಖಿಲ್ ನೀಡಿರುವ ದೂರು ಆಧರಿಸಿ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಲಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಹೇಳಿದರು.

'ಎಂಟು ವರ್ಷದ ಬಾಲಕಿ, ತಂದೆ-ತಾಯಿ ಹಾಗೂ ತಮ್ಮನ ಜೊತೆ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ವಾಸವಿದ್ದಾರೆ. ಜೂನ್ 12ರಂದು ಪೋಷಕರು, ತಮ್ಮನನ್ನು ಶಾಲೆಗೆ ಬಿಡಲು ಹೋಗಿದ್ದರು. ಈ ವೇಳೆ ಬಾಲಕಿ ಮನೆಯಲ್ಲಿದ್ದಳು. ಹೊರಗಡೆ ಹೋಗದಂತೆ ಪೋಷಕರು ಬಾಲಕಿಗೆ ತಾಕೀತು ಮಾಡಿದ್ದರು. ಮಾತು ಕೇಳದ ಬಾಲಕಿ, ಪೋಷಕರು ಹೊರಗೆ ಹೋಗುತ್ತಿದ್ದಂತೆ ಮನೆಯಿಂದ ಹೊರಬಂದು ಅಪಾರ್ಟ್‌ಮೆಂಟ್ ಸಮುಚ್ಚಯದ ಹಜಾರದಲ್ಲಿ ಸುತ್ತಾಡುತ್ತಿದ್ದಳು.'

'ಕೆಲ ಹೊತ್ತಿನ ನಂತರ ಪೋಷಕರು ಮನೆಗೆ ವಾಪಸು ಬಂದಿದ್ದರು. ಮನೆಯಲ್ಲಿ ಬಾಲಕಿ ಇರಲಿಲ್ಲ. ಸುತ್ತಮುತ್ತ ಹುಡುಕಾಟ ನಡೆಸುತ್ತಿದ್ದರು. ಮೆಟ್ಟಿಲು ಬಳಿ ಬಾಲಕಿ ಪತ್ತೆಯಾಗಿದ್ದಳು. ಅದೇ ಜಾಗದಲ್ಲಿ ಡೆಲಿವರಿ ಬಾಯ್ ಅಖಿಲ್ ಹೊರಟಿದ್ದರು. 'ಮನೆ ಬಿಟ್ಟು ಎಲ್ಲಿಗೆ ಹೋಗಿದ್ದಿ' ಎಂದು ಬಾಲಕಿಯನ್ನು ಪೋಷಕರು ಗದರಿಸಿದ್ದರು. ತನಗೆ ಹೊಡೆಯುತ್ತಾರೆಂದು ತಿಳಿದ ಬಾಲಕಿ, 'ಈ ಡೆಲಿವರಿ ಬಾಯ್ ನನ್ನನ್ನು ಅಪಹರಣ ಮಾಡುತ್ತಿದ್ದಾನೆ' ಎಂದು ಸುಳ್ಳು ಹೇಳಿದ್ದಳು. ಅದನ್ನು ನಂಬಿದ್ದ ಪೋಷಕರು ಹಾಗೂ ನಿವಾಸಿಗಳು, ಡೆಲಿವರಿ ಬಾಯ್ ಹಿಡಿದುಕೊಂಡು ಥಳಿಸಿದ್ದರು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಅವರನ್ನು ವಶಕ್ಕೆ ಪಡೆದಿದ್ದರು' ಎಂದು ತಿಳಿಸಿದರು.

ಸಿ.ಸಿ.ಟಿ.ವಿ ಕ್ಯಾಮೆರಾ ಪುರಾವೆ: 'ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಅಕ್ಕ-ಪಕ್ಕದ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯ ಪರಿಶೀಲಿಸಲಾಯಿತು. ಡೆಲಿವರಿ ಬಾಯ್ ಅಮಾಯಕ ಎಂಬುದು ತಿಳಿಯಿತು. ದೃಶ್ಯ ಆಧರಿಸಿ ವಿಚಾರಣೆ ನಡೆಸಿದಾಗ, ಬಾಲಕಿ ಸುಳ್ಳು ಹೇಳಿದ್ದು ಗೊತ್ತಾಯಿತು' ಎಂದು ಪೊಲೀಸರು ಹೇಳಿದರು.

'ಬಾಲಕಿ ಆನ್‌ಲೈನ್ ಮೂಲಕ ಶಿಕ್ಷಣ ಪಡೆಯುತ್ತಿದ್ದಾಳೆ. ಆಕೆಯನ್ನು ಪೋಷಕರು ಆಟವಾಡಲು ಮನೆಯಿಂದ ಹೊರಗೆ ಬಿಡುತ್ತಿರಲಿಲ್ಲ. ಪೋಷಕರು ಇಲ್ಲದಿದ್ದಾಗ, ಮನೆಯಿಂದ ಹೊರ ಬಂದು ಆಟವಾಡುತ್ತಿದ್ದಳು. ಆದರೆ, ಜೂನ್ 12ರಂದು ಪೋಷಕರು ಎದುರಿಗೆ ಬರುತ್ತಿದ್ದಂತೆ ಸುಳ್ಳು ಹೇಳಿದ್ದಾಳೆ. ಪೋಷಕರು ತಪ್ಪಾಗಿರುವುದಾಗಿ ಹೇಳಿದ್ದಾರೆ. ಬಾಲಕಿ ಸುಳ್ಳಿನಿಂದ ಸಂಕಷ್ಟಕ್ಕೆ ಸಿಲುಕಿದ್ದ ಅಖಿಲ್ ಅವರಿಗೆ ಗಾಯವಾಗಿದ್ದು, ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದರು.

ಬೈಕ್ ಅಡ್ಡಗಟ್ಟಿ ಮಚ್ಚಿನಿಂದ ಹಲ್ಲೆ

ಬೆಂಗಳೂರು: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ವರದರಾಜ್ (22) ಎನ್ನುವವರನ್ನು ಮಚ್ಚಿನಿಂದ ಹೊಡೆದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿಗಳ ಪತ್ತೆಗೆ ಪೊಲೀಸರು ವಿಶೇಷ ತಂಡ ರಚಿಸಿದ್ದಾರೆ.

'ವಿಜಿನಾಪುರದ ನಿವಾಸಿ ವರದರಾಜ್, ಸಣ್ಣ ಪುಟ್ಟ ಕೆಲಸ ಮಾಡಿಕೊಂಡಿದ್ದರು. ಸಂಬಂಧಿ ವಿಜಯ್ ಜೊತೆ ನೆಲೆಸಿದ್ದರು. ಇಬ್ಬರೂ ನಿತ್ಯವೂ ಒಟ್ಟಿಗೆ ಕೆಲಸಕ್ಕೆ ಹೋಗಿ ಬರುತ್ತಿದ್ದರು. ಜೂನ್ 14ರಂದು ರಾತ್ರಿ ಕೆಲಸ ಮುಗಿಸಿ ಮನೆಗೆ ವಾಪಸು ಬರುವಾಗ ಬೈಕ್ ಅಡ್ಡಗಟ್ಟಿದ್ದ ದುಷ್ಕರ್ಮಿಗಳು, ಕೃತ್ಯ ಎಸಗಿ ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ವರದರಾಜ್ ಅವರ ಬೈಕ್ ಅಡ್ಡಗಟ್ಟಿದ್ದ ಆರೋಪಿ ರಾಜೇಶ್ ಹಾಗೂ ಸಹಚರರು, 'ನೀವು ಯಾರು. ನಮ್ಮ ಪ್ರದೇಶಕ್ಕೆ ಏಕೆ ಬಂದಿದ್ದೀರಾ' ಎಂದು ಪ್ರಶ್ನಿಸಿದ್ದರು. ಅದರಿಂದ ಸಿಟ್ಟಾಗಿದ್ದ ವರದರಾಜ್, 'ಮನೆಗೆ ಹೋಗುತ್ತಿದ್ದೇವೆ. ಅದನ್ನೆಲ್ಲ ಕೇಳಲು ನೀವು ಯಾರು' ಎಂದು ಕೇಳಿದ್ದರು. ಮಾತಿಗೆ ಮಾತು ಬೆಳೆದು ಜಗಳ ಶುರುವಾಗಿತ್ತು. ಆರೋಪಿ ರಾಜೇಶ್, ಮಚ್ಚಿನಿಂದ ವರದರಾಜ್ ಅವರ ತಲೆಗೆ ಹೊಡೆದಿದ್ದ. ರಕ್ತ ಸೋರಲಾರಂಭಿಸಿತ್ತು. ರಕ್ಷಣೆಗೆ ಹೋಗಿದ್ದ ವಿಜಯ್ ಮೇಲೂ ಆರೋಪಿಗಳು ಹಲ್ಲೆ ಮಾಡಿ ಪರಾರಿಯಾಗಿದ್ದರು' ಎಂದು ತಿಳಿಸಿದರು.

'ಕೃತ್ಯ ನಡೆದ ಜಾಗದಿಂದ 200 ಮೀಟರ್ ದೂರದಲ್ಲಿ ವರದರಾಜ್ ಮನೆ ಇದೆ. ಹೀಗಾಗಿ, ವರದರಾಜ್ ಹಾಗೂ ವಿಜಯ್ ಮನೆಗೆ ಹೋಗಿದ್ದರು. ಗಾಯಗೊಂಡಿದ್ದ ವರದರಾಜ್ ತಲೆಗೆ ವಿಜಯ್ ಪೌಡರ್ ಹಚ್ಚಿದ್ದರು. ರಕ್ತ ಸೋರುವುದು ನಿಂತಿತ್ತು. ಅದೇ ಸ್ಥಿತಿಯಲ್ಲಿಯೇ ವರದರಾಜ್ ಮಲಗಿದ್ದರು. ಬೆಳಿಗ್ಗೆ ಎಚ್ಚರಗೊಂಡಿರಲಿಲ್ಲ. ವಿಜಯ್ ಗಮನಿಸಿದಾಗ, ವರದರಾಜ್ ಮೃತಪಟ್ಟಿದ್ದು ಗೊತ್ತಾಗಿತ್ತು. ಅವರೇ ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಹೇಳಿದರು.

'ವಿಜಯ್ ಅವರ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ರಾಜೇಶ್ ಹಾಗೂ ಸಹಚರರ ಪತ್ತೆಗೆ ವಿಶೇಷ ತಂಡ ಕಾರ್ಯಾಚರಣೆ ಆರಂಭಿಸಿದೆ' ಎಂದು ಪೊಲೀಸರು ತಿಳಿಸಿದರು.

ದ್ವಿಚಕ್ರ ವಾಹನಕ್ಕೆ ಗೂಡ್ಸ್ ಟೆಂಪೊ ಡಿಕ್ಕಿ: ಸವಾರ ಸಾವು

ಬೆಂಗಳೂರು: ಮೈಸೂರು ಸ್ಯಾಂಡಲ್ ಸೋಪ್ ಕಾರ್ಖಾನೆ ಮೆಟ್ರೊ ನಿಲ್ದಾಣ ಬಳಿ ಗೂಡ್ಸ್ ಟೆಂಪೊ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಜಯಚಂದ್ರ (22) ಅವರು ಮೃತಪಟ್ಟಿದ್ದಾರೆ.

'ಮಹಾಲಕ್ಷ್ಮಿ ಲೇಔಟ್ ನಿವಾಸಿ ಜಯಚಂದ್ರ, ಹೋಟೆಲ್ ನಡೆಸುತ್ತಿದ್ದರು. ಸ್ನೇಹಿತನ ಜೊತೆ ಊಟಕ್ಕೆಂದು ಗುರುವಾರ ರಾತ್ರಿ ಪಶ್ಚಿಮ ಕಾರ್ಡ್ ರಸ್ತೆ ಮೂಲಕ ಹೊರಟಿದ್ದಾಗ ಈ ಅಪಘಾತ ಸಂಭವಿಸಿದೆ' ಎಂದು ಮಲ್ಲೇಶ್ವರ ಸಂಚಾರ ಪೊಲೀಸರು ಹೇಳಿದರು.

'ಜಯಚಂದ್ರ ಅವರು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರು. ಅವರು ಹೊರಟಿದ್ದ ರಸ್ತೆಯಲ್ಲಿ ಗೂಡ್ಸ್ ಟೆಂಪೊ ತೆರಳುತ್ತಿತ್ತು. ಚಾಲಕ ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಟೆಂಪೊ ಚಲಾಯಿಸಿದ್ದ. ಇದರಿಂದಾಗಿ ದ್ವಿಚಕ್ರ ವಾಹನಕ್ಕೆ ಟೆಂಪೊ ಡಿಕ್ಕಿ ಹೊಡೆದಿತ್ತು.'

'ವಾಹನ ಸಮೇತ ರಸ್ತೆಗೆ ಬಿದ್ದಿದ್ದ ಜಯಚಂದ್ರ ತೀವ್ರ ಗಾಯಗೊಂಡಿದ್ದರು. ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ಗೂಡ್ಸ್ ಟೆಂಪೊ ಸಮೇತ ಚಾಲಕ ಪರಾರಿಯಾಗಿದ್ದಾನೆ. ಜಯಚಂದ್ರ, ಹೆಲ್ಮೆಟ್ ಧರಿಸಿರಲಿಲ್ಲವೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದರು.

ಸುದ್ದಿ 2 ನಿಮಿಷ

ವಿದ್ಯುತ್ ದರ ಹೆಚ್ಚಳ ಮುಂದೂಡಲು ಆಗ್ರಹ

ಬೆಂಗಳೂರು: ವಿದ್ಯುತ್ ದರ ಹೆಚ್ಚಳವನ್ನು ಮುಂದಿನ ವರ್ಷಕ್ಕೆ ಮುಂದೂಡಬೇಕು ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ಆಗ್ರಹಿಸಿದೆ.

ವಿದ್ಯುತ್ ದರ ಆಗಾಗ ಹೆಚ್ಚಿಸುವುದರಿಂದ ಎಲ್ಲ ಉದ್ಯಮಗಳ ಮಾಲೀಕರಿಗೆ ತೊಂದರೆಯಾಗುತ್ತಿದೆ. ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕೆ (ಎಫ್‌ಪಿಪಿಸಿಎ), ನಿಗದಿತ ಬೇಡಿಕೆ ದರ ಹೆಚ್ಚಾಗಿದೆ. ಏರಿಕೆಯಾಗಿರುವ ದರದ ಮೇಲೂ ಶೇ 9 ತೆರಿಗೆಯೂ ಹೆಚ್ಚಳವಾಗಿದೆ. ಹಾಗಾಗಿ ಈ ದರ ಹೆಚ್ಚಳವನ್ನು ಒಂದು ವರ್ಷದ ಅವಧಿಗೆ ಮುಂದೂಡಬೇಕು ಎಂದು ಒತ್ತಾಯಿಸಿದ್ದಾರೆ.

ವಿದ್ಯುತ್ ತೆರಿಗೆಯನ್ನು ಶೇ 9ರಿಂದ ಶೇ 3ಕ್ಕೆ ಇಳಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳು ಪಾವತಿಸಬೇಕಾದ ಬಾಕಿ ಮೊತ್ತವನ್ನು ಬಡ್ಡಿ ಸಹಿತ ಸಂಗ್ರಹಿಸಬೇಕು. ಪ್ರಿಪೇಡ್ ಮೀಟರ್ ಅಳವಡಿಸಿ ಗ್ರಾಹಕರ ಠೇವಣಿ ಹಣವನ್ನು ಹಿಂತಿರುಗಿಸಬೇಕು. ಅನಗತ್ಯ ಆಡಳಿತಾತ್ಮಕ ವೆಚ್ಚಗಳನ್ನು ನಿಯಂತ್ರಿಸಬೇಕು ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್, ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ಅವರು ಇಂಧನ ಸಚಿವರಿಗೆ ಸಲ್ಲಿಸಿರುವ ಮನವಿಯಲ್ಲಿ ಆಗ್ರಹಿಸಿದ್ದಾರೆ.

'ವಿದ್ಯುತ್ ಅವಘಡಗಳ ಜಾಗೃತಿ'



ಬೆಂಗಳೂರು: 'ಇಂಧನ ಇಲಾಖೆಯಲ್ಲಿ ದಿನಕ್ಕೆ ಕನಿಷ್ಠ ಒಬ್ಬರು ವಿದ್ಯುತ್ ಅವಘಡದಿಂದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡರೂ ಅವಘಡ ತಡೆಯುವುದು ದುಸ್ತರವಾಗಿದೆ' ಎಂದು ರಂಗತಜ್ಞ ಎ.ಆರ್.ಗೋವಿಂದಸ್ವಾಮಿ ಹೇಳಿದರು.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಸಭಾಂಗಣದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೋವಿಂದಸ್ವಾಮಿ ಅವರ 'ರಾಜನಾಯಕತ್ವ' ಕೃತಿಯನ್ನು ಬಿಡುಗಡೆ ಮಾಡಿದರು.

'ವಿದ್ಯುತ್ ಅವಘಡಗಳಿಗೆ ವಾರ್ಷಿಕ 360ರಿಂದ 400 ಜನ ಸಾವಿಗೀಡಾಗುತ್ತಿದ್ದಾರೆ. ಈ ಅವಘಡಗಳನ್ನು ತಡೆಯುವುದು ಕೃತಿಯ ಉದ್ದೇಶವಾಗಿದ್ದು, ಒಂದು ಜೀವ ಉಳಿದರೂ ಕೃತಿಯ ಆಶಯ ಸಾಕಾರವಾಗಲಿದೆ' ಎಂದು ಗೋವಿಂದಸ್ವಾಮಿ ತಿಳಿಸಿದರು.

'ಈ ಕೃತಿ ಮಾದರಿ ನಾಯಕತ್ವವನ್ನು ಹೇಳುವ ಜೊತೆಗೆ ವಿದ್ಯುತ್ ವಲಯದಲ್ಲಿ ಜರುಗುವ ಅವಘಡಗಳ ತಡೆ ಬಗ್ಗೆ ಹೇಳಿದೆ. ವಿದ್ಯುತ್ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸಲು ಸಹಕಾರಿಯಾಗಿದೆ' ಎಂದು ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

ಕೆಲಸದ ಆಮಿಷವೊಡ್ಡಿ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದ ಮಹಿಳೆಯೊಬ್ಬರನ್ನು ಕೆಲಸದ ಆಮಿಷವೊಡ್ಡಿ ಮನೆಯೊಂದಕ್ಕೆ ಕರೆದೊಯ್ದು ಹಲ್ಲೆ ಮಾಡಿ ಲೈಂಗಿಕ ದೌರ್ಜನ್ಯ ಎಸಗಲಾಗಿದ್ದು, ಈ ಸಂಬಂಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿರುವ 30 ವರ್ಷ ವಯಸ್ಸಿನ ಮಹಿಳೆ ದೂರು ನೀಡಿದ್ದಾರೆ. ಮೂವರು ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎರಡು ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿರುವ ಮಹಿಳೆ, ಸಹೋದರನ ಕೊಠಡಿಯಲ್ಲಿ ಉಳಿದುಕೊಂಡಿದ್ದಾರೆ. ಅವರಿಗೆ ತಮ್ಮದೇ ರಾಜ್ಯದ ಮಹಿಳೆಯೊಬ್ಬರ ಪರಿಚಯವಾಗಿತ್ತು. 'ನನ್ನ ಪರಿಚಯಸ್ಥರ ಮನೆಯಲ್ಲಿ ಕೆಲಸ ಇದೆ. ನೀನು ಹೋದರೆ ಸಿಗುತ್ತದೆ' ಎಂದು ಪರಿಚಯಸ್ಥ ಮಹಿಳೆ ಹೇಳಿದ್ದರು. ಅದನ್ನು ಸಂತ್ರಸ್ತೆ ನಂಬಿದ್ದರು.'

'ಜೂನ್ 10ರಂದು ಸಂತ್ರಸ್ತೆ ಶಾಂತಿನಗರ ಬಸ್ ನಿಲ್ದಾಣಕ್ಕೆ ಬಂದಿದ್ದರು. ಪರಿಚಯಸ್ಥ ಮಹಿಳೆ ಹೆಸರು ಹೇಳಿ ಮಾತನಾಡಿಸಿದ್ದ ಮೂವರು ಅಪರಿಚಿತರು, ರಾತ್ರಿ 10 ಗಂಟೆ ಸುಮಾರಿಗೆ ತಮ್ಮ ಮನೆಗೆ ಕರೆದೊಯ್ದಿದ್ದರು. ಸಂತ್ರಸ್ತೆ ಜೊತೆ ಅಸಭ್ಯವಾಗಿ ವರ್ತಿಸಿದ್ದ ಆರೋಪಿಗಳು, ಲೈಂಗಿಕವಾಗಿ ಸಹಕರಿಸುವಂತೆ ಒತ್ತಾಯಿಸಿದ್ದರು. ಅದಕ್ಕೆ ಸಂತ್ರಸ್ತೆ ಒಪ್ಪಿರಲಿಲ್ಲ. ಸಿಟ್ಟಾದ ಆರೋಪಿಗಳು, ಸಂತ್ರಸ್ತೆಯ ಎದೆಗೆ ಕಚ್ಚಿ ಮುಖಕ್ಕೆ ಹೊಡೆದಿದ್ದರು. ಗಾಯಗೊಂಡ ಮಹಿಳೆ ಕೂಗಾಡುತ್ತ ಮನೆಯಿಂದ ಹೊರಗೆ ಓಡಿ ಬಂದಿದ್ದರು. ಸ್ಥಳೀಯರು ಸೇರುತ್ತಿದ್ದಂತೆ ಆರೋಪಿಗಳು ಸ್ಥಳದಿಂದ ಓಡಿ ಹೋಗಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಂತ್ರಸ್ತೆ ಚಿಕಿತ್ಸೆ ಪಡೆದುಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಪ್ರತಿಭಟನೆ

ಹಿಂದಿನ ಬಿಜೆಪಿ ಸರ್ಕಾರವು ಜಾರಿಗೆ ತಂದಿದ್ದ ಮತಾಂತರ ನಿಷೇಧ ಕಾಯ್ದೆಯನ್ನು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ವಾಪಸ್ ಪಡೆಯುವ ತೀರ್ಮಾನವನ್ನು ಖಂಡಿಸಿ ವಿಶ್ವ ಹಿಂದೂ ಪರಿಷತ್ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಕೆಆರ್‌ಐಡಿಎಲ್: ₹13 ಸಾವಿರ ಕೋಟಿ ಮೊತ್ತದ ಕಾಮಗಾರಿ!

ಗಾಂಧಿನಗರ ವಿಧಾನಸಭೆ ಕ್ಷೇತ್ರ: 13 ಪ್ರಕರಣಗಳಲ್ಲಿ ಎಫ್‌ಐಆರ್

● ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದಲ್ಲೇ ₹118 ಕೋಟಿ ಮೊತ್ತದ ಕಾಮಗಾರಿಗಳ ಹಗರಣದಲ್ಲಿ ಸಿಲುಕಿರುವ ಕೆಆರ್‌ಐಡಿಎಲ್, 2015ರಿಂದ ಆರು ವರ್ಷದಲ್ಲಿ ಬಿಬಿಎಂಪಿ ವ್ಯಾಪ್ತಿಯ ದಾಖಲೆ ಪ್ರಕಾರ ₹13 ಸಾವಿರ ಕೋಟಿ ಮೊತ್ತದ ಕಾಮಗಾರಿಗಳನ್ನು ನಡೆಸಿದೆ.

ಬಿಬಿಎಂಪಿ ವ್ಯಾಪ್ತಿಯ ಎಲ್ಲ ವಿಧಾನಸಭೆ ಕ್ಷೇತ್ರದಲ್ಲೂ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತದಿಂದ (ಕೆಆರ್‌ಐಡಿಎಲ್) ವಿವಿಧ ಕಾಮಗಾರಿಗಳನ್ನು ನಿರ್ವಹಿಸಿದೆ. ಇಲ್ಲೆಲ್ಲ ಸಾವಿರಾರು ಕೋಟಿ ಮೊತ್ತದ ಅವ್ಯವಹಾರವಾಗಿರುವ ಬಗ್ಗೆ ಎಸಿಬಿಯಲ್ಲಿ 2022ರ ಮಾರ್ಚ್ 15ರಂದು ದೂರು ದಾಖಲಾಗಿತ್ತು. ಅದು ಇದೀಗ ಲೋಕಾಯುಕ್ತಕ್ಕೆ ವರ್ಗಾವಣೆಯಾಗಿದ್ದು, ವಿಚಾರಣೆ ಆರಂಭವಾಗಿದೆ.

ನಕಲಿ ಬಿಲ್ ಹಗರಣದಲ್ಲಿ ₹113 ಕಾಮಗಾರಿಗಳನ್ನು ನಡೆಸಿಲ್ಲದಿರುವುದು ಸಾಬೀತಾದ ಮೇಲೆ, ಲೋಕಾಯುಕ್ತರು ಕೆಆರ್‌ಐಡಿಎಲ್ ನಿರ್ವಹಿಸಿರುವ ಎಲ್ಲ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಸಲಹೆ ನೀಡಿದ್ದರು. ಇದೀಗ ₹13 ಸಾವಿರ ಕೋಟಿ ಮೊತ್ತದ ಕಾಮಗಾರಿ ವಿರುದ್ಧ ದೂರನ್ನು ಲೋಕಾಯುಕ್ತ ತನಿಖೆ ಮಾಡಲಿದೆ.

ಬೆಂಗಳೂರು ದಕ್ಷಿಣ ಜಿಲ್ಲೆ ಬಿಜೆಪಿ ಘಟಕದ ಅಧ್ಯಕ್ಷ ರಮೇಶ್ ಎನ್.ಆರ್. ನೀಡಿರುವ ದೂರಿನಲ್ಲಿ, 2015–16ರಿಂದ 2020–21ರವರೆಗಿನ ಆರು ವರ್ಷದ ಅವಧಿಯಲ್ಲಿ ₹12,943,83,44,615 ಮೊತ್ತದ ಅನುದಾನವನ್ನು ಕೆಆರ್‌ಐಡಿಎಲ್ ಮೂಲಕ ನಿರ್ವಹಿಸುವ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದ ಕಾರ್ಯಾದೇಶಗಳ ಸಹಿತದ ಮಾಹಿತಿಯನ್ನು 3,892 ಪುಟಗಳಲ್ಲಿ ನೀಡಲಾಗಿದೆ. ಇದೇ ಅವಧಿಯಲ್ಲಿ ಕೆಆರ್‌ಐಡಿಎಲ್ ಸಂಸ್ಥೆಯ ಮೂಲಕ ಕಾಮಗಾರಿ ಪೂರ್ಣಗೊಳಿಸಿರುವ 'ಉಪ ಗುತ್ತಿಗೆದಾರರಿಗೆ' ₹8092,56,30,831 ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ಬಿಬಿಎಂಪಿಯಿಂದ ಅಧಿಕೃತವಾಗಿ ಪಡೆಯಲಾಗಿರುವ 6,932 ಪುಟಗಳ ದಾಖಲೆಯನ್ನೂ ಸಲ್ಲಿಸಿದ್ದಾರೆ.

ಕೆಆರ್‌ಐಡಿಎಲ್ ವತಿಯಿಂದ ಅತಿ ತುರ್ತು ಕಾಮಗಾರಿಗಳನ್ನು ಮೇಯರ್ ಹಾಗೂ ಉಪ ಮೇಯರ್ ಅನುದಾನಗಳ ಮೂಲಕ ಕೈಗೊಳ್ಳಬೇಕು ಎಂದು ಸರ್ಕಾರದ ಆದೇಶಗಳಲ್ಲಿದೆ. ಆದರೆ, ಎಂಜಿನಿಯರ್‌ಗಳ ತಂಡವನ್ನು ಹೊಂದದೆ, ಕಾಮಗಾರಿಯನ್ನು ಪಡೆದು ಉಪ ಗುತ್ತಿಗೆದಾರರಿಗೆ ಅದನ್ನು ವಹಿಸುವುದಷ್ಟೇ ಕೆಆರ್‌ಐಡಿಎಲ್ ಕೆಲಸವಾಗಿದೆ. ಉಪ ಗುತ್ತಿಗೆದಾರರಿಗೆ 'ಗ್ರೂಪ್ ಲೀಡರ್' ಎಂಬ ಹೆಸರು ಕೊಡಲಾಗುತ್ತದೆ. ಪ್ರತಿಯೊಂದು ಕಾಮಗಾರಿಗೆ ಅಂದಾಜು ಮೊತ್ತದ ಶೇ 11ರಷ್ಟು ಸೇವಾ ಶುಲ್ಕವನ್ನು ಕೆಆರ್‌ಐಡಿಎಲ್ ಪಡೆದುಕೊಳ್ಳುತ್ತದೆ.

ಕೆಆರ್‌ಐಡಿಎಲ್‌ಗೆ ವಹಿಸಲಾಗಿರುವ ಕಾಮಗಾರಿಗಳಲ್ಲಿ ಶೇ 50ರಷ್ಟರಲ್ಲಿ ನಿರ್ವಹಣೆ ಮಾಡದೆ, ಕಾಮಗಾರಿಗಳನ್ನು ನಿರ್ವಹಿಸಿರುವುದಿಲ್ಲ. ಗಾಂಧಿನಗರ ವಿಧಾನಸಭೆ ಕ್ಷೇತ್ರದಲ್ಲಿ 13 ಪ್ರಕರಣಗಳಲ್ಲಿ ಇಂತಹ ಹಗರಣ ಬೆಳಕಿಗೆ ಬಂದು ಆರೋಪಿಗಳ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿದೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

'ಹೀಗಾಗಿ, 13 ಸಾವಿರ ಕೋಟಿ ಮೊತ್ತದ ಕೆಆರ್‌ಐಡಿಎಲ್ ಕಾಮಗಾರಿಗಳನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಬೇಕು. ಬೇನಾಮಿ ಉಪ ಗುತ್ತಿಗೆದಾರಿಗೆ ಹಣ ಬಿಡುಗಡೆ ಮಾಡಿದವರು ಮತ್ತು ಹಣ ಪಡೆದವರ ಮೇಲೆ ಕಾನೂನುಕ್ರಮ ಕೈಗೊಳ್ಳಬೇಕು' ಎಂದು ರಮೇಶ್ ಆಗ್ರಹಿಸಿದ್ದಾರೆ.

ಗೃಹ ಜ್ಯೋತಿ ನೋಂದಣಿಗೆ 'ಆಧಾರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಡಿಗೆದಾರರು ಹಾಗೂ ಇತರೆ ಗ್ರಾಹಕರು ಗೃಹ ಜ್ಯೋತಿ ಯೋಜನೆಯ ಸೌಲಭ್ಯ ಪಡೆಯಲು ಆಧಾರ್ ಸಂಖ್ಯೆಯನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ ಜೋಡಿಸುವಂತೆ ಇಂಧನ ಇಲಾಖೆ ತಿಳಿಸಿದೆ.

ಈ ಬಗ್ಗೆ ಉಂಟಾಗಿರುವ ಗೊಂದಲಗಳಿಗೆ ಇಂಧನ ಇಲಾಖೆ ಈ ಸ್ಪಷ್ಟನೆ ನೀಡಿದೆ.

ಈ ಯೋಜನೆಯು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವವರಿಗೆ ಗೃಹ ವಿದ್ಯುತ್ ಬಳಕೆದಾರಿಗೂ ಅನ್ವಯವಾಗಲಿದೆಯೇ ಎನ್ನುವ ಪ್ರಶ್ನೆಗೆ ಈ ವಿವರ ನೀಡಲಾಗಿದೆ.

ಗೃಹ ವಿದ್ಯುತ್ ಬಳಕೆದಾರರು ಬಾಡಿಗೆದಾರರಾಗಿದ್ದಲ್ಲಿ, ವಾಸದ ಮನೆಯ ವಿಳಾಸಕ್ಕೆ ಸಂಬಂಧಿಸಿದಂತೆ ಆಧಾರ್ ಸಂಖ್ಯೆಯನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ ಜೋಡಣೆ ಮಾಡಿ ನೋಂದಾಯಿಸುವ ಮೂಲಕ ಈ ಸೌಲಭ್ಯ ಪಡೆಯಬಹುದಾಗಿದೆ.

ಗೃಹ ಜ್ಯೋತಿ ಯೋಜನೆಯನ್ನು ಕೆಲವು ಷರತ್ತುಗಳೊಂದಿಗೆ ಜುಲೈ 1ರಿಂದ ಜಾರಿಗೊಳಿಸಲು ಅನುಮೋದನೆ ನೀಡಲಾಗಿದೆ. ಈ ಯೋಜನೆಯ ನೋಂದಣಿ ಇದೇ 18ರಿಂದ ಆರಂಭವಾಗಲಿದೆ.


ಈ ಯೋಜನೆಯ ಲಾಭ ಪಡೆಯಲು ಇಚ್ಛಿಸುವ ಫಲಾನುಭವಿಗಳು ಸೇವಾ ಸಿಂಧು ಪೋರ್ಟಲ್‌ನಲ್ಲಿ ವಿಶೇಷವಾಗಿ ರೂಪಿಸಿರುವ https://sevasindhugs.karnataka.gov.in/gruhajyothi ವಿಳಾಸದಲ್ಲಿ ಲಾಗಿನ್ ಆಗಿ ನೋಂದಾಯಿಸಬೇಕು.

ಎರಡು ಸಾವಿರ ದಾಟಿದ ಡೆಂಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈ ತಿಂಗಳು 15 ದಿನಗಳಲ್ಲಿ 166 ಮಂದಿ ಡೆಂಗಿ ಜ್ವರದಿಂದ ಬಳಲಿದ್ದಾರೆ. ಇದರಿಂದಾಗಿ ಡೆಂಗಿ ಪ್ರಕರಣಗಳ ಒಟ್ಟು ಸಂಖ್ಯೆ ಎರಡು ಸಾವಿರದ ಗಡಿ (2,003) ದಾಟಿದೆ.

ಪ್ರತಿ ವರ್ಷ ಮುಂಗಾರು ಮಳೆ ಪ್ರಾರಂಭವಾದ ಬಳಿಕ ಪ್ರಕರಣಗಳ ಸಂಖ್ಯೆ ಏರುಗತಿ ಪಡೆಯುತ್ತಿದೆ. ಈ ವರ್ಷ ಈಗಾಗಲೇ 70 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 23 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಕಳೆದ ವರ್ಷ 9,620 ಮಂದಿ ಡೆಂಗಿ ಜ್ವರದಿಂದ ಬಳಲಿದ್ದರು. ಅವರಲ್ಲಿ ಒಂಬತ್ತು ಮಂದಿ ಜ್ವರದ ತೀವ್ರತೆಗೆ ಮೃತಪಟ್ಟಿರುವುದು ದೃಢಪಟ್ಟಿತ್ತು. ಈ ವರ್ಷ ಯಾವುದೇ ಮರಣ ವರದಿಯಾಗಿಲ್ಲ.



ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 1,009 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದ್ದು, 732 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 156, ವಿಜಯಪುರದಲ್ಲಿ 113, ಚಿತ್ರದುರ್ಗದಲ್ಲಿ 91, ಬೆಳಗಾವಿಯಲ್ಲಿ 78, ಧಾರವಾಡದಲ್ಲಿ 71, ಬಳ್ಳಾರಿಯಲ್ಲಿ 69 ಹಾಗೂ ಶಿವಮೊಗ್ಗದಲ್ಲಿ 56 ಪ್ರಕರಣ ವರದಿಯಾಗಿದೆ.

498 ಮಂದಿಯಲ್ಲಿ ದೃಢ: 27 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 13 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 10 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 498 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ವಿಜಯಪುರ (78) ಹಾಗೂ ಮೈಸೂರಿನಲ್ಲಿ (56) ಅಧಿಕ ಪ್ರಕರಣಗಳು ವರದಿಯಾಗಿವೆ.

'ಮನೆಯ ಸುತ್ತಮುತ್ತಲಿನ ಘನತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಶೇಖರಣೆಯಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ನೀರು ಶೇಖರಣೆಯಾದಲ್ಲಿ ಈಡೀಸ್ ಸೊಳ್ಳೆಗಳು ಉತ್ಪತ್ತಿಯಾಗಿ, ಡೆಂಗಿ ಜ್ವರಕ್ಕೆ ಕಾರಣವಾಗುತ್ತವೆ. ಈ ಜ್ವರಕ್ಕೆ ಲಸಿಕೆ ಇಲ್ಲದಿರುವುದರಿಂದ ಲಕ್ಷಣದ ಆಧಾರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ರೋಗ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ರಕ್ತ ಪರೀಕ್ಷೆ ಹಾಗೂ ಚಿಕಿತ್ಸೆ ನೀಡಲಾಗುತ್ತದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.



ಎಕ್ಸೆಡಿ ಕಾರ್ಪೊರೇಷನ್ ಹಾಗೂ ಸ್ಟಾರ್ಯ ಮೊಬಿಲಿಟಿ ಜಂಟಿ ಸಹಭಾಗಿತ್ವದಲ್ಲಿ ಭಾರತದಲ್ಲಿ ಕಾರ್ಯಾಚರಣೆ ನಡೆಸಲು ಎಕ್ಸೆಡಿ ಕಾರ್ಪೊರೇಷನ್ ಅಧ್ಯಕ್ಷ, ಸಿಇಒ ಟೆಟ್ಸುಯಾ ಯೋಶಿನಾಗಾ ಹಾಗೂ ಸ್ಟಾರ್ಯ ಮೊಬಿಲಿಟಿ ಸಹಸಂಸ್ಥಾಪಕ, ಸಿಇಒ ರವಿಕುಮಾರ್ ಒಪ್ಪಂದಕ್ಕೆ ಸಹಿ ಮಾಡಿದರು

ಮುಖ್ಯಮಂತ್ರಿ–ಉಪ ಮುಖ್ಯಮಂತ್ರಿ ವಿರುದ್ಧದ ಎಫ್‌ಐಆರ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಅಣೆಕಟ್ಟು ನಿರ್ಮಾಣ ಯೋಜನೆ ಜಾರಿಗೆ ಆಗ್ರಹಿಸಿ ಪಾದಯಾತ್ರೆ ನಡೆಸಿದ ಸಂದರ್ಭದಲ್ಲಿ ಕೋವಿಡ್ ನಿಯಮ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿ ಕಾಂಗ್ರೆಸ್‌ನ ಹಲವು ಸಚಿವರು ಮತ್ತು ಮುಖಂಡರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್‌ಗಳನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧದ ಅರ್ಜಿಗಳನ್ನು ಶುಕ್ರವಾರ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಮೇಲ್ಮನವಿ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು ರಾಮನಗರ ಗ್ರಾಮೀಣ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ರದ್ದುಪಡಿಸಿದೆ.

'ಕೋವಿಡ್ ನಿಯಮಗಳನ್ನು ಉಲ್ಲಂಘಿಸದಂತೆ ನಿರ್ದೇಶಿಸಿ ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆಯಡಿ ಅಧಿಸೂಚನೆ ಹೊರಡಿಸಲಾಗಿತ್ತು. ಇದನ್ನು ಕರ್ನಾಟಕ ಸಾಂಕ್ರಾಮಿಕ ರೋಗಗಳ ಕಾಯ್ದೆ ಅಡಿ ಹೊರಡಿಸಿಲ್ಲ. ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ಸಾಂಕ್ರಾಮಿಕ ರೋಗಗಳ ಕಾಯ್ದೆಯಡಿ ಕ್ರಮ ಜರುಗಿಸಲು ಸರ್ಕಾರ ಮುಂದಾಗಿದ್ದು, ಅದಕ್ಕೆ ಕಾನೂನಿನಡಿ ಅವಕಾಶವಿಲ್ಲ. ಹಾಗಾಗಿ, ಅರ್ಜಿದಾರರ ವಿರುದ್ಧದ ಎಫ್‌ಐಆರ್ ರದ್ದುಪಡಿಸಲಾಗುತ್ತಿದೆ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷವು 2022ರ ಜನವರಿ 9ರಿಂದ 10 ದಿನಗಳ ಪಾದಯಾತ್ರೆ ಹಮ್ಮಿಕೊಂಡಿತ್ತು. ಪಾದಯಾತ್ರೆಯಲ್ಲಿ ಕೋವಿಡ್ ನಿಯಮ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಈಗ ಸಚಿವರಾಗಿರುವ ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ, ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಶಾಸಕ ಟಿ.ಬಿ. ಜಯಚಂದ್ರ, ಮಾಜಿ ಸಚಿವ ಎಚ್.ಆಂಜನೇಯ, ಮಾಜಿ ಸಂಸದ ದಿವಂಗತ ಧ್ರುವನಾರಾಯಣ್, ಕಾಂಗ್ರೆಸ್ ಮುಖಂಡರಾದ ಕೆ.ರಾಜು, ಡಾ. ರವೀಂದ್ರ, ಕುಸುಮಾ, ಪಾರ್ವತಮ್ಮ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಡಿಕೆಶಿ ವಿರುದ್ಧದ ಐದು ಪ್ರಕರಣಗಳ ರದ್ದು: ಕೋವಿಡ್ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಡಿ.ಕೆ.ಶಿವಕುಮಾರ್ ವಿರುದ್ಧ ಸಾತನೂರು ಠಾಣೆಯಲ್ಲಿ ದಾಖಲಿಸಲಾಗಿದ್ದ ಮೂರು ಪ್ರತ್ಯೇಕ ಪ್ರಕರಣಗಳು, ಕನಕಪುರ ಮತ್ತು ಐಜೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ತಲಾ ಒಂದು ಎಫ್‌ಐಆರ್ ಅನ್ನು ನ್ಯಾಯಪೀಠ ಇದೇ ವೇಳೆ ರದ್ದುಪಡಿಸಿದೆ. ಅಂತೆಯೇ, ಬೆಂಗಳೂರಿನ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ತಡೆ ನೀಡಿ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿದೆ.

ಕೇತಗನಾನಹಳ್ಳಿ ಭೂ ಕಬಳಿಕೆ ಆರೋಪ ಪ್ರಕರಣ ● ಅನುಪಾಲನಾ ವರದಿ ಸಲ್ಲಿಸಲು ಸೂಚನೆ

ರಾಜ್ಯ ಸರ್ಕಾರದ ವಾದಕ್ಕೆ ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಎಚ್.ಡಿ. ಕುಮಾರಸ್ವಾಮಿ ಹಾಗೂ ಡಿ.ಸಿ.ತಮ್ಮಣ್ಣ ಅವರ ಸಂಬಂಧಿ ಸಾವಿತ್ರಮ್ಮ ವಿರುದ್ಧ ಕೇತಗಾನಹಳ್ಳಿ ಭೂ ಕಬಳಿಕೆ ಆರೋಪ ಪ್ರಕರಣದಲ್ಲಿ ಕಬಳಿಕೆಯಾದ ಸರ್ಕಾರಿ ಜಮೀನನ್ನು ವಶಕ್ಕೆ ಪಡೆಯಲು ಸೂಚಿಸಿರುವ ನ್ಯಾಯಾಲಯದ ಆದೇಶಕ್ಕೆ ಸಂಬಂಧಿಸಿದಂತೆ ಅನುಪಾಲನಾ ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಜುಲೈ 7ರವರೆಗೆ ಕಾಲಾವಕಾಶ ನೀಡಿದೆ.


'ಪ್ರಕರಣದಲ್ಲಿ ಒತ್ತುವರಿ ಜಮೀನು ವಶಕ್ಕೆ ಪಡೆಯಲು ಸೂಚಿಸಿದ ಹೈಕೋರ್ಟ್ ಆದೇಶ ಜಾರಿಗೊಳಿಸಲು ಸರ್ಕಾರ ವಿಫಲವಾಗಿದೆ' ಎಂದು ಆರೋಪಿಸಿ ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್. ಹಿರೇಮಠ ಅವರು ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು ಹಾಜರಾಗಿ, 'ಒತ್ತುವರಿ ತೆರವುಗೊಳಿಸುವಂತೆ ಸೂಚಿಸಿ ಸಂಬಂಧಪಟ್ಟವರಿಗೆ ನೋಟಿಸ್ ನೀಡಲಾಗಿತ್ತು. ಅವರು ಉತ್ತರಿಸಿದ್ದು, ನಾವು ಸರ್ಕಾರಿ ಜಮೀನು ಒತ್ತುವರಿ ಮಾಡಿಲ್ಲ. ಸರ್ಕಾರ ಕೆಲವರಿಗೆ ಜಮೀನು ಮಂಜೂರು ಮಾಡಿದೆ. ಅವರಿಂದ ನಾವು ಖರೀದಿ ಮಾಡಿದ್ದೇವೆ ಎಂದು ವಿವರಣೆ ನೀಡಿದ್ದಾರೆ. ಆ ಕುರಿತ ದಾಖಲೆಗಳನ್ನು ಪರಿಶೀಲನೆ ನಡೆಸಲು ಸರ್ಕಾರ ಮುಂದಾದಾಗ ದಾಖಲೆಗಳು ನಾಶವಾಗಿರುವುದು ಕಂಡು ಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ನೀಡಲು ಮತ್ತು ಹೈಕೋರ್ಟ್‌ನ ಹಿಂದಿನ ಆದೇಶಗಳ ಅನುಪಾಲನಾ ವರದಿ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಈ ವಿವರಣೆಯನ್ನು ಒಪ್ಪದ ನ್ಯಾಯಪೀಠ, 'ದಾಖಲೆಗಳು ನಾಶವಾಗಿವೆ ಎಂದರೆ ಏನರ್ಥ? ಸರ್ಕಾರಿ ಭೂಮಿ ಮತ್ತು ದಾಖಲೆಗಳಿಗೆ ಸರ್ಕಾರವೇ ಕಸ್ಟೋಡಿಯನ್ ಆಗಿರುತ್ತದೆ. ದಾಖಲೆಗಳು ನಾಶವಾಗಿವೆ ಎಂದು ಹೇಳಿದರೆ ಒಪ್ಪಲಾಗದು. ಪ್ರಕರಣದಲ್ಲಿ ಏನೆಲ್ಲಾ ಕ್ರಮ ಜರುಗಿಸಬೇಕು ಎಂಬ ಬಗ್ಗೆ ಸರ್ಕಾರ ಪರಿಶೀಲಿಸಬೇಕು. ಇಲ್ಲವಾದರೆ ನ್ಯಾಯಾಲಯವೇ ಅಗತ್ಯ ಕ್ರಮ ಜರುಗಿಸಲಿದೆ' ಎಂದು ಮೌಖಿಕ ಎಚ್ಚರಿಕೆ ನೀಡಿತು.

ಆಕ್ಷೇಪಣೆ ಏನು?: 'ಪ್ರಕರಣದಲ್ಲಿ ಒಟ್ಟು 71 ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿದೆಯೇ ಹೊರತು 14 ಎಕರೆ 14 ಗುಂಟೆಯಲ್ಲ. ಈ ಕುರಿತು 2014ರ ಆಗಸ್ಟ್ 4ರಂದು ನೀಡಿದ ಲೋಕಾಯುಕ್ತ ವರದಿಯನ್ನು ಸರ್ಕಾರ ಒಪ್ಪಿಕೊಂಡಿದೆ. ಲೋಕಾಯುಕ್ತ ವರದಿ ಜಾರಿಗೊಳಿಸಲಾಗುವುದು ಎಂಬುದಾಗಿ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಭರವಸೆ ನೀಡಿದೆ. ಆದರೆ, ಈವರೆಗೂ ಒತ್ತುವರಿಯಾದ ಜಮೀನನ್ನು ಸರ್ಕಾರ ವಶಕ್ಕೆ ಪಡೆದಿಲ್ಲ' ಎಂದು ಅರ್ಜಿದಾರು ಆಕ್ಷೇಪಿಸಿದ್ದಾರೆ.

ವಿನಯ ಕುಲಕರ್ಣಿ ಅರ್ಜಿ: ಇಂದು ಸಿಬಿಐ ಆಕ್ಷೇಪಣೆ ಸಲ್ಲಿಕೆ



ಬೆಂಗಳೂರು: ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್‌ನ ಮೇಯರ್ ಹಾಗೂ ಉಪ ಮೇಯರ್ ಚುನಾವಣೆಯಲ್ಲಿ ಮತ ಚಲಾಯಿಸುವ ಕಾರಣಕ್ಕಾಗಿ ಧಾರವಾಡ ಜಿಲ್ಲೆ ಪ್ರವೇಶಿಸಲು ಅನುಮತಿ ನೀಡುವಂತೆ ಕೋರಿ ಧಾರವಾಡ ವಿಧಾನಸಭಾ ಕ್ಷೇತ್ರದ ಶಾಸಕ ವಿನಯ ಕುಲಕರ್ಣಿ ಜನಪ್ರತಿನಿಧಿಗಳ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ' ಇದೇ 17ರಂದು (ಶನಿವಾರ) ವಿಚಾರಣೆ ನಡೆಸಲಿದ್ದು, ಸಿಬಿಐ ತನ್ನ ಆಕ್ಷೇಪಣೆ ಸಲ್ಲಿಸಿ ವಾದ ಮಂಡಿಸಲಿದೆ.

'ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್‌ನ ಮೇಯರ್ ಹಾಗೂ ಉಪ ಮೇಯರ್ ಸ್ಥಾನಕ್ಕೆ ಇದೇ 20ರಂದು ಚುನಾವಣೆ ನಿಗದಿಯಾಗಿದೆ. ನಾನು ಕ್ಷೇತ್ರದ ಶಾಸಕನಾಗಿ ಮತ ಚಲಾಯಿಸಲು ಹಕ್ಕನ್ನು ಪಡೆದಿರುವ ಕಾರಣ ಅಂದು ಬೆಳಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಧಾರವಾಡ ಜಿಲ್ಲೆ ಪ್ರವೇಶಿಸಲು ಅನುಮತಿ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

2016ರ ಜೂನ್ 15ರಂದು ನಡೆದಿದ್ದ ಬಿಜೆಪಿ ಮುಖಂಡ ಹಾಗೂ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶ್ ಗೌಡ ಗೌಡರ್ ಕೊಲೆ ಪ್ರಕರಣದ ಆರೋಪಿಯಾಗಿರುವ ವಿನಯ ಕುಲಕರ್ಣಿ ಅವರಿಗೆ, 'ನ್ಯಾಯಾಲಯದ ಅನುಮತಿ ಇಲ್ಲದೆ ಧಾರವಾಡ ಜಿಲ್ಲೆ ಪ್ರವೇಶಿಸಬಾರದು' ಎಂದು ಕೋರ್ಟ್ ನಿರ್ಬಂಧ ವಿಧಿಸಿದೆ.

ಜಮೀರ್ ಪ್ರಕರಣ ಮುಂದಕ್ಕೆ

ಬೆಂಗಳೂರು: 'ಸಚಿವ ಜಮೀರ್ ಅಹಮದ್ ವಿರುದ್ಧ ದಾಖಲಾಗಿರುವ ಆದಾಯ ಮೀರಿ ಆಸ್ತಿ ಗಳಿಕೆ ಆರೋಪ ಪ್ರಕರಣದಲ್ಲಿ ಆದಾಯ ಮೂಲದ ಮಾಹಿತಿ ನೀಡಿಕೆ ಕಾನೂನು ಬದ್ಧವಾಗಿಲ್ಲ. ದೂರು ನೀಡಿರುವುದು, ಎಫ್‌ಐಆರ್ ದಾಖಲು ಮಾಡಿರುವುದು... ಹೀಗೆ ಎಲ್ಲಾ ಪ್ರಕ್ರಿಯೆಗಳು ಒಂದೇ ದಿನ ನಡೆದಿವೆ' ಎಂದು ಜಮೀರ್ ಅಹಮದ್ ಪರ ವಕೀಲರು ಹೈಕೋರ್ಟ್‌ಗೆ ಅರುಹಿ ಆಕ್ಷೇಪ ವ್ಯಕ್ತಪಡಿಸಿದರು.

'ನನ್ನ ವಿರುದ್ಧ ಎಸಿಬಿ ದಾಖಲಿಸಿರುವ ಎಫ್‌ಐಆರ್‌ಗೆ ತಡೆ ನೀಡಬೇಕು' ಎಂದು ಕೋರಿ ಬಿ.ಝಡ್ ಜಮೀರ್ ಅಹ್ಮದ್ ಖಾನ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಮೇಲ್ಮನವಿ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಜಮೀರ್ ಪರ ಹಾಜರಾಗಿದ್ದ ಹಿರಿಯ ವಕೀಲ ವಿ.ಲಕ್ಷ್ಮಿನಾರಾಯಣ ಅವರು, 'ಲೋಕಾಯುಕ್ತ ದಾಖಲಿಸಿರುವ ದೂರಿನ ಪ್ರಕ್ರಿಯೆ ಮತ್ತು ಎಫ್‌ಐಆರ್ ಕಾನೂನಿಗೆ ವಿರುದ್ಧವಾಗಿದೆ' ಎಂದು ಪ್ರತಿಪಾದಿಸಿದರು. ಕೆಲಕಾಲ ವಾದ ಆಲಿಸಿದ ನ್ಯಾಯಪೀಠ ಲೋಕಾಯುಕ್ತ ಪರ ವಕೀಲರ ವಾದ ಮಂಡನೆಗೆ ಸೂಚಿಸಿ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿದೆ.

ಪ್ರಕರಣವೇನು?: ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಜಮೀರ್ ಅಹ್ಮದ್ ಖಾನ್ ಮನೆ ಮೇಲೆ ದಾಳಿ ನಡೆಸಿದ್ದ ಎಸಿಬಿ, 2022ರ ಮೇನಲ್ಲಿ ಎಫ್‌ಐಆರ್ ದಾಖಲಿಸಿತ್ತು. 'ಶಾಸಕರು ಆದಾಯ ಮೀರಿ ₹ 87 ಕೋಟಿ ಹೆಚ್ಚುವರಿ ಆಸ್ತಿ ಗಳಿಸಿರುವ ಅಂಶ ದಾಳಿ ವೇಳೆ ಪತ್ತೆಯಾಗಿದೆ' ಎಂದು ತಿಳಿಸಿತ್ತು. ಈ ಸಂಬಂಧದ ಜಾರಿ ನಿರ್ದೇಶನಾಲಯದ ವರದಿ ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

ಅಕ್ಕಿ ನಿರಾಕರಣೆ: ಜೂನ್ 20ಕ್ಕೆ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಭಾಗ್ಯ ಯೋಜನೆಗೆ ಅಗತ್ಯವಾದ ಅಕ್ಕಿ ಖರೀದಿಸಲು ಕೇಂದ್ರ ಸರ್ಕಾರ ಹಾಗೂ ಭಾರತೀಯ ಆಹಾರ ಪ್ರಾಧಿಕಾರ ಅವಕಾಶ ನಿರಾಕರಿಸಿರುವುದು ಬಿಜೆಪಿಯ ಬಡವರ ವಿರೋಧಿ ನೀತಿಗೆ ಸಾಕ್ಷಿ. ಇದರ ವಿರುದ್ಧ ಜೂನ್ 20ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಕಾಂಗ್ರೆಸ್ ಪ್ರತಿಭಟನೆ ನಡೆಸಲಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಹೇಳಿದರು.

ರಾಜ್ಯ ಸರ್ಕಾರ ಅನ್ನಭಾಗ್ಯ ಯೋಜನೆ ಮೂಲಕ ಪ್ರತಿಯೊಬ್ಬರಿಗೂ 10 ಕೆ.ಜಿ. ಅಕ್ಕಿ ನೀಡಲು ಬದ್ಧವಾಗಿದೆ. ಇದು ಕಾಂಗ್ರೆಸ್ ನೀಡಿದ್ದ ಗ್ಯಾರಂಟಿ. ಅಧಿಕಾರಕ್ಕೆ ಬಂದ ಮೊದಲ ದಿನವೇ ಆದೇಶ ಹೊರಡಿಸಿ ಬದ್ಧತೆ ಪ್ರದರ್ಶಿಸಿ



ರಾಜ್ಯದಲ್ಲಿ 'ಅನ್ನಭಾಗ್ಯ' ಯೋಜನೆ ಅಡಿ ಬಿಪಿಎಲ್ ಕಾರ್ಡುದಾರರಿಗೆ ಪಡಿತರ ವಿತರಿಸಲು ಕೇಂದ್ರ ಸರ್ಕಾರವು ಅಕ್ಕಿ ಪೂರೈಸುತ್ತಿಲ್ಲ ಎಂದು ಆಪಾದಿಸಿ, ಯುವ ಕಾಂಗ್ರೆಸ್ ಕಾರ್ಯಕರ್ತರು ನಗರದ ಕಾಂಗ್ರೆಸ್ ಭವನದ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ದ್ದವು. ಯೋಜನೆ ಜಾರಿಗೆ ಬಿಜೆಪಿ ಅಡ್ಡಗಾಲು ಹಾಕುತ್ತಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರು 'ಚುನಾವಣಾ ಪ್ರಚಾರದ ವೇಳೆ ಬಿಜೆಪಿ ಸೋತರೆ ಕೇಂದ್ರದ ಅನುದಾನ ಸ್ಥಗಿತ' ಎಂದು ಹೇಳಿದ್ದರು. ಈಗ ಕರ್ನಾಟಕ ರಾಜ್ಯಕ್ಕೆ ಅಕ್ಕಿ ಖರೀದಿ ಅವಕಾಶ ತಪ್ಪಿಸುತ್ತಿದ್ದಾರೆ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

'ಭಾರತೀಯ ಆಹಾರ ಪ್ರಾಧಿಕಾರ ಜೂನ್ 12ರಂದು ಇ- ಹರಾಜು ಮೂಲಕ ಅಕ್ಕಿ ನೀಡಲು ಅನುಮತಿ ನೀಡಿತ್ತು. ಮರುದಿನವೇ ಅಂದರೆ ಜೂನ್ 13ರಂದು ಅನುಮತಿ ಹಿಂಪಡೆದಿದೆ. ಕೇಂದ್ರದ ಬಳಿ 7 ಲಕ್ಷ ಟನ್ ದಾಸ್ತಾನು ಇದೆ. ನಾವು ಕೇವಲ 2.85 ಲಕ್ಷ ಟನ್ ಕೇಳಿದ್ದೆವು. ಬಿಜೆಪಿ ಬಡವರ ಹೊಟ್ಟೆ ಮೇಲೆ ಬರೆ ಎಳೆದಿದೆ. ಬಿಜೆಪಿ ಎಂದರೆ ಬಡವರಿಗೆ ದ್ರೋಹ ಬಗೆಯುವ ಪಕ್ಷ. ಕೇಂದ್ರದ ಈ ದ್ರೋಹ ಖಂಡಿಸಿ ಪ್ರತಿಭಟನೆ ಮಾಡಲಾಗುವುದು. ಆಯಾ ಜಿಲ್ಲೆಯ ಶಾಸಕರು ಪ್ರತಿಭಟನೆಯ ನೇತೃತ್ವ ವಹಿಸುವರು' ಎಂದರು.

'ಕೇಂದ್ರ ಎಷ್ಟೇ ಅಡ್ಡಿಪಡಿಸಿದರೂ ಜುಲೈ ತಿಂಗಳಿಂದಲೇ ಯೋಜನೆ ಜಾರಿಗೆ ಬದ್ಧರಾಗಿದ್ದೇವೆ. ಜೂನ್ 21ರಂದು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರು ರಾಜ್ಯದ ಸಚಿವರ ಸಭೆ ಕರೆದಿದ್ದಾರೆ. ಪಕ್ಷದ ಪ್ರಣಾಳಿಕೆ ಜಾರಿ ವಿಚಾರವಾಗಿ ಮಾರ್ಗದರ್ಶನ ನೀಡಲಿದ್ದಾರೆ. ಅಂದು ದೆಹಲಿಯಲ್ಲಿರುವ ಕೇಂದ್ರದ ಸಚಿವರನ್ನು ಭೇಟಿ ಮಾಡಿ ಬಾಕಿ ಇರುವ ಯೋಜನೆಗಳ ಜಾರಿಗೆ ಸಹಕಾರ ನೀಡುವಂತೆ ಒತ್ತಾಯಿಸಲಾಗುವುದು' ಎಂದು ಹೇಳಿದರು.

'ಟೆಂಟ್ ನಾವೇ ಕೊಡ್ತೇವೆ'

'ಕಾಂಗ್ರೆಸ್‌ನವರು ಪ್ರತಿಭಟನೆ ಮಾಡುವುದಿದ್ದರೆ, ಅದಕ್ಕೆ ಟೆಂಟ್, ಶಾಮಿಯಾನ ನಾವೇ ಹಾಕಿ ಕೊಡುತ್ತೇವೆ' ಎಂದು ಬಿಜೆಪಿ ಶಾಸಕ ಆರ್. ಅಶೋಕ ವ್ಯಂಗ್ಯವಾಡಿದ್ದಾರೆ.

'ಗ್ಯಾರಂಟಿ ಘೋಷಿಸುವಾಗ ಕೇಂದ್ರ ಸರ್ಕಾರದ ಬಳಿ ಅಕ್ಕಿ ಬೇಕು ಎಂದು ಕೇಳಿದ್ದಿರಾ? ಅನುಮತಿ ತೆಗೆದುಕೊಂಡಿದ್ದಿರಾ? ಗ್ಯಾರಂಟಿಗೆ ಅಕ್ಕಿ ಕೊಡುವುದಾಗಿ ಕೇಂದ್ರ ಹೇಳಿತ್ತಾ? ಈಗ ಕೇಂದ್ರ ಅಕ್ಕಿ ಕೊಡುತ್ತಿಲ್ಲ ಎಂದು ಬೊಬ್ಬೆ ಹೊಡೆಯುವುದು ಏಕೆ? ಎಲ್ಲಿಂದಾದರೂ ಸರಿ ಅಕ್ಕಿ ತಂದುಕೊಡುವ ಜವಾಬ್ದಾರಿ ನಿಮ್ಮದು' ಎಂದು ಡಿ.ಕೆ.ಶಿವಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡರು.

'ನಿಮಗೆ ತಾಕತ್ತು ಇದ್ದರೆ ಯಾವುದೇ ಷರತ್ತುಗಳು ಇಲ್ಲದೇ ಗ್ಯಾರಂಟಿಗಳನ್ನು ಅನುಷ್ಠಾನ ಮಾಡಿ. ಇಲ್ಲಾಂದ್ರೆ ಕುರ್ಚಿ ಬಿಟ್ಟು ಹೋಗಿ' ಎಂದರು.

ಉಚಿತ ವಿದ್ಯುತ್ ಬೇಡವೆಂದ ಹೊರಟ್ಟಿ

ಹುಬ್ಬಳ್ಳಿ: 'ಉಚಿತ ವಿದ್ಯುತ್ ಯೋಜನೆ ನನಗೆ ಹಾಗೂ ನನ್ನ ಕುಟುಂಬದ ಸದಸ್ಯರಿಗೆ ಬೇಡ' ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

'ರಾಜ್ಯದ ಜನತೆಗೆ ನೀಡಿದ ಭರವಸೆಯಂತೆ 200 ಯುನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡುವ ಯೋಜನೆ ಜಾರಿಗೆ ತಂದಿರುವುದಕ್ಕೆ ಧನ್ಯವಾದಗಳು. ಇದು ಜನಪರ ಯೋಜನೆಯಾಗಿ, ರಾಜ್ಯದ ಜನತೆಗೆ ಸಮರ್ಪಕವಾಗಿ ದೊರೆಯಲಿ' ಎಂದು ಆಶಿಸುತ್ತೇನೆ' ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ಗ್ಯಾರಂಟಿ ವೈಫಲ್ಯ ವಿರೋಧಿಸಿ ಬಿಜೆಪಿ ಆಂದೋಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ ಜಾರಿ ಮಾಡುವಲ್ಲಿ ವೈಫಲ್ಯ, ಮತಾಂತರ ನಿಷೇಧ ಕಾಯ್ದೆ ಮತ್ತು ಎಪಿಎಂಸಿ ಕಾಯ್ದೆ ರದ್ದು ಮತ್ತಿತರ ವಿಷಯಗಳನ್ನು ಮುಂದಿಟ್ಟುಕೊಂಡು ರಾಜ್ಯ ವ್ಯಾಪಿ ಹೋರಾಟ ನಡೆಸಲಾಗುವುದು. ಇದರ ರೂಪುರೇಷೆ ತೀರ್ಮಾನಿಸಲು ಇದೇ 19 ರಂದು ಪಕ್ಷದ ನಾಯಕರ ಸಭೆ ಕರೆಯಲಾಗಿದೆ' ಎಂದು ಶಾಸಕ ಆರ್.ಅಶೋಕ ತಿಳಿಸಿದರು.

'ವಿದ್ಯುತ್ ದರ ಏರಿಕೆಯಿಂದ ಜನ ತತ್ತರಿಸಿ ಹೋಗಿದ್ದಾರೆ. ಸಾಮಾನ್ಯ ಜನರ ಬದುಕನ್ನು ಅಸಹನೀಯಗೊಳಿಸಿರುವ ಸರ್ಕಾರದ ವಿರುದ್ಧ ಜನ ಸಾಮಾನ್ಯರು ಬೀದಿಗಿಳಿಯುವುದು ನಿಶ್ಚಿತ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'ಮತಾಂತರ ನಿಷೇಧ ಕಾಯ್ದೆಯಿಂದ ಮತಾಂತರ ದಂಧೆಯಲ್ಲಿ ನಿರತರಾದವರು ಇನ್ನಷ್ಟು ಚುರುಕಾಗಲಿದ್ದಾರೆ. ಕರ್ನಾಟಕವನ್ನು ಮಿನಿ ಪಾಕಿಸ್ತಾನ ಮಾಡಲಿದ್ದಾರೆ. ಪಿಎಫ್‌ಐ, ಕೆಎಫ್‌ಡಿಯಂತಹ ಸಂಘಟನೆಗಳ ಪರವಾಗಿ ನಿಂತಿರುವ ಸಿದ್ದರಾಮಯ್ಯ ಹಿಂದೂ ವಿರೋಧಿ' ಎಂದು ಅಶೋಕ ವಾಗ್ದಾಳಿ ನಡೆಸಿದರು.

'ಎಪಿಎಂಸಿಗಳನ್ನು ದಲ್ಲಾಳಿಗಳಿಂದ ಮುಕ್ತಗೊಳಿಸಿ ರೈತರಿಗೆ ಅನುಕೂಲ ಮಾಡುವ ಉದ್ದೇಶದಿಂದ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡಿದ್ದೆವು. ಈಗ ಇವರು ಮತ್ತೆ ರೈತರನ್ನು ದಲ್ಲಾಳಿಗಳ ಕಪಿಮುಷ್ಠಿಗೆ ಕೊಡಲು ಕಾಯ್ದೆಯನ್ನು ರದ್ದು ಮಾಡುವ ತೀರ್ಮಾನ ಮಾಡಿದ್ದಾರೆ. ಇವರಿಗೆ ರೈತರ ಹಿತಕ್ಕಿಂತ ದಲ್ಲಾಳಿಗಳ ಜೇಬಿಗೆ ಹಣ ತುಂಬುವುದೇ ಮುಖ್ಯ ಉದ್ದೇಶವಾಗಿದೆ. ರೈತರು ಸಂಕಷ್ಟಕ್ಕೆ ತುತ್ತಾಗಲಿದ್ದಾರೆ' ಎಂದರು.

'ಕಾಂಗ್ರೆಸ್ ಮತ್ತು ಅವರ ಹಿಂಬಾಲಕರ ಸಿದ್ಧಾಂತವನ್ನು ಮತ್ತೆ ಪಠ್ಯ ಪುಸ್ತಕದಲ್ಲಿ ತುರುಕಲು ಹೊರಟಿದ್ದಾರೆ. ಮಕ್ಕಳಿಗೆ ತೊಂದರೆ ಕೊಡುವ ಉದ್ದೇಶ ಬಿಟ್ಟು ಬೇರೆ ಏನೂ ಇಲ್ಲ' ಎಂದು ಅವರು ತಿಳಿಸಿದರು.

'ವಿದ್ಯುತ್ ದರ ಏರಿಕೆಯಿಂದ ಉದ್ಯಮಿಗಳು ಬೇರೆ ರಾಜ್ಯಗಳಿಗೆ ವಲಸೆ ಹೋಗುವುದಾಗಿ ಹೇಳುತ್ತಿದ್ದಾರೆ. ಹತ್ತು ರೂಪಾಯಿ ಕೊಟ್ಟು ಇಪ್ಪತ್ತು ರೂಪಾಯಿ ಕಿತ್ತುಕೊಳ್ಳುವ ಗ್ಯಾರಂಟಿ ವ್ಯವಸ್ಥೆಯಿಂದ ಜನ ಹೈರಾಣಾಗಿದ್ದಾರೆ. ವಿದ್ಯುತ್ ಸಂಪರ್ಕದ ಠೇವಣಿಯನ್ನು ಶೇ 65ರಷ್ಟು ಹೆಚ್ಚಳ ಮಾಡಿದ್ದಾರೆ. ತಾತ್ಕಾಲಿಕ ಸಂಪರ್ಕಕ್ಕೆ ಶೇ 70ರಷ್ಟು ಠೇವಣಿ ಸಂಗ್ರಹ ಮಾಡುತ್ತಿದ್ದಾರೆ' ಎಂದು ಅಶೋಕ ಅವರು ಹೇಳಿದರು.

ಸಮ್ಮತಿ ಪತ್ರ ಲಗತ್ತಿಸಿದ ಸಿ.ಎಂ: ಸಿ.ಟಿ.ರವಿಗೆ ತರಾಟೆ

ಬೆಂಗಳೂರು: ಭಾರತೀಯ ಆಹಾರ ನಿಗಮ ಅಕ್ಕಿ ಕೊಡುತ್ತದೆ ಎಂದು ಹೇಳಿ ಸಮ್ಮತಿ ಪತ್ರ ನೀಡಿದ್ದರೆ ತೋರಿಸಿ ಎಂದು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರ ಸವಾಲಿಗೆ ತಿರುಗೇಟು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಟ್ವಿಟರ್ ಖಾತೆಯಲ್ಲಿ ಭಾರತೀಯ ಆಹಾರ ನಿಗಮ (ಎಫ್‌ಸಿಐ) ನೀಡಿದ್ದ ಸಮ್ಮತಿ ಪತ್ರವನ್ನು ಲಗತ್ತಿಸಿ ತರಾಟೆಗೆ ತೆಗೆದುಕೊಂಡಿದ್ದಾರೆ.

'ಇಂಥ ಸುಳ್ಳು ಮತ್ತು ಅಪ ಪ್ರಚಾರದ ಗೀಳಿಗಾಗಿಯೇ ರಾಜ್ಯದ ಪ್ರಜ್ಞಾವಂತ ಮತದಾರರು ಬಿಜೆಪಿಯ ಇಂತಹ ನಾಯಕರನ್ನು ಸೋಲಿಸಿ ಮನೆಗೆ ಕಳುಹಿಸಿದ್ದಾರೆ' ಎಂದು ಕುಟುಕಿದ್ದಾರೆ.

'ಸಿ.ಟಿ.ರವಿ ಮತ್ತಿತರ ಬಿಜೆಪಿ ನಾಯಕರು ಮೊದಲು ಕೇಂದ್ರದ ಬಿಜೆಪಿ ಸರ್ಕಾರದ ಮೇಲೆ ಒತ್ತಡ ಹೇರಿ ಬಡವರ ಹಸಿವು ನೀಗಿಸುವ ಅನ್ನಭಾಗ್ಯ ಯೋಜನೆಗೆ ಬೇಕಾಗುವ ಅಕ್ಕಿ ಪೂರೈಸುವಂತೆ ಮಾಡಬೇಕೇ ಹೊರತು ಬಡವರ ಹೊಟ್ಟೆಗೆ ಹೊಡೆಯುವ ಕೇಂದ್ರ ಸರ್ಕಾರದ ಜನ ವಿರೋಧಿ ನಿಲುವನ್ನು ಬೆಂಬಲಿಸುವುದಲ್ಲ' ಎಂದಿದ್ದಾರೆ.

ಸಾರಿಗೆ ಆಯುಕ್ತ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆ ಆಯುಕ್ತರಾಗಿದ್ದ ಐಪಿಎಸ್ ಅಧಿಕಾರಿ ಎಸ್.ಎನ್. ಸಿದ್ರಾಮಪ್ಪ ಅವರನ್ನು ವರ್ಗಾವಣೆ ಮಾಡಲಾಗಿದ್ದು, ಅವರಿಗೆ ಯಾವುದೇ ಹುದ್ದೆ ತೋರಿಸಿಲ್ಲ.

ಐಎಎಸ್ ಅಧಿಕಾರಿ ಪಲ್ಲವಿ ಅಕುರಾತಿ ಅವರನ್ನು ಸಕಾಲ ಯೋಜನೆಯ ಹೆಚ್ಚುವರಿ ನಿರ್ದೇಶಕಿ ಹುದ್ದೆಗೆ ವರ್ಗಾಯಿಸಲಾಗಿದ್ದು, ಪಲ್ಲವಿ ಸೇರಿ ಒಟ್ಟು 10 ಐಎಎಸ್ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ. ಡಾ.ವೆಂಕಟೇಶ್ ಎಂ. – ಆಯುಕ್ತ, ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆ. ರವೀಂದ್ರ ಪಿ.ಎನ್.–ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ. ಶ್ರೀನಿವಾಸ ಕೆ– ಜಿಲ್ಲಾಧಿಕಾರಿ, ತುಮಕೂರು. ಜಾನಕಿ ಕೆ.ಎಂ.– ಜಿಲ್ಲಾಧಿಕಾರಿ, ಬಾಗಲಕೋಟೆ. ಮುಲ್ಲೈ ಮುಹಿಲನ್– ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ. ಯೋಗೇಶ್– ಆಯುಕ್ತ, ಸಾರಿಗೆ ಇಲಾಖೆ. ಡಾ.ಕುಮಾರ– ಜಿಲ್ಲಾಧಿಕಾರಿ, ಮಂಡ್ಯ. ಪ್ರಭು ಜಿ.– ಆಯುಕ್ತ, ಕರ್ನಾಟಕ ವಿಕೋಪ ನಿರ್ವಹಣೆ ಪ್ರಾಧಿಕಾರ. ನವೀನ್‌ಕುಮಾರ್ ರಾಜು– ಕಾರ್ಯ ನಿರ್ವಾಹಕ ನಿರ್ದೇಶಕ, ಕರ್ನಾಟಕ ವಸತಿ ಸಂಸ್ಥೆಗಳ ಸೊಸೈಟಿ.

ಶುಲ್ಕ ಹೆಚ್ಚಳಕ್ಕೆ ಎಐಡಿಎಸ್‌ಒ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳಿಗೆ ಶೇ 10 ಶುಲ್ಕ ಹೆಚ್ಚಳ ಮಾಡಿರುವ ಸರ್ಕಾರದ ನಿರ್ಧಾರವನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ರಾಜ್ಯ ಸಮಿತಿ ಖಂಡಿಸಿದೆ.

'ರಾಜ್ಯ ಸರ್ಕಾರದ ಶುಲ್ಕ ಹೆಚ್ಚಳದ ನಿರ್ಧಾರವು ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಕನಸಿಗೆ ಮಣ್ಣೆರಚಿದಂತಾಗಿದೆ. ಶೈಕ್ಷಣಿಕ ಶುಲ್ಕ ಏರಿಕೆ ಈ ಪ್ರಕ್ರಿಯೆಯು ಕ್ರಮೇಣವಾಗಿ ಮೆರಿಟ್ ಕೋಟಾವನ್ನು ನಾಶ ಮಾಡುತ್ತದೆ. ವಿದ್ಯಾರ್ಥಿಗಳ ಹಕ್ಕಾದ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರವೇ ಸಂಪೂರ್ಣ ವಹಿಸಿಕೊಳ್ಳಬೇಕು' ಎಂದು ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.





70 ಕೆರೆ ತುಂಬಿಸಲು ₹1081 ಕೋಟಿ

ಬೆಂಗಳೂರು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳ 70 ಕೆರೆಗಳನ್ನು ಭರ್ತಿ ಮಾಡುವ ₹1,081 ಕೋಟಿ ಪರಿಷ್ಕೃತ ಅಂದಾಜಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಈ ಕೆರೆಗಳಿಗೆ ವೃಷಭಾವತಿ ಕಣಿವೆಯಿಂದ ಎರಡು ಬಾರಿ ಸಂಸ್ಕರಿಸಿದ ಸುಮಾರು 243 ಎಂಎಲ್‌ಡಿ ನೀರು ಹರಿಸಿ ಭರ್ತಿ ಮಾಡಲಾಗುವುದು. ಈ ಹಿಂದೆ ₹865 ಕೋಟಿ ವೆಚ್ಚದಲ್ಲಿ 82 ಕೆರೆಗಳನ್ನು ತುಂಬಿಸುವ ಯೋಜನೆ ರೂಪಿಸಲಾಗಿತ್ತು ಎಂದು ಅವರು ವಿವರಿಸಿದರು.

ಎರಡು ಹಂತಗಳಲ್ಲಿ ಕೆರೆಗಳನ್ನು ಭರ್ತಿ ಮಾಡಲಾಗುವುದು. ಮೊದಲ ಹಂತದಲ್ಲಿ 21 ಕೆರೆಗಳು ಮತ್ತು ಎರಡನೇ ಹಂತದಲ್ಲಿ 49 ಕೆರೆಗಳನ್ನು ಭರ್ತಿ ಮಾಡಲಾಗುವುದು. ಈ ಸಂಬಂಧ ಸಣ್ಣ ನೀರಾವರಿ ಇಲಾಖೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಇದರಿಂದ ಈ ಭಾಗದಲ್ಲಿ ಕೃಷಿಗೆ ಅನುಕೂಲವಾಗಲಿದ್ದು, ಅಂತರ್ಜಲ ವೃದ್ಧಿಯೂ ಆಗಲಿದೆ ಎಂದು ಅವರು ವಿವರಿಸಿದರು.

'ವಿದ್ಯುತ್ ಚಾಲಿತ ಡಬ್ಬಲ್ ಡೆಕ್ಕರ್ ಬಸ್'

ಬಿಎಂಟಿಸಿಗೆ 10 ಡಬಲ್ ಡೆಕ್ಕರ್ (ಮಹಡಿ ಬಸ್) ವಿದ್ಯುತ್‌ಚಾಲಿತ ಬಸ್‌ಗಳ ಖರೀದಿಗಾಗಿ ₹28.13 ಕೋಟಿ ನೀಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ವಿವಿಧ ಸಾರಿಗೆ ನಿಗಮಗಳ ಸಿಬ್ಬಂದಿ ವೇತನ ಶೇ15 ರಷ್ಟು ಹೆಚ್ಚಿಸಲು ಘಟನೋತ್ತರ ಅನುಮತಿ ನೀಡಲಾಗಿದೆ ಎಂದು ಎಚ್.ಕೆ. ಪಾಟೀಲ ಹೇಳಿದರು.

ಕಳೆದ ಮಾರ್ಚ್‌ನಲ್ಲಿ ಸಿಬ್ಬಂದಿ ವೇತನ ಹೆಚ್ಚಿಸಲಾಗಿತ್ತು. ಅದಕ್ಕೆ ಘಟನೋತ್ತರ ಅನುಮತಿ ನೀಡಲಾಗಿದೆ ಎಂದು ವಿವರಿಸಿದರು.

ಸಾರಿಗೆ ನಿಗಮಗಳಿಂದ ಬಾಕಿ ಉಳಿದಿದ್ದ ಮೋಟಾರು ತೆರಿಗೆ ಮತ್ತು ಬಾಕಿ ₹79.85 ಕೋಟಿ ಇತ್ತು. ಅದನ್ನು ಮನ್ನಾ ಮಾಡಲು ತೀರ್ಮಾನ ತೆಗೆದುಕೊಳ್ಳಲಾಗಿದೆ. ನಿಗಮಗಳ ಹೊರೆಯನ್ನು ಇಳಿಸುವ ಹಿನ್ನೆಲೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದರು.



ಅಮಟೆಕಾಯಿ ಸಾರು



ಬೇಕಾಗುವ ಸಾಮಗ್ರಿ : ಅಮಟೆಕಾಯಿ 2-3, ತೆಂಗಿನತುರಿ ರ್‍ಧ ಕಪ್, ಉಪ್ಪು, ಸಾಂಬಾರ್ ಪೌಡರ್, ಖಾರದಪುಡಿ, ಬೆಲ್ಲ ಸ್ವಲ್ಪ, ಒಗ್ಗರಣೆಗೆ ಎಣ್ಣೆ, ಸಾಸಿವೆ, ಜೀರಿಗೆ, ಬೆಳ್ಳುಳ್ಳಿ, ಕರಿಬೇವು

ಮಾಡುವ ವಿಧಾನ : ಅಮಟೆಕಾಯಿಯನ್ನು ಹೆಚ್ಚಿಕೊಳ್ಳಿ. ಅದನ್ನು ಒಗ್ಗರಣೆಗೆ ಹಾಕಿ ಚೆನ್ನಾಗಿ ಹುರಿಯಿರಿ. ಆಮೇಲೆ ಸ್ವಲ್ಪ ನೀರು ಸೇರಿಸಿ, ಮೆತ್ತಗೆ ಬೇಯಿಸಿ. ಬೇಯುವಾಗ ಉಪ್ಪು, ಬೆಲ್ಲ ಸೇರಿಸಿ ತೆಂಗಿನಕಾಯಿಯ ಜೊತೆ ಖಾರದಪುಡಿ,ಸಾಂಬಾರ್ ಪೌಡರ್ ಹಾಕಿ ರುಬ್ಬಿ. ನಂತರ ಈ ರುಬ್ಬಿದ ಮಸಾಲವನ್ನು ಬೇಯಿಸಿದ ಅಮಟೆಗೆ ಸೇರಿಸಿ. ನಂತರ ನೀರು ಸೇರಿಸಿ ಚೆನ್ನಾಗಿ ಕುದಿಸಿ.

'ಅಮಟೆ'ಯ ಖಾದ್ಯ ಲೋಕ...

ನಳಪಾಕ



ಇದು ಅಮಟೆಕಾಯಿ ಕಾಲ. ಅದರಲ್ಲೂ ಸಿಹಿ ಅಮಟೆ ಮಾಮೂಲಿ ತಳಿಗಿಂತ ತುಸು ಭಿನ್ನ. ಸ್ವಲ್ಪ ಸಿಹಿ- ಹುಳಿ ರುಚಿ. ಒಳಗಿನ ತಿರುಳು ಸಾಕಷ್ಟು ಇರುತ್ತದೆ. ಬೀಜ ಚಿಕ್ಕದಿರುತ್ತದೆ. ಅಡುಗೆಗೆ ಹೆಚ್ಚು ಸೂಕ್ತ. ಸಿಹಿ ಆಮಟೆಯಿಂದ ತಯಾರಿಸುವ ಕೆಲವು ಸಾಂಪ್ರದಾಯಿಕ ಅಡುಗೆಗಳನ್ನು **ಸೌಖ್ಯ ಮೋಹನ್ ತಲಕಾಲುಕೊಪ್ಪ** ಇಲ್ಲಿ ಪರಿಚಯಿಸಿದ್ದಾರೆ

ಚಿತ್ರಗಳು ಲೇಖಕರವು



ಮೊಸರು ಗೊಜ್ಜು

ಬೇಕಾಗುವ ಸಾಮಗ್ರಿಗಳು: ಅಮಟೆಕಾಯಿ 3-4, ಮೊಸರು ಎರಡು ದೊಡ್ಡ ಕಪ್, ಉಪ್ಪು, ಬೆಲ್ಲ ಸ್ವಲ್ಪ, ಈರುಳ್ಳಿ ಒಂದು, ಹಸಿಮೆಣಸಿನಕಾಯಿ ಎರಡು ಮೂರು ಒಗ್ಗರಣೆಗೆ: ಎಣ್ಣೆ ,ಸಾಸಿವೆ , ಒಣಮೆಣಸು

ಮಾಡುವ ವಿಧಾನ : ಮೊದಲು ಅಮಟೆಕಾಯಿಯನ್ನು ಬೇಯಿಸಿ. ಅದಕ್ಕೆ ಉಪ್ಪು ಮತ್ತು ಬೆಲ್ಲ ಸೇರಿಸಿ ಚೆನ್ನಾಗಿ ನುರಿದುಕೊಳ್ಳಿ. ಹಸಿಮೆಣಸನ್ನು ಸುಟ್ಟು,ಜಜ್ಜಿ ಅದಕ್ಕೆ ಹಾಕಿ. ಮೊಸರು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ಆಮೇಲೆ ಈರುಳ್ಳಿಯನ್ನು ಸಣ್ಣಗೆ ಹೆಚ್ಚಿ ಸೇರಿಸಿ. ಕೊನೆಯಲ್ಲಿ ಒಗ್ಗರಣೆ ಕೊಡಿ.

ಅಮಟೆಕಾಯಿ ಪಲ್ಯ

ಬೇಕಾಗುವ ಸಾಮಗ್ರಿಗಳು: : ಅಮಟೆಕಾಯಿ 4-5, ಈರುಳ್ಳಿ ಎರಡು, ಉಪ್ಪು ,ಬೆಲ್ಲ ಬೆಳ್ಳುಳ್ಳಿ 7-8 ಎಸಳು, ಸೂಜಿ ಮೆಣಸು, ಕಾಯಿತುರಿ ಎರಡು ಚಮಚ, ಒಗ್ಗರಣೆಗೆ: ಎಣ್ಣೆ, ಸಾಸಿವೆ, ಒಣಮೆಣಸು, ಕರಿಬೇವು

ಮಾಡುವ ವಿಧಾನ: ಅಮಟೆಕಾಯಿಯನ್ನು ತೆಳುವಾಗಿ ಕೆತ್ತಿ ಕೊಳ್ಳಬೇಕು. ಈರುಳ್ಳಿಯನ್ನು ಹೆಚ್ಚಿ ಒಗ್ಗರಣೆಗೆ ಹಾಕಿ ಹುರಿಯಿರಿ. ಅದಕ್ಕೆ ಅಮಟೆಕಾಯಿ ಸೇರಿಸಿ. ಉಪ್ಪು, ಬೆಲ್ಲ ಹಾಕಿ. ಸ್ವಲ್ಪವೇ ನೀರು ಹಾಕಿ ಬೇಯಿಸಿ. ಬೆಳ್ಳುಳ್ಳಿ ಮತ್ತು ಸೂಜಿ ಮೆಣಸು ಹಾಗೂ ಕಾಯಿತುರಿಯನ್ನು ರುಬ್ಬಿ ಹಾಕಿ ಚೆನ್ನಾಗಿ ಹುರಿಯಿರಿ. ರುಚಿಯಾದ ಪಲ್ಯ ರೆಡಿ.



ಮಂದನ ಗೊಜ್ಜು

ಬೇಕಾಗುವ ಸಾಮಗ್ರಿಗಳು : ಅಮಟೆಕಾಯಿ 20, ಉಪ್ಪು ,ಬೆಲ್ಲ, ಸ್ವಲ್ಪ ಸೂಜಿ ಮೆಣಸು (ಗಾಂಧಾರಿ ಮೆಣಸು)15 - 20, ಬೆಳ್ಳುಳ್ಳಿ 10-12 ಎಸಳು, ಒಗ್ಗರಣೆಗೆ: ಎಣ್ಣೆ ,ಸಾಸಿವೆ ,ಕಡ್ಲೆಬೇಳೆ, ಒಣಮೆಣಸು

ಮಾಡುವ ವಿಧಾನ : ಮೊದಲು ಅಮಟೆ ಕಾಯಿಯನ್ನು ಬೇಯಿಸಿಕೊಳ್ಳಿ. ಸಿಪ್ಪೆ ಹಾಗೂ ತಿರುಳನ್ನು ಕೆತ್ತಿ ಮಿಕ್ಸಿಗೆ ಹಾಕಿ. ರುಬ್ಬುವಾಗ ಮೆಣಸು, ಬೆಳ್ಳುಳ್ಳಿ ಮತ್ತು ಉಪ್ಪು ಸೇರಿಸಿ. ದಪ್ಪ ಬಾಣಲೆಯಲ್ಲಿ ಒಗ್ಗರಣೆ ಇಟ್ಟು ಸಾಸಿವೆ ಸಿಡಿದ ನಂತರ ರುಬ್ಬಿದ ಮಿಶ್ರಣ ಹಾಕಿ ಚೆನ್ನಾಗಿ ಕುದಿಸಿ. ಸ್ವಲ್ಪ ಎಣ್ಣೆ ಬಿಡುವವರೆಗೂ ಕುದಿಸಿದರೆ ತುಂಬಾ ದಿನ ಹಾಳಾಗುವುದಿಲ್ಲ. ಮಳೆಗಾಲದಲ್ಲಿ ಬಿಸಿ ಬಿಸಿ ಅನ್ನದ ಜೊತೆ ಚೆನ್ನಾಗಿರುತ್ತೆ.

ಪ್ರಸವೋತ್ತರ ಸಮಸ್ಯೆಗೆ 'ಯೋಗ' ಪರಿಹಾರ

ಡಾ. ರಕ್ಷಿತಾ. ಎಸ್. ನಾಯಕ್

ತಾಯ್ತನವೆನ್ನುವುದು ಹೆಣ್ಣಿಗೆ ನಿಸರ್ಗದತ್ತವಾದ ವರ. ಮೊದಲನೇ ತ್ರೈಮಾಸಿಕದಿಂದ ಬಾಣಂತನದ ನಂತರವೂ ಅನೇಕ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳನ್ನು ಎದುರಿಸಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಹಾಗೂ ಉದ್ಯೋಗದ ಒತ್ತಡಗಳಿಂದಾಗಿ ತಾಯ್ತನವನ್ನು ನೋಡುವ ರೀತಿಯೇ ಬದಲಾಗಿದೆ.

ಪ್ರಸವ ನಂತರ ಬದಲಾಗುವ ದೇಹದ ಆಕಾರ, ಹಾರ್ಮೋನ್‌ಗಳ ಏರಿಳಿತ, ಸ್ನಾಯುಗಳ ದುರ್ಬಲದಿಂದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಅದರಲ್ಲಿ ಪ್ರಮುಖವಾಗಿರುವುದು ಪೆಲ್ವಿಕ್ ಫ್ಲೋರ್ ಮಸಲ್ ವೀಕ್‌ನೆಸ್ (Pelvic floor muscle weakness), ದೇಹದ ತೂಕ ಹೆಚ್ಚಳ ಹಾಗೂ ಮಾನಸಿಕವಾಗಿ ಖಿನ್ನತೆಯ ಭಾವ ಬರುವ ಸಾಧ್ಯತೆ ಇರುತ್ತದೆ. ಗರ್ಭಾವಸ್ಥೆಯಲ್ಲಿ ಪೆಲ್ವಿಕ್ ಮೇಲೆ ಒತ್ತಡ, ಸಹಜ ಹೆರಿಗೆಯಲ್ಲಿ ಅತಿಯಾಗಿ ವಿಸ್ತರಿಸಿದ ಸ್ನಾಯುಗಳು ಹಾಗೂ ದೀರ್ಘಕಾಲದ ಮಲಬದ್ಧತೆಯಿಂದ ಈ ಸಮಸ್ಯೆ ಉಂಟಾಗಬಹುದು.

ಇನ್ನು ಗರ್ಭಾವಸ್ಥೆಯಲ್ಲಿ ಹೆಚ್ಚುವ ದೇಹದ ತೂಕ ಪ್ರಸವದ ನಂತರವೂ ಕೆಲವು ತಿಂಗಳು ಹಾಗೇ ಇರುತ್ತದೆ. ಅಷ್ಟೆ ಅಲ್ಲದೆ ದೀರ್ಘಕಾಲ ಕುಳಿತು ಸ್ತನ್ಯಪಾನ ಮಾಡಿಸುವುದು, ನಿದ್ರಾಹೀನತೆ, ಬಾಣಂತಿಯ ಆರೈಕೆಗಳಿಂದ ಇನ್ನಷ್ಟು ತೂಕ ಹೆಚ್ಚುವ ಸಾಧ್ಯತೆ ಇದೆ. ಈ ಬದಲಾವಣೆ ಸಾಮಾನ್ಯವಾಗಿದ್ದು, ದೇಹ ಮೊದಲಿನಂತೆ ಆಗಲು ಸಮಯ ತೆಗೆದುಕೊಳ್ಳುತ್ತದೆ. ಈ ಹೆಚ್ಚುವರಿ ತೂಕವನ್ನು 6 ರಿಂದ 12 ತಿಂಗಳ ಒಳಗೆ ಇಳಿಸಿಕೊಳ್ಳುವುದು ಒಳಿತು.

ನವಜಾತ ಶಿಶುವಿನ ಆರೈಕೆಯಲ್ಲಿ ತೊಡಗಿಸಿಕೊಳ್ಳುವ ತಾಯಂದಿರಿಗೆ ಅವಶ್ಯಕ ವಿಶ್ರಾಂತಿ ದೊರೆಯುವುದಿಲ್ಲ. ಪ್ರಸವದ ನೋವು, ಸುಸ್ತು, ಹೆಚ್ಚಾದ ಜವಾಬ್ದಾರಿ, ತಾಯ್ತನದಿಂದ ಹೆಚ್ಚಿರುವ ನಿರೀಕ್ಷೆಗಳು ದೈಹಿಕ ಹಾಗೂ ಮಾನಸಿಕ ಒತ್ತಡಗಳನ್ನು ಉಂಟು ಮಾಡುತ್ತವೆ. ದೈಹಿಕ ಆರೋಗ್ಯಕ್ಕೆ ಎಷ್ಟು ಪ್ರಾಮುಖ್ಯತೆ ನೀಡುತ್ತೇವೋ ಬಾಣಂತಿಯ ಮಾನಸಿಕ ಆರೋಗ್ಯಕ್ಕೆ ಒತ್ತು ಕೊಡುವುದು ಅಷ್ಟೆ ಮುಖ್ಯ.



ದೈಹಿಕ ಒತ್ತಡದಂತೆ, ಮಾನಸಿಕ ಒತ್ತಡವು ಸಾಮಾನ್ಯವಾಗಿದ್ದು, ಇದು ಮೂಡ್‌ನಲ್ಲಿ ಏರಿಳಿತ, ಕೋಪ, ಅನುಮಾನ, ನಕಾರಾತ್ಮಕ ಭಾವನೆ, ಕಿರಿಕಿರಿ, ಗೊತ್ತಿಲ್ಲದಂತೆ ಸುಮ್ಮನೆ ಅಳುವುದು ಕಂಡುಬರಬಹುದು.

ತಾಯಿಯನ್ನು ಕಾಡುವ ದುಃಖ, ಒಂಟಿತನದ ಭಾವನೆಯನ್ನು 'ಬೇಬಿ ಬ್ಲ್ಯೂಸ್' ಎಂದು ಕರೆಯುತ್ತಾರೆ. ಹೆರಿಗೆಯಾದ ಒಂದೆರಡು ದಿನಗಳಿಂದ ಎರಡು ವಾರಗಳವರೆಗೂ ಕಾಡಬಹುದು. ಎರಡೂ ವಾರಗಳ ನಂತರವೂ ಕಂಡುಬಂದರೆ ಇದು ಪ್ರಸವ ನಂತರದ ಖಿನ್ನತೆ ಎಂದು ಕರೆಯುತ್ತಾರೆ. ಪ್ರಸವ ನಂತರ ಖಿನ್ನತೆ ಹೆಚ್ಚಾದಂತೆ ಆತ್ಮಹತ್ಯೆಯ ದಾರಿ ಹಿಡಿಯಬಹುದು. ನಿರ್ಲಕ್ಷ್ಯ ಮಾಡದೇ ತಜ್ಞ ವೈದ್ಯರನ್ನು ಸಂಪರ್ಕಿಸಿ.

ಪರಿಹಾರ ಏನು ?

ಸೂಕ್ತ ಮಾರ್ಗದರ್ಶನದಲ್ಲಿ ಯೋಗಾಭ್ಯಾಸ ಮಾಡುವುದರಿಂದ ಬಾಣಂತಿಯರನ್ನು ಕಾಡುವ ಈ ಪ್ರಮುಖ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಹೆರಿಗೆಯ ನಂತರ ಮಾಡುವ ಯೋಗಾಭ್ಯಾಸವನ್ನು ಪೋಸ್ಟ್‌ಪಾರ್ಟಮ್ ಯೋಗಾಭ್ಯಾಸ ಎನ್ನಲಾಗುತ್ತದೆ. ಹೆರಿಗೆಯಾದ ಆರರಿಂದ 8 ವಾರಗಳ ನಂತರ ಪ್ರಾರಂಭಿಸಬಹುದು.

ಪೆಲ್ವಿಕ್ ಫ್ಲೋರ್ ಸ್ನಾಯುಗಳನ್ನು ಬಲಪಡಿಸಲು: ಸೇತುಬಂಧಾಸನ, ಅಶ್ವಿನಿ ಮುದ್ರ, ಮೂಲಬಂಧ.

ತೂಕ ಕಳೆದುಕೊಳ್ಳಲು: ಮಾರ್ಜರಿಯಾಸನ, ಭುಜಂಗಾಸನ, ಅಧೋಮುಖ ಶ್ವಾನಾಸನ.

ಮಾನಸಿಕ ಆರೋಗ್ಯಕ್ಕೆ: ಬಾಲಾಸನ, ವಿಪರೀತಕರಣಿ, ಶವಾಸನ. ಇದರ ಜತೆಗೆ ಪ್ರಾಣಾಯಾಮ, ಯೋಗಿಕ್ ಬ್ರೀದಿಂಗ್, ನಾಡಿಶೋಧನ, ಭ್ರಮರಿಯನ್ನು ನಿತ್ಯ ಅಭ್ಯಾಸ ಮಾಡುವುದರಿಂದ ಉತ್ತಮ ಫಲಿತಾಂಶ ಪಡೆಯಬಹುದು.

(ಲೇಖಕರು ಯೋಗತಜ್ಞರು)


ವಿಪರೀತಕರಣಿ ಮಾಡುವ ಬಗೆ

ಯೋಗ ಮ್ಯಾಟ್ ಅನ್ನು ಗೋಡೆಯ ಸಮೀಪ ಹಾಕಿಕೊಳ್ಳಿ. ಗೋಡೆಯ ಪಕ್ಕ ನೇರವಾಗಿ ಮಲಗಿ. ದೇಹಕ್ಕೂ ಗೋಡೆಗೂ ಯಾವುದೇ ಅಂತರ ಇರಬಾರದು. ಆರಾಮಾಗಿ ಉಸಿರಾಡುತ್ತ ಕಾಲುಗಳನ್ನು ಒಂದೊಂದಾಗಿ ಗೋಡೆಯ ಮೇಲೆ ಸರಿಸಿ. ಏಕಕಾಲದಲ್ಲಿ ದೇಹವನ್ನು ಸರಿಸಿ, 'ಎಲ್' ಆಕಾರಕ್ಕೆ ತನ್ನಿ. ಕೈಗಳನ್ನು ಪಕ್ಕದಲ್ಲಿ ಚಾಚಿ. ಹಸ್ತಗಳು ಮೇಲ್ಮುಖವಾಗಿರಲಿ. ದೀರ್ಘವಾಗಿ ಉಸಿರಾಡುತ್ತ ಹೊಟ್ಟೆಯ ಭಾಗವನ್ನು ಗಮನಿಸಿ. ಇದನ್ನು ನಿಯಮಿತವಾಗಿ ಮಾಡುವುದರಿಂದ ಆತ್ಮವಿಶ್ವಾಸ ಹೆಚ್ಚುವುದಲ್ಲದೇ ಮಾನಸಿಕ ದೃಢತೆಯನ್ನು ಸಾಧಿಸಬಹುದು.



ಮದುವೆ ಯಾವಾಗ?

> ಮದುವೆ ಎನ್ನುವುದು ಪಕ್ಕಾ ಖಾಸಗಿಯಾದ ವಿಷಯ. ಎರಡು ಜೀವಗಳ ನಡುವೆ ಸಂಭ್ರಮ ಹುಟ್ಟಲು ಮದುವೆ ಎನ್ನುವ ಸಂಗತಿ ಕಾರಣವಾಗಬೇಕೆ ಹೊರತು ಮದುವೆಯಾಗದವರನ್ನು ಹಿಂಸಿಸುವ ಅಸ್ತ್ರವಾಗಬಾರದು



ಚೈತ್ರಿಕಾ ನಾಯ್ಕ ಹರ್ಗಿ

'ಮದುವೆ ಯಾವಾಗ ?
ಸಿಹಿಯೂಟ ಯಾವಾಗ ಹಾಕಿಸ್ತೀಯಾ?
ಅಂತ ಕೇಳ್ತಿದ್ರಲ್ಲಾ
ನನ್ನ ಮದುವೆ ದಿನಾಂಕ ಗೊತ್ತಾಗಿದೆ
ಕಾಳಜಿಯಿಂದ ಕೇಳಿ
ಬಾಯಿ ನೋಯಿಸ್ಕೊಂಡವರೆಲ್ಲ
ಮದುವೆಗೆ ಬಂದು ಗಡದ್ದಾಗಿ ತಿಂದು ಹೋಗಿ' ಹೀಗೆಂದು ಗೆಳತಿಯೊಬ್ಬಳು ಮದುವೆ ದಿನಾಂಕ ಗೊತ್ತು ಮಾಡಿದ ಕೂಡಲೆ ವಾಟ್ಸ್ ಆ್ಯಪ್‌ನಲ್ಲಿ ಒಂದು ಮೆಸೇಜ್ ಹಾಕಿ, 'ಕಂಟೆಂಟ್ ಸರಿ ಇದ್ಯಾ ನೋಡೆ' ಎಂದಿದ್ದಳು. ಮದುವೆಗೆ ಕರೆದಂತೂ ಇರಬೇಕು ಇಷ್ಟು ದಿನ ಕೇಳಿಸಿಕೊಂಡಿದ್ದಕ್ಕೆ ಬೈದಂತೂ ಇರಬೇಕು ಎಂಬ ಆಮಂತ್ರಣ.

ತೀರಾ ಆಪ್ತ ವಲಯದವರನ್ನು ಬಿಟ್ಟು ಬೇರೆ ಯಾರಾದರೂ 'ಮದುವೆ ಯಾವಾಗ?' ಎಂದು ಕೇಳಿದರೆ ನನ್ನನ್ನೂ ಸೇರಿದಂತೆ ಈಗಿನವರಿಗೆ ಪಿತ್ತ ನೆತ್ತಿಗೇರಿದಂತಾಗುತ್ತದೆ. 'ಇವರಿಗ್ಯಾಕೆ ಬೇಕು ಬೇರೆಯವರ ಮನೆ ಉಸಾಬರಿ? ಇನ್ನೂ ನಮಗೆ ಮದುವೆ ಆಗಿಲ್ಲ ಅಂತ ನಾವೇನಾದ್ರು ಇವರ ಮನೆ ಬಾಗಿಲಿಗೆ ಹೋಗಿದ್ವಾ?' ಎಂದು ಮುಖ ಸಿಂಡರಿಸುತ್ತಿದ್ದರೆ, 'ಇದನ್ಯಾಕೆ ಇವರು ಇಷ್ಟು ದೊಡ್ಡದು ಮಾಡ್ತಾರೆ' ಅಂತ ಕೇಳಿದವರಿಗೂ ಅನಿಸಿದ್ದಿದೆ.

ಕಾನೂನು ನಿರ್ಧರಿಸಿದ ಮದುವೆ ವಯಸ್ಸಿಗೆ ಸಮಾಜ ಸ್ವಲ್ಪ ಸಡಿಲಿಕೆ ನೀಡಿ ಉದಾರವಾಗಿ 25- 30 ವರ್ಷ ಎಂದು ನಿರ್ಧರಿಸಿದಂತೆ ಕಾಣುತ್ತದೆ. ಈಗೊಂದೈದು ವರ್ಷಗಳಿಂದ 'ಈ ಮಾತನ್ನು ಕೇಳಿಸಿಕೊಂಡು ಇವಳಿಗೆ ಬೇಜಾರಾಗಿದೆ' ಎಂದು ಪ್ರಶ್ನಿಸುವವರಿಗೂ ಅನಿಸಿರಬೇಕು. ಮೂವತ್ತಾದರೆ ಮುದಿತನ ಆರಂಭ ಎಂಬಂತೆ ನಿರ್ಧರಿಸಿ ಖಾರವಾಗಿ 'ಇನ್ನೇನು ಮುದುಕಿ ಆದ್ಮೇಲೆ ಮದುವೆನಾ?' ಎಂದು ಕೇಳಿದವರು ಇದ್ದಾರೆ. ಇನ್ನೂ ನಾಜೂಕಯ್ಯಂದಿರು 'ವಯಸ್ಸು ಮುಗಿಯೊ ಮೊದಲು ಮದುವೆ ಆದ್ರೆ ಚೆಂದ' ಎಂದು ಬೆಣ್ಣೆಯಲ್ಲಿ ಕೂದಲು ತೆಗೆಯುತ್ತಾರೆ. ಅದಕ್ಕೆ ನಾನು, 'ಮಕ್ಕಳಾಗೋಕೆ ವಯಸ್ಸು ಬೇಕು, ಮದುವೆ ಆಗೋಕಲ್ಲ' ಎಂದು ಪ್ರತಿಕ್ರಿಯೆ ನೀಡಿದ್ದೂ ಇದೆ.

ನವಮಾಧ್ಯಮಗಳು ಕೈಗೆ ಎಟುಕಿ ಗೀಚಲೊಂದಿಷ್ಟು ಜಾಗ ಸಿಕ್ಕಾಗೆಲ್ಲಾ, ಮದುವೆ ಯಾವಾಗ? ಎಂದು ಕೇಳಿದವರ ಮೇಲೆ ಉದ್ದುದ್ದಕ್ಕೆ ಬರೆದಿದ್ದೇನೆ. ಪ್ರಶ್ನೆ ಇಟ್ಟವರೆಲ್ಲ ಡಿಜಿಟಲ್ ಮಾಧ್ಯಮದಲ್ಲಿ ಸ್ನೇಹಿತರಾಗಿರುವುದಿಲ್ಲವಲ್ಲ ಹಾಗಾಗಿ ನೇರವಾಗಿ ಸವಾಲಿಗೆ ತಕ್ಕ ಜವಾಬು ನೀಡುವುದನ್ನು ರೂಢಿಸಿಕೊಂಡಿದ್ದೇನೆ. ಮತ್ತದೆ ಪ್ರಶ್ನೆಗಳನ್ನು ಕೇಳುವ ದಪ್ಪ ಚರ್ಮದವರತ್ತ ಉದಾಸೀನತೆ ಬೆಳೆದು ಉಡಾಫೆಯೂ ರೂಢಿಯಾಗಿದೆ.

ಕಾಳಜಿಯಿಂದ ಕೇಳುವವರಿಗೆ, 'ಹುಡುಗ ಸಿಕ್ತಿಲ್ಲ' ಎಂದಿದ್ದೇನೆ. ಕುಹಕದಿಂದ ಕೇಳುವವರಿಗೆ, 'ಮದುವೆ ಆಗಿ ನಿಮ್ಮಂಥವ್ರೂ ಸಿಕ್ಕಿದ್ರೆ ಜೀವನ ಸರ್ವನಾಶ' ಎಂದಿದ್ದೂ ಇದೆ. ಸಹೋದ್ಯೋಗಿಗಳಿಗೆ 'ಈಗಂದ್ರೆ ಈಗ ನಾಳೆ ಅಂದ್ರೆ ನಾಳೆ, ಹುಡುಗನ್ನ ಮದುವೆ ಖರ್ಚನ್ನ ಎರಡನ್ನು ತಯಾರು ಮಾಡ್ಕೊಳ್ಳಿ' ಎಂದು ಉತ್ತರಿಸಿದ್ದೇನೆ. ನನ್ನ ಉತ್ತರ ಕಂಡು ಹಲವರು ಮತ್ತದೇ ಪ್ರಶ್ನೆ ಕೇಳುವ ಗೋಜಿಗೆ ಬಂದಿಲ್ಲ.

ಸರಳ ವಿವಾಹದ ಬಗ್ಗೆ ಈಗೊಂದೈದು ವರ್ಷದ ಹಿಂದೆ ಗೆಳೆಯನೊಬ್ಬನ ಬಳಿ ಮಾತನಾಡುತ್ತಿದ್ದೆ. ಆತ, 'ಏ ಅದೆಲ್ಲಾ ಆಗಲ್ಲ ಕಣೆ, ಒಂದೇ ಸಾರಿ ಮದ್ವೆ ಆಗೋದು; ಹಾಗಾಗಿ ಭರ್ಜರಿ ಆಗಿ ಆಗ್ತೀನಿ' ಎಂದಿದ್ದ. ಅದ್ಯಾಕೊ ಏನೊ 35 ವರ್ಷವಾದರೂ ಅವನು ಮದುವೆ ಆಗಿಲ್ಲ. ಇತ್ತೀಚೆಗೆ ಅವನೊಂದಿಗೆ ಮಾತನಾಡುವಾಗ 'ಮದುವೆ ಆಗ್ಬೇಕು ಅನ್ನೋ ಕಾರಣಕ್ಕೆ ಆಗ್ಬೇಕು ಅಷ್ಟೆ. ಏನ್ ಮದ್ವೆನೊ ಏನೊ ಹುಡುಗೀನೇ ಸಿಗಲ್ಲ' ಎಂದು ಗೊಣಗಿದ. 'ಸಿಕ್ತಾಳೆ ಬಿಡು, ನೀನು ಅಂದ್ಕೊಂಡ ಹಾಗೆ ಅದ್ಧೂರಿ ಮದುವೆ ಆಗತ್ತೆ' ಎಂದೆ. ನನ್ನ ಮಾತು ಮುಗಿಯುವುದರೊಳಗೆ 'ಇಲ್ಲ, ಇಲ್ಲ.. ಅದೆಲ್ಲ ಏನೂ ಬೇಡ, ಊರಿಗೆಲ್ಲಾ ತಿಳಿಯದ ಹಾಗೆ ಒಂದು ಸರಳ ಮದುವೆ ಸಾಕು' ಅಂತಂದ.

ಯಾಕೊ ಏನಾಯ್ತು ಅದ್ದೂರಿ ಮದುವೆ ಕಥೆ ? ಎಂದು ಕೇಳಿದೆ. ಅದಕ್ಕವನು, ಈಗ ಮದುವೆಗೆ ಕರೆದರೆ, ಬಂದವರೆಲ್ಲ, 'ಇಷ್ಟು ವರ್ಷ ಆದ್ರೂ ಮದುವೆ ಆಗಿರಲಿಲ್ವ, ಪಾಪ ಹೆಂಗೊ ಒಂದು ಹುಡುಗಿ ಅಂತ ಸಿಕ್ತಲ್ಲ..' ಅಂತ ಆಡ್ಕೊತಾರೆ. ಮದುವೆಗೆ ಕರೆದು ಊಟ ಹಾಕಿ ಅನ್ನಿಸ್ಕೊಳೊ ಕರ್ಮ ಯಾಕೆ?' ಎಂದ.

ವಯಸ್ಸು 22ರಿಂದ 23 ಆಗುವುದರೊಳಗೆ ಸ್ನಾತಕೋತ್ತರ ಪದವಿನೋ, ಡಿಪ್ಲೊಮಾನೋ ಮುಗಿದು ಜವಾಬ್ದಾರಿ ಹೆಗಲೇರಿರುತ್ತದೆ. ಹತ್ತಾರು ಸಂದರ್ಶನ ನೀಡಿ ಕೆಲಸಕ್ಕೆ ಸೇರಿದರೆ ತಿಂಗಳಿಗೆ ₹ 8 ರಿಂದ 10 ಸಾವಿರ ಸಿಕ್ಕರೆ ಹೆಚ್ಚು. ಓದಿನ ಸಾಲ, ವಯಸ್ಸಾಗುತ್ತಿರುವ ತಂದೆ-ತಾಯಿ, ವೃತ್ತಿ, ಪ್ರೀತಿ, ಪ್ರೇಮ, ಬ್ರೇಕಪ್ ಎಲ್ಲವನ್ನೂ ಸಂಭಾಳಿಸಿಕೊಂಡು ತಿರುಗಿ ನೋಡುವಷ್ಟರಲ್ಲಿ ವಯಸ್ಸು 25ರಿಂದ 30ರ ಕಡೆಗೆ ಓಡುತ್ತಿರುತ್ತದೆ. ಖರೆ ನನಗಾಗಿದ್ದು ಹೀಗೆಯೇ. ಈ ಮಧ್ಯೆ ಸರ್ಕಾರಿ ನೌಕರಿಗಾಗಿ ಒಂದೆರಡು ವರ್ಷ ಓದಿ ಗುಡ್ಡೆ ಹಾಕಿ, ಪರೀಕ್ಷೆಗಳ ನೋಟಿಫಿಕೇಷನ್ ಬರದೇ ಇರುವುದು, ಪರೀಕ್ಷೆ ಬರೆದರೂ ಫಲಿತಾಂಶ ಸಿಗದೇ ಇರುವುದು ಜತೆಗೆ ಮದುವೆಗೂ, ಸರ್ಕಾರಿ ನೌಕರಿಗೂ ವಯಸ್ಸು ಮೀರುತ್ತ ಹೋಗುತ್ತಿರುತ್ತದೆ.

ಕೆಲಸ ಸಿಕ್ಕಿ ಖಾತೆಯಲ್ಲಿ ನಾಲ್ಕು ಕಾಸಾದ ಮೇಲೆ ಮದುವೆ ಆಗಬಹುದು ಎಂದುಕೊಂಡರೆ ಜೊತೆಗೆ ಬಾಳಲು ಬರುವವರು ತಯಾರಿರಬೇಕಲ್ಲ. ಪ್ರೇಮವಿವಾಹಕ್ಕೆ ಮನೆಯವರ ಒಪ್ಪಿಗೆ ಬೇಕಲ್ಲ. ಜಾತಿ, ಅಂತಸ್ತು ಎಂಬ ಪೀಡೆಗಳು ಸರಿ ಹೊಂದಬೇಕಲ್ಲ. ಏನೋ ಎಲ್ಲ ಸರಿದೂಗಿಸಿಕೊಳ್ಳುವ ಹೊತ್ತಿಗೆ ಹುಡುಗನೇ ಪರಾರಿಯಾದರೆ!. ಅಯ್ಯೊ ಕರ್ಮವೇ!. ಪ್ರೀತಿ, ಪ್ರೇಮವೆಲ್ಲ ನನಗೆ ಆಗಿ ಬರಲ್ಲ ಎನಿಸಿ, ಅಪ್ಪ ಆಯಿಗೆ ನೀವೆ ಒಂದು ಜೀವಾನ ನೋಡಿ ತಗಲು ಹಾಕಿ ಎನ್ನುವ ಹೊತ್ತಿಗೆ ಸೂರ್ಯ ಪಶ್ಚಿಮದತ್ತ ಮುಖ ಮಾಡಿದ್ದಾನೆ. ಮನೆಯವರು ನೋಡಿದ ಜೀವ ನನಗೆ ಇಷ್ಟವಾದರೆ ಗಣಕೂಟಗಳಿಗೆ ಹಿಡಿಸುವುದಿಲ್ಲ. ಗಣಕೂಟಗಳು ಮನಸ್ಸು ಮಾಡಿದರೆ ನನಗೆ ಇಷ್ಟವಾಗುವುದಿಲ್ಲ. ಹೀಗೆ ದಿನಗಳು ಉರುಳುತ್ತಿರುವಾಗಲೇ ಮದುವೆ ಯಾವಾಗ? ಎಂದು ಪ್ರಶ್ನೆ ಕೇಳುವವರ ತಲೆ ಮೇಲೆ ಕುಕ್ಕಬೇಕು ಅನಿಸುವುದಂತೂ ಸುಳ್ಳಲ್ಲ.

ಕಾಲ ಬದಲಾಗಿದೆ. ಸಾಂಗತ್ಯಕ್ಕೆ ಮದುವೆಯ ಹೊರತಾದ ಸಂಬಂಧಗಳು ಜಾರಿಯಲ್ಲಿವೆ. ಬೇಡವೆಂದಾಗ ಸುಲಭವಾಗಿ ಬಿಟ್ಟು ಹೋಗಬಹುದಾದ ಎಲ್ಲಾ ಅವಕಾಶಗಳನ್ನು ಒದಗಿಸಿಕೊಟ್ಟಿವೆ. ಮದುವೆಯ ಜವಾಬ್ದಾರಿ ನಿಭಾಯಿಸಲಾಗದ, ನಿಭಾಯಿಸಲು ಇಷ್ಟವಿಲ್ಲದವರ ಸಂಖ್ಯೆ ಅಧಿಕವಾಗಿದೆ. ವ್ಯಕ್ತಿ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯಗಳು ಹೊಸ ಆಲೋಚನೆಗಳಿಗೆ ಎಡೆ ಮಾಡಿಕೊಟ್ಟಿವೆ. ಹಾಗೆ ಮದುವೆ ಯಾಕೆ ಬೇಕು ಎಂಬ ಪ್ರಶ್ನೆ ಇವುಗಳೆಲ್ಲದರ ಅನುಕೂಲತೆಯ ಬೆನ್ನಲ್ಲೆ ಹುಟ್ಟಿಕೊಂಡಿದೆ.

ಮದುವೆ ಎಂಬುದು ಖಾಸಗಿ ನಿರ್ಧಾರ ಎಂಬ ಆಲೋಚನೆ ಬಂದಿದೆ. ಆಗುವುದು, ಆಗದೇ ಉಳಿಯುವುದೆರಡೂ ಆಯ್ಕೆಯ ವಿಷಯವಾಗಿದೆ. ಮದುವೆ ಎಂಬುದು ವೈಯಕ್ತಿಕ ಎಂಬ ಆಲೋಚನೆ ಗಟ್ಟಿಯಾಗಿರುವಾಗ 'ಮದುವೆ ಯಾವಾಗ' ಎಂಬ ಮಾತು ಕಿರಿಕಿರಿ ಉಂಟು ಮಾಡುತ್ತದೆ.

ಮದುವೆಗೆ ವಯಸ್ಸಿನ ಹಂಗಿಲ್ಲ, ಮದುವೆಯನ್ನು ಲೈಂಗಿಕತೆಗೆ ಸೀಮಿತಮಾಡದೇ ಸಾಂಗತ್ಯದ ದೃಷ್ಟಿಯಲ್ಲಿ ನೋಡಬೇಕು ಎಂದು ವಿವಾಹ ವಿಚ್ಛೇದನ ಪಡೆದು 44ನೇ ವಯಸ್ಸಿಗೆ 44 ವಯಸ್ಸಿನ ಗೆಳತಿಯನ್ನು ಮದುವೆಯಾದ ಪಕ್ಕದ ಮನೆಯ ಅಣ್ಣನೊಬ್ಬ ಹೇಳುತ್ತಿದ್ದ. ಮದುವೆಯಾಗಲು ಇರುವ ನೂರಾರು ತೊಡಕುಗಳ ಬಗ್ಗೆ ಯೋಚಿಸಿ, ಮದುವೆ ಯಾವಾಗ? ಎಂದು ಕೇಳದಿರುವುದೇ ಸೂಕ್ತ.

ಸಿಂಗಲ್ಲಾ?!


ಸಿಂಗಲ್ ಆಗಿದ್ದರೆ ಎಂಥೆಂಥ ಒತ್ತಡಗಳನ್ನು ಎದುರಿಸಬೇಕು ಎನ್ನುವುದಕ್ಕೆ ಇವರೆಡೂ ಸಣ್ಣ ಉದಾಹರಣೆಗಳಷ್ಟೆ.

ಪಿ.ಜಿ ಸಹವಾಸ ಬೇಡ ಎಂದು ಮನೆ ಹುಡುಕಲು ಹೊರಟರೆ ಸಿಂಗಲ್ ಆಆಆಆಆಆಆಆ ಎಂದು ರಾಗ ಎಳೆದು ಮನೆ ಕೊಡಲು ನಿರಾಕರಿಸಿದ್ದಿದೆ. ಸಿಂಗಲ್ಲಾದ್ರು ಪರವಾಗಿಲ್ಲ, ಕೆಲಸದಲ್ಲಿರುವ ಹುಡುಗಿಯಿಂದ ಬಾಡಿಗೆ ಸರಿಯಾಗಿ ಸಿಗುತ್ತೆ ಎಂದು ಲೆಕ್ಕಹಾಕಿದ ಓನರ್ ಆಂಟಿ, 'ಮನೆಗೆ ಹುಡುಗರು ಯಾರು ಬರುವ ಹಾಗಿಲ್ಲ ಮತ್ತೆ' ಎಂದು ಷರತ್ತು ಹಾಕಿ ಮನೆ ನೀಡಿದ್ದಾರೆ.

ಮತ್ತೊಂದು ತಾಪತ್ರಯವಿದೆ. ಸಹೋದ್ಯೋಗಿಗಳ ಹೆಂಡತಿಯರು ಸಿಂಗಲ್ ಆಗಿರುವ ಹೆಣ್ಣುಮಕ್ಕಳನ್ನು ಕಂಡ ಕೂಡಲೇ ಅವರ ಗಂಡಂದಿರನ್ನು ಪಟಾಯಿಸುವ ಮಾಯಾಗಾರ್ತಿಯರು ಎಂಬಂತೆ ನೋಡುವವರಿದ್ದಾರೆ. ಅಪನಂಬಿಕೆಯೋ, ಅಭದ್ರತೆಯೋ ಸಿಕ್ಕಾಗಲೆಲ್ಲಾ 'ಬೇಗ ಮದುವೆ ಆಗ್ಬಿಡಿ; ಈಗಂತೂ ಸ್ವಲ್ಪ ತಡ ಆದ್ರೆ ಮಕ್ಕಳು ಆಗೋಕೆ ತುಂಬಾ ಕಾಂಪ್ಲಿಕೇಷನ್ನು' ಎಂದು ಹುಸಿ ಕಾಳಜಿ ತೋರಿಸುವವರಿದ್ದಾರೆ. 'ಹಾಗೆ ನಿಮ್ಮಣ್ಣ ಆಫೀಸ್‌ನಲ್ಲಿ ಹೇಗೆ?' ಎಂದು ತಮ್ಮ ಗಂಡನನ್ನು ನನಗೆ ಅಣ್ಣ ಮಾಡಿ, ತಮ್ಮ ಅಭದ್ರತೆಯನ್ನು ನೀಗಿಕೊಳ್ಳುತ್ತಾರೆ.

ಗರ್ಭಿಣಿಯರಿಗೆ ಕಾಲು ಊದುವುದರಿಂದ ತೊಂದರೆಯೇ?

ಸ್ಪಂದನ



ಡಾ. ವೀಣಾ ಎಸ್. ಭಟ್


1. ನನಗೆ 28ವರ್ಷಗಳು. ಮೊದಲಬಾರಿಗೆ ಗರ್ಭಧರಿಸಿದ್ದೇನೆ. ಈಗ ಏಳು ತಿಂಗಳಾಗಿದೆ. ನಿಯಮಿತವಾಗಿ ತಜ್ಞರಿಂದ ತಪಾಸಣೆ ಮಾಡಿಸಿಕೊಳ್ಳುತ್ತಿದ್ದೇನೆ. ಈಗ ನನ್ನ ಎರಡೂ ಕಾಲು ಊದುತ್ತಿದೆ. ವೈದ್ಯರು ಕೊಡುತ್ತಿರುವ ಕಬ್ಬಿಣಾಂಶ ಹಾಗೂ ಕ್ಯಾಲ್ಸಿಯಂ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿರುವೆ. ಏನೂ ತೊಂದರೆ ಇಲ್ಲವೆಂದು ತಿಳಿಸಿದ್ದಾರೆ. ಆದರೂ ನೋಡಿದವರು 'ಇದೇನಿದು ಎರಡು ಕಾಲು ಇಷ್ಟೊಂದು ಊದಿದೆ. ಬಿ.ಪಿ ಇದೆಯಾ' ಎಂದು ಕೇಳಿದಾಗ ನನಗೆ ಭಯ ಉಂಟಾಗುತ್ತಿದೆ. ಇದರಿಂದ ಏನೂ ತೊಂದರೆ ಇಲ್ಲವೇ ? ಕಾಲು ಊದುವುದನ್ನು ತಡೆಯಲು ಏನು ಮಾಡಬೇಕು?

ರೂಪಶ್ರೀ, ಕೋಲಾರ

ಉತ್ತರ: ರೂಪಶ್ರೀ ಅವರೇ, ಗರ್ಭಧಾರಣೆಯಲ್ಲಿ ಕಾಲು ಊದುವುದು ಸಾಮಾನ್ಯ. ಅದರಲ್ಲೂ ಕೊನೆಯ ಮೂರು ತಿಂಗಳಲ್ಲಿ ದೊಡ್ಡದಾಗುತ್ತಿರುವ ಗರ್ಭಕೋಶದಿಂದ ರಕ್ತನಾಳಗಳ ಮೇಲೆ ಒತ್ತಡ ಬೀಳುತ್ತದೆ. ರಕ್ತವು ಅಭಿದಮನಿಗಳಿಂದ ಹೃದಯಕ್ಕೆ ವಾಪಸ್ಸು ಹರಿಯುವುದು ತಡವಾಗಿ, ರಕ್ತಸಂಚಾರ ನಿಧಾನವಾಗಿ ನೀರಿನಾಂಶ ಕಾಲುಗಳಲ್ಲಿ ಸೇರುತ್ತದೆ. ಇದನ್ನು ಗರ್ಭಿಣಿಯರ ಸಹಜ ಶಾರೀರಿಕ ಊತ (ಫಿಸಿಯಲಾಜಿಕಲ್ ಎಡಿಮಾ) ಎನ್ನುತ್ತಾರೆ. ರಾತ್ರಿ ವಿಶ್ರಾಂತಿ ಪಡೆಯುವಾಗ ಕಾಲನ್ನು ಎದೆಯ ಮಟ್ಟಕ್ಕಿಂತ ಮೇಲಕ್ಕಿಟ್ಟುಕೊಂಡರೆ ಬೆಳಿಗ್ಗೆಯೊಳಗೆ ಈ ಕಾಲು ಊತ ಕಡಿಮೆಯಾಗುತ್ತದೆ.

ಗರ್ಭಧಾರಣೆಯಲ್ಲಿ ಹೆಚ್ಚಿಗೆ ಉತ್ಪಾದನೆಯಾಗುವ ಕೆಲವು ಹಾರ್ಮೋನುಗಳ ಪ್ರಭಾವದಿಂದ ಶರೀರದಿಂದ ಹೆಚ್ಚು ನೀರು ಹೀರಿಕೊಳ್ಳುತ್ತದೆ. ಇದೂ ಕೂಡ ಕಾಲು ಊತಕ್ಕೆ ಕಾಣವಾಗುತ್ತದೆ. ಹಾಗಾಗಿ ನಿಮಗೆ ಈ ತರಹದ ಎಡಿಮಾ ಇದ್ದಾಗ ಯಾವುದೇ ರೀತಿಯ ಭಯಬೇಡ.

ಆದರೆ ಒಮ್ಮಿಂದೊಮ್ಮೆಯೇ ಮುಖ, ಕೈಕಾಲು, ಬೆರಳುಗಳೆಲ್ಲವೂ ಊದಿದರೆ ಮಾತ್ರ ಅದು ಗರ್ಭಿಣಿಯರ ಏರು ರಕ್ತದೊತ್ತಡ ಅಥವಾ ಗರ್ಭವಿಷಭಾಧೆಯ (ಪ್ರೀಎಕ್ಲಾಂಪ್ಸಿಯಾ) ಮುನ್ಸೂಚನೆಯಾಗಿರಬಹುದು. ಆಗ ನೀವು ತಕ್ಷಣವೇ ವೈದ್ಯರನ್ನು ಭೇಟಿಮಾಡಿ ತಪಾಸಣೆಗೊಳಗಾಬೇಕು. ಬಿ.ಪಿ ಹೆಚ್ಚು ಇದ್ದರೆ ವೈದ್ಯರು ಸೂಕ್ತ ಮಾತ್ರೆಗಳನ್ನು ಕೊಡುತ್ತಾರೆ. ರಕ್ತಹೀನತೆ, ಅಪೌಷ್ಟಿಕತೆ ಹೆಚ್ಚಾಗಿದ್ದರೂ ಕೂಡಾ ಬರೀ ಕಾಲೂತವಷ್ಟೇ ಅಲ್ಲ ಇಡೀ ಶರೀರವೇ ಊದಿಕೊಳ್ಳಬಹುದು. ಅಂತಹ ಸಂದರ್ಭಗಳಲ್ಲಿಯೂ ಸೂಕ್ತ ತಪಾಸಣೆ ನಡೆಸಿ ವೈದ್ಯರು ಸೂಕ್ತಔಷಧವನ್ನು ಕೊಡುತ್ತಾರೆ. ಗರ್ಭಿಣಿಯರಲ್ಲಾಗುವ ಸಹಜ ಕಾಲುಊತ ಹೆಚ್ಚಾಗದಿರಲು ನೀವೇ ಅನುಸರಿಸಬಹುದಾದ ವಿಧಾನಗಳೆಂದರೆ:



- ಉಪ್ಪು, ಉಪ್ಪಿನಾಂಶವುಳ್ಳ ತಿನಿಸುಗಳನ್ನು (ಉಪ್ಪಿನಕಾಯಿ, ಹಪ್ಪಳ, ಸಂಡಿಗೆ.. ಇತ್ಯಾದಿ) ತಿನ್ನುವುದನ್ನು ಸಾಧ್ಯವಾದಷ್ಟು ಕಡಿಮೆಮಾಡಿ.
- ಅತಿಯಾಗಿ ಕಾಫಿ, ಟೀ ಕುಡಿಯಬೇಡಿ. ಕೃತಕ ಪಾನೀಯಗಳಿಂದ ದೂರವಿರಿ ಬದಲಾಗಿ ಬಾರ್ಲಿ ಅಕ್ಕಿಯನ್ನು ನೆನೆಸಿ ಬೇಯಿಸಿ ಅದರ ನೀರನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯಿರಿ.
- ಜಂಕ್‌ಫುಡ್ ಬಳಕೆ ಬೇಡವೇ ಬೇಡ. ಹೆಚ್ಚು ಪ್ರೋಟಿನ್ ಅಂಶ ಇರುವ ಬೇಳೆಕಾಳುಗಳನ್ನು ಸೇವಿಸಿ. ನಾರಿನಾಂಶವುಳ್ಳ ಹಸಿರು ಸೊಪ್ಪು, ತರಕಾರಿಗಳನ್ನು ಸೇವಿಸಿ.
- ಪ್ರತಿದಿನ 3 ರಿಂದ 4 ಲೀಟರ್ ನೀರನ್ನು ಕುಡಿಯಿರಿ
- ದೀರ್ಘಾವಧಿ ಒಂದೇಕಡೆ ನಿಲ್ಲುವುದನ್ನು ತಪ್ಪಿಸಿ. ಶಾಲೆಯಲ್ಲಿ ಪಾಠಮಾಡುವವರಿದ್ದರೆ, ಆಗಾಗ್ಗೆ ಓಡಾಡುತ್ತಿರಿ.
- ಕುಳಿತುಕೊಳ್ಳುವಾಗ ಕಾಲನ್ನು ಕ್ರಾಸ್ ಮಾಡಬೇಡಿ. ತುಂಬಾ ಹೊತ್ತು ನಿಂತಿರುವಾಗ ಕಾಲನ್ನು ಹಿಮ್ಮಡಿಯ ಮೇಲೆ ನಿಂತು ವೃತ್ತಾಕಾರವಾಗಿ ತಿರುಗಿಸಲು ಪ್ರಯತ್ನಿಸಬೇಕು. ತುದಿಕಾಲಿನ ಮೇಲೆ ಬರುವುದು ಹಿಮ್ಮಡಿಯ ಮೇಲೆ ಬರುವುದು ಈ ರೀತಿಯ ಚಲನೆ ಮಾಡುತ್ತಿರಬೇಕು. ಕುಳಿತಾಗ ದಿನಾಲೂ ಪಾದಗಳನ್ನ ಹಿಂದೆ ಮುಂದೆ 20ರಿಂದ 30ಬಾರಿ ಚಾಚಬೇಕು. ಎರಡೂಕಾಲು ಪಾದವನ್ನ ವೃತ್ತಾಕಾರವಾಗಿ ತಿರುಗಿಸಬೇಕು.
- ಕಣಕಾಲಿನಸುತ್ತ (Ankle joint ಹತ್ತಿರ) ಬಿಗಿಯಾಗುವ ಹಾಗೇ ಉಡುಪುಗಳನ್ನ ಧರಿಸಬೇಡಿ. ನಡೆಯುವಾಗ ಸೂಕ್ತವಾದ ಪಾದರಕ್ಷೆಗಳನ್ನ ಧರಿಸಿ.

ಈ ಮೇಲಿನ ಕ್ರಮಗಳಿಂದ ಗರ್ಭಿಣಿಯರ ಸಹಜ ಕಾಲೂತ ಸಹಜವಾಗಿಯೇ ಸರಿಪಡಿಸಿಕೊಳ್ಳಬಹುದು.

ಮತ್ತಷ್ಟು ಪ್ರಶ್ನೋತ್ತರಗಳಿಗಾಗಿ https://www.prajavani.net/women ನೋಡಿ

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಗೋಧ್ರೋತ್ತರ ಗಲಭೆ: 35 ಮಂದಿ ಖುಲಾಸೆ

ಹಲೋಲ್ (ಗುಜರಾತ್)(ಪಿಟಿಐ): ಗುಜರಾತ್‌ನ ಪಂಚಮಹಲ್ ಜಿಲ್ಲೆಯ ಹಲೋಲ್ ಪಟ್ಟಣದಲ್ಲಿ 2002ರಲ್ಲಿ ಗೋಧ್ರಾ ಗಲಭೆ ನಂತರ ನಡೆದಿದ್ದ ನಾಲ್ಕು ಪ್ರತ್ಯೇಕ ಹಿಂಸಾಚಾರ ಪ್ರಕರಣಗಳ ಎಲ್ಲ 35 ಜನರನ್ನು ನ್ಯಾಯಾಲಯ ಆರೋಪಗಳಿಂದ ಮುಕ್ತಗೊಳಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹರ್ಷ ತ್ರಿವೇದಿ ಅವರು ಈ ಸಂಬಂಧ ಜೂನ್ 12ರಂದು ಆದೇಶ ಹೊರಡಿಸಿದ್ದು, ಗುರುವಾರ ಆದೇಶದ ಪ್ರತಿ ಲಭ್ಯವಾಗಿದೆ.

'ಹುಸಿ ಜಾತ್ಯತೀತ ಮಾಧ್ಯಮಗಳು ಹಾಗೂ ರಾಜಕಾರಣಿಗಳು ಈ ಗಲಭೆಗಳು ಪೂರ್ವಯೋಜಿತ ಎಂಬುದಾಗಿ ಬಿಂಬಿಸಿದ್ದವು' ಎಂದು ನ್ಯಾಯಾಧೀಶರು ಆದೇಶದಲ್ಲಿ ಟೀಕಿಸಿದ್ದಾರೆ.

'2002ರ ಫೆ.28ರಂದು ಕಲೋಲ್ ಬಸ್ ನಿಲ್ದಾಣ, ದೇಲೋಲ್ ಗ್ರಾಮ ಹಾಗೂ ದೇರೋಲ್ ರೈಲು ನಿಲ್ದಾಣ ಸಮೀಪದ ಪ್ರದೇಶದಲ್ಲಿ ಹಿಂಸಾಚಾರ ಭುಗಿಲೆದ್ದ ನಂತರ, ಈ 35 ಮಂದಿ ಕೊಲೆ ಹಾಗೂ ಗಲಭೆಗಳಲ್ಲಿ ತೊಡಗಿದ್ದರು' ಎಂದು ಆರೋಪಿಸಲಾಗಿತ್ತು.

'ಈ ಹಿಂಸಾಚಾರದಲ್ಲಿ ಮೂವರನ್ನು ಹರಿತವಾದ ಆಯುಧಗಳಿಂದ ಕೊಲೆ ಮಾಡಿ, ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಮೃತದೇಹಗಳನ್ನು ಸುಟ್ಟು ಹಾಕಿದ್ದರು' ಎಂದು ಪ್ರಾಸಿಕ್ಯೂಷನ್ ವಾದಿಸಿತ್ತು. ಆದರೆ, ಸಾಕ್ಷ್ಯ ಒದಗಿಸುವಲ್ಲಿ ಪ್ರಾಸಿ ಕ್ಯೂಷನ್ ವಿಫಲವಾಗಿದೆ ಎಂದು ಹೇಳಿದೆ.

ಅಂಕಿ-ಅಂಶಗಳು

52 ನಾಲ್ಕು ಪ್ರಕರಣಗಳ ಆರೋಪಿಗಳ ಸಂಖ್ಯೆ

17 ವಿಚಾರಣೆ ನಡೆಯುತ್ತಿದ್ದ ವೇಳೆ ಮೃತಪಟ್ಟ ಆರೋಪಿಗಳ ಸಂಖ್ಯೆ

130 ಹೇಳಿಕೆ ದಾಖಲಿಸಿರುವ ಸಾಕ್ಷಿಗಳು

'ಗಲಭೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಸಾಮಾನ್ಯವಾಗಿ ಪೊಲೀಸರು ಎರಡೂ ಸಮುದಾಯಗಳಿಗೆ ಸೇರಿದ ಜನರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತಾರೆ. ಆದರೆ, ಯಾರು ತಪ್ಪು ಮಾಡಿದ್ದಾರೆ ಎಂದು ನಿರ್ಧರಿಸುವ ಕೆಲಸ ನ್ಯಾಯಾಲಯದ್ದು. ಯಾರಿಂದ ಅಪರಾಧವಾಗಿದೆ ಎಂಬುದನ್ನು ಪೊಲೀಸರು ಪತ್ತೆ ಮಾಡಿಲ್ಲ ಎಂಬ ಕಾರಣಕ್ಕೆ ನ್ಯಾಯಾಲಯ ತನ್ನ ಕರ್ತವ್ಯದಿಂದ ನುಣುಚಿಕೊಳ್ಳಲಾಗದು' ಎಂದು ನ್ಯಾಯಾಧೀಶ ತ್ರಿವೇದಿ ಅವರು ಆದೇಶದಲ್ಲಿ ಹೇಳಿದ್ದಾರೆ.

'ಗುಜರಾತ್ ಜನರು ಶಾಂತಿ ಪ್ರಿಯರು. 2002ರ ಫೆಬ್ರುವರಿ 27ರಂದು ಗೋಧ್ರಾದಲ್ಲಿ ರೈಲಿಗೆ ಬೆಂಕಿ ಹಚ್ಚಿದ ಘಟನೆಯಿಂದಾಗಿ ಘಾಸಿಗೊಂಡಿದ್ದರು. ಆದರೆ, ಹುಸಿ ಜಾತ್ಯತೀತ ಮಾಧ್ಯಮಗಳು ಹಾಗೂ ರಾಜಕಾರಣಿಗಳಿಂದ ಈ ಗಾಯಕ್ಕೆ ಉಪ್ಪು ಸವರುವ ಕೆಲಸ ನಡೆಯಿತು' ಎಂದು ಟೀಕಿಸಿದ್ದಾರೆ.

> **ಆರೋಪಿಗಳು ಗಲಭೆಯಲ್ಲಿ ತೊಡಗಿದ್ದರು. ಅವರಿಂದ ಆಯುಧಗಳನ್ನು ಜಪ್ತಿ ಮಾಡಲಾಗಿತ್ತು ಎಂಬುದನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ**
> **ಹರ್ಷ ತ್ರಿವೇದಿ,** ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ

'ಗೋಧ್ರೋತ್ತರ ಗಲಭೆಯಲ್ಲಿ ಗುಜರಾತ್‌ನ 24 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು. ಉದ್ರಿಕ್ತ ಗುಂಪಿನಲ್ಲಿ 2 ಸಾವಿರದಿಂದ 3 ಸಾವಿರ ಜನರಿದ್ದರು. ಕೆಲವೆಡೆ 5 ಸಾವಿರದಿಂದ 10 ಸಾವಿರದಷ್ಟು ಜನರಿದ್ದ ಗುಂಪುಗಳು ಗಲಭೆಯಲ್ಲಿ ತೊಡಗಿದ್ದವು. ಈ ಗಲಭೆಗಳು ಹಠಾತ್ತಾಗಿ ಭುಗಿಲೆದ್ದಿದ್ದವು. ಹುಸಿ ಜಾತ್ಯತೀತ ವ್ಯಕ್ತಿಗಳು ವಿವರಿಸಿದಂತೆ ಪೂರ್ವಯೋಜಿತ ಕೃತ್ಯಗಳಾಗಿರಲಿಲ್ಲ' ಎಂದೂ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಪ್ರಕರಣಗಳ ವಿವರ: ಕಲೋಲ್ ಪಟ್ಟಣ ಮತ್ತು ಇತರ ಎರಡು ಪ್ರದೇಶಗಳಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸಂಘರ್ಷ ಆರಂಭಗೊಂಡಿತು. ಈ ವೇಳೆ, ಮುಸ್ಲಿಂ ಸಮುದಾಯಕ್ಕೆ ಸೇರಿದ ಮೂವರು ನಾಪತ್ತೆಯಾಗಿದ್ದರು. ಕೆಲ ದಿನಗಳ ನಂತರ ಈ ಮೂವರ ಮೃತದೇಹಗಳು ಪತ್ತೆಯಾದವು ಎಂದು ಆರೋಪಿಸಲಾಗಿತ್ತು.

ಎನ್‌ಎಂಎಂಎಲ್ ಇನ್ಮುಂದೆ 'ಪ್ರಧಾನಮಂತ್ರಿ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸಂಸ್ಥೆ'

ನೆಹರೂ ಹೆಸರಿಗೆ ಕೇಂದ್ರದಿಂದ ಕೊಕ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯ ತೀನ್ ಮೂರ್ತಿ ಭವನ ಆವರಣದಲ್ಲಿರುವ 'ನೆಹರೂ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸಂಸ್ಥೆ' (ಎನ್‌ಎಂಎಂಎಲ್) ಹೆಸರನ್ನು ಕೇಂದ್ರ ಸರ್ಕಾರ ಬದಲಾಯಿಸಿದ್ದು 'ಪ್ರಧಾನ ಮಂತ್ರಿಗಳ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸಂಸ್ಥೆ' ಎಂಬುದಾಗಿ ಮರುನಾಮಕರಣ ಮಾಡಿದೆ.

'ಎನ್‌ಎಂಎಂಎಲ್‌ನ ಉಪಾಧ್ಯಕ್ಷರೂ ಆಗಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ಸಂಸ್ಥೆಯ ಹೆಸರನ್ನು ಬದಲಾಯಿಸುವ ಕುರಿತು ನಿರ್ಣಯ ಕೈಗೊಳ್ಳಲಾಯಿತು' ಎಂದು ಸಂಸ್ಕೃತಿ ಸಚಿವಾಲಯ ಶುಕ್ರವಾರ ತಿಳಿಸಿದೆ.

ಕೇಂದ್ರ ಸರ್ಕಾರದ ಈ ನಡೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್, 'ಇದು ಕ್ಷುಲ್ಲಕ ಕ್ರಮ' ಎಂದು ಟೀಕಿಸಿದೆ.

'ವಿಶೇಷ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಚಿವ ರಾಜನಾಥ್ ಸಿಂಗ್, ಈ ಸಂಸ್ಥೆಗೆ ಹೊಸ ರೂಪ ನೀಡಲಾಗಿದೆ. ಜವಾಹರಲಾಲ್ ನೆಹರೂ ಅವರಿಂದ ಹಿಡಿದು ನರೇಂದ್ರ ಮೋದಿ ತನಕ ಎಲ್ಲ ಪ್ರಧಾನಿಗಳ ಕೊಡುಗೆಗಳನ್ನು ಈ ಸಂಸ್ಥೆ ಪ್ರದರ್ಶಿಸುತ್ತದೆ. ಹೀಗಾಗಿ ಸಂಸ್ಥೆಯ ಹೆಸರನ್ನು ಬದಲಾಯಿಸುವ ಪ್ರಸ್ತಾವ ಮಂಡಿಸಿದ್ದು ಸ್ವಾಗತಾರ್ಹ' ಎಂಬುದಾಗಿ ಹೇಳಿದರು ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ದೇಶದ ಪ್ರಧಾನಿಯೇ ಒಂದು ಸಂಸ್ಥೆ ಇದ್ದಂತೆ. ಅಧಿಕಾರದಲ್ಲಿದ್ದ ಅವಧಿಯ ಅವರ ಪಯಣವನ್ನು ಕಾಮನಬಿಲ್ಲಿನಲ್ಲಿರುವ ಒಂದೊಂದು ಬಣ್ಣಕ್ಕೆ ಹೋಲಿಸಬಹುದು. ಕಾಮನಬಿಲ್ಲು ಕಣ್ಮನ ಸೆಳೆಯಬೇಕು ಎಂದಾದಲ್ಲಿ ಅದರಲ್ಲಿನ ಎಲ್ಲ ಬಣ್ಣಗಳಿಗೆ ಸಮಾನ ಪ್ರಾತಿನಿಧ್ಯ ಇರಬೇಕು. ಅದೇ ರೀತಿ ಎಲ್ಲ ಪ್ರಧಾನಿಗಳ ಕೊಡುಗೆಗಳಿಗೂ ಸರಿಯಾದ ಪ್ರಾತಿನಿಧ್ಯ ಸಿಗಬೇಕು' ಎಂದು ಹೇಳಿದರು.

'ಸಂಸ್ಥೆಯ ಹೆಸರು ಬದಲಾವಣೆ ಮಾಡುವ ಮೂಲಕ ಹಿಂದಿನ ಎಲ್ಲ ಪ್ರಧಾನಿಗಳಿಗೆ ಗೌರವ ನೀಡಿದಂತಾಗಿದೆ. ಈ ನಿರ್ಣಯವು ಪ್ರಜಾಸತ್ತಾತ್ಮಕವಾಗಿಯೂ ಇದೆ' ಎಂದು ರಾಜನಾಥ್ ಸಿಂಗ್ ಹೇಳಿದ್ದಾಗಿ ಪ್ರಕಟಣೆ ತಿಳಿಸಿದೆ.

ತೀನ್ ಮೂರ್ತಿ ಭವನ: ಬ್ರಿಟಿಷರ ಆಳ್ವಿಕೆ ವೇಳೆ ನಿರ್ಮಿಸಲಾಗಿರುವ ತೀನ್ ಮೂರ್ತಿ ಭವನ, ದೇಶ ಸ್ವಾತಂತ್ರ್ಯ ಪಡೆದ ನಂತರ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಅಧಿಕೃತ ನಿವಾಸವಾಗಿತ್ತು.

ನೆಹರೂ ಅವರು ಈ ನಿವಾಸದಲ್ಲಿ 16 ವರ್ಷಗಳಿಗೂ ಹೆಚ್ಚು ಕಾಲ ವಾಸವಾಗಿದ್ದರು. ನೆಹರೂ ಅವರ 75ನೇ ಜನ್ಮದಿನದ ನೆನಪಿಗಾಗಿ 1964ರಲ್ಲಿ ಈ ಭವನದಲ್ಲಿ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸ್ಥಾಪಿಸಿ, ಸಮರ್ಪಿಸಲಾಯಿತು. ನಂತರ ಇದಕ್ಕೆ ಸ್ವಾಯತ್ತ ಸ್ಥಾನಮಾನ ನೀಡಲಾಯಿತು. ಇದರ ಅಂಗವಾಗಿ 1966ರ ಏಪ್ರಿಲ್ 1ರಂದು ನೆಹರೂ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸಂಸ್ಥೆಯನ್ನು ಸ್ಥಾಪಿಸಲಾಯಿತು.



ತೀನ್ ಮೂರ್ತಿ ಭವನ

ಸಂಗ್ರಹಾಲಯಕ್ಕೆ ಭೇಟಿ ನೀಡದೇ ಆರೋಪ: ಬಿಜೆಪಿ ಟೀಕೆ

ಕಾಂಗ್ರೆಸ್ ನಾಯಕರ ಆರೋಪಗಳಿಗೆ ತಿರುಗೇಟು ನೀಡಿರುವ ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ, 'ಕಾಂಗ್ರೆಸ್ ನಾಯಕರು ಈ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡದೇ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ' ಎಂದಿದ್ದಾರೆ.

'ನೆಹರೂ ಹಾಗೂ ನಂತರದ ಪ್ರಧಾನಿಗಳ ಕೊಡುಗೆಗಳ ಕುರಿತು ಆಧುನಿಕ ತಂತ್ರಜ್ಞಾನ ಬಳಸಿ ಅದ್ಭುತವಾಗಿ ಪ್ರದರ್ಶಿಸಲಾಗಿದೆ. ಪ್ರಧಾನಿ ಮೋದಿ ಮೇಲಿನ ದ್ವೇಷಕ್ಕಾಗಿ ಕಾಂಗ್ರೆಸ್‌ನವರು ತಮ್ಮ ನಾಯಕರನ್ನು ಅವಮಾನಿಸುವುದಕ್ಕೂ ಹಿಂಜರಿಯುವುದಿಲ್ಲ' ಎಂದು ಟೀಕಿಸಿದ್ದಾರೆ.

ಖರ್ಗೆ ಟೀಕೆಗೆ ಪ್ರತಿಕ್ರಿಯಿಸಿರುವ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, 'ಕಾಂಗ್ರೆಸ್‌ನವರಲ್ಲಿರುವ ರಾಜಕೀಯ ಅಸಹನೆಗೆ ಇದು ನಿದರ್ಶನ' ಎಂದು ಹೇಳಿದ್ದಾರೆ.

'ಒಂದು ಕುಟುಂಬದ ಆಚೆಗೂ ನಾಯಕರು ಇದ್ದಾರೆ, ಅವರೂ ಈ ದೇಶ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ ಎಂಬುದನ್ನು ಒಪ್ಪಿಕೊಳ್ಳಲು ಕಾಂಗ್ರೆಸ್‌ನವರಿಗೆ ಆಗುತ್ತಿಲ್ಲ' ಎಂದು ವಾಗ್ದಾಳಿ ನಡೆಸಿದ್ದಾರೆ.

ಪ್ರತೀಕಾರದ ಕ್ರಮ: ಕಾಂಗ್ರೆಸ್ ಟೀಕೆ

'ನೆಹರೂ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸಂಸ್ಥೆ'ಯ ಹೆಸರನ್ನು ಬದಲಾಯಿಸುವ ಕೇಂದ್ರ ಕ್ರಮವನ್ನು 'ಕ್ಷುಲ್ಲಕ ಹಾಗೂ ಪ್ರತೀಕಾರದ ಕ್ರಮ' ಎಂದು ಕರೆದಿರುವ ಕಾಂಗ್ರೆಸ್ ನಾಯಕರು, 'ಇಂಥ ನಡೆಗಳಿಂದ ನೆಹರೂ ಅವರ ಘನತೆ, ಖ್ಯಾತಿಗೆ ಧಕ್ಕೆ ತರಲಾಗದು' ಎಂದಿದ್ದಾರೆ.

'ಯಾರಿಗೆ ಇತಿಹಾಸ ಇಲ್ಲವೋ ಅಂಥವರು ಈಗ ಇತಿಹಾಸವನ್ನು ಅಳಿಸಿ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

'ಇದು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಕೀಳು ಮನಸ್ಥಿತಿ ಹಾಗೂ ಸರ್ವಾಧಿಕಾರಿ ಧೋರಣೆಯನ್ನು ಬಿಂಬಿಸುತ್ತದೆ. ಮೋದಿ ನೇತೃತ್ವದ ಸರ್ಕಾರದ ಇಂಥ ಪ್ರಗತಿವಿರೋಧಿ ವೈಚಾರಿಕತೆಯು ದೇಶಕ್ಕೆ 'ಭಾರತ ರತ್ನ' ನೀಡಿದ ಕೊಡುಗೆಗಳನ್ನು ಗೌಣ ಮಾಡುವುದಿಲ್ಲ' ಎಂದು ಖರ್ಗೆ ಟೀಕಿಸಿದ್ದಾರೆ.

'ಕ್ಷುಲ್ಲಕತನ ಮತ್ತು ಪ್ರತೀಕಾರದ ಮತ್ತೊಂದು ಹೆಸರೇ ಮೋದಿ. ಕಳೆದ 59 ವರ್ಷಗಳಿಂದ ನೆಹರೂ ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ಹೆಸರು ಪಡೆದ ಬೌದ್ಧಿಕ ತಾಣವಾಗಿತ್ತು. ಅಮೂಲ್ಯ ಗ್ರಂಥಗಳ ಮನೆಯಾಗಿತ್ತು. ಇನ್ನು ಮುಂದೆ ಇದು ಪ್ರಧಾನಮಂತ್ರಿಗಳ ವಸ್ತುಸಂಗ್ರಹಾಲಯ ಸಂಸ್ಥೆಯಷ್ಟೆ ಆಗಲಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಹೇಳಿದ್ದಾರೆ.

ಗುಜರಾತ್‌ನಲ್ಲಿ ಬಿಪೊರ್ ಜಾಯ್ ಅಬ್ಬರ; 494 ಮನೆಗೆ ಹಾನಿ

ಸಾವಿರ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ

ಅಹಮದಾಬಾದ್ (ಪಿಟಿಐ): ಚಂಡಮಾರುತ 'ಬಿಪೊರ್‌ಜಾಯ್' ಗುಜರಾತ್‌ನ ಕಚ್, ಸೌರಾಷ್ಟ್ರ ವಲಯದಲ್ಲಿ ಅಪ್ಪಳಿಸಿದೆ. ಗುರುವಾರ ಸಂಜೆಯಿಂದ ಕಂಡುಬಂದ ಬಿರುಗಾಳಿ, ಧಾರಾಕಾರ ಮಳೆಯಿಂದಾಗಿ ವಿವಿಧೆಡೆ ನೂರಾರು ಮರ ಹಾಗೂ ವಿದ್ಯುತ್ ಕಂಬಗಳು ಉರುಳಿವೆ. ಕರಾವಳಿಯ ಜಿಲ್ಲೆಗಳಲ್ಲಿ ಸಾವಿರಕ್ಕೂ ಅಧಿಕ ಗ್ರಾಮಗಳು ಕಗ್ಗತ್ತಲಲ್ಲಿ ಮುಳುಗಿವೆ.

ಜೀವಹಾನಿ ಸಂಭವಿಸಿಲ್ಲ. ಆದರೆ ಮಳೆ ಸಂಬಂಧಿತ ಅವಘಡಗಳಲ್ಲಿ 23 ಮಂದಿ ಗಾಯಗೊಂಡಿದ್ದಾರೆ. 20 ಮನೆಗಳು ಪೂರ್ಣ, 474 ಮನೆಗಳು ಭಾಗಶಃ ಹಾನಿಗೊಂಡಿವೆ. 800ಕ್ಕೂ ಅಧಿಕ ಮರಗಳು ಉರುಳಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ.

'ಚಂಡಮಾರುತ ಗುರುವಾರ ಸಂಜೆ ಅಪ್ಪಳಿಸಿದ್ದು ಭಾರಿ ಮಳೆ, ಗಾಳಿ ಶುರುವಾಗಿದೆ. ಗಾಳಿಯ ವೇಗ ಗಂಟೆಗೆ 140 ಕಿ.ಮೀ. ಇತ್ತು. ಬೆಳಗಿನ ಜಾವ 2.30ರ ವೇಳೆಗೆ ದುರ್ಬಲಗೊಂಡಿದೆ' ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಎಂಟು ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಅಧಿಕ ತಂಡಗಳು ವಿದ್ಯುತ್ ಸಂಪರ್ಕ ಮರುಸ್ಥಾಪಿಸುವ ಕಾರ್ಯದಲ್ಲಿ ತೊಡಗಿವೆ ಎಂದು ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ತಿಳಿಸಿದ್ದಾರೆ.

ಮುಂಜಾಗ್ರತೆಯಾಗಿ ಲಕ್ಷಕ್ಕೂ ಅಧಿಕ ಜನರನ್ನು ಸ್ಥಳಾಂತರಿಸಲಾಗಿತ್ತು. ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿತ್ತು. ಹೀಗಾಗಿ, ಜೀವಹಾನಿ ಆಗುವುದು ತಪ್ಪಿತು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆರ್ಥಿಕ, ಆಸ್ತಿ ಹಾನಿ ಅಗಣಿತ: ಚಂಡಮಾರುತದಿಂದ ನಿರೀಕ್ಷೆ ಮೀರಿದ ಆಸ್ತಿ, ಆರ್ಥಿಕ ಹಾನಿ ಸಂಭವಿಸಿದೆ. ಪ್ರಾಥಮಿಕ ವರದಿಗಳ ಪ್ರಕಾರ 5,120 ವಿದ್ಯುತ್ ಕಂಬಗಳು ಉರುಳಿವೆ. 4,600 ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತವಾಗಿದೆ.



ಚಂಡಮಾರುತದ ಪರಿಣಾಮ ಗುಜರಾತ್‌ನ ಕಛ್ ಜಿಲ್ಲೆಯ ಮಾಂಡ್ವಿ ಪಟ್ಟಣ ಜಲಾವೃತಗೊಂಡಿದೆ —ಎಎಫ್‌ಪಿ ಚಿತ್ರ

ಮಿಜೋರಾಂಗೆ ಸಂಪರ್ಕ ಬಂದ್

ಐಜ್ವಾಲ್ (ಪಿಟಿಐ): ಮಿಜೋರಾಂಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 6ರಲ್ಲಿ ಧಾರಾಕಾರ ಮಳೆ, ಭೂಕುಸಿತವಾಗಿದೆ. ಮಿಜೋರಾಂ ಅನ್ನು ದೇಶದ ಇತರೆ ರಾಜ್ಯಗಳ ಸಂಪರ್ಕ ಕಲ್ಪಿಸುವ ಹೆದ್ದಾರಿ ಇದಾಗಿದೆ.

ಹೆದ್ದಾರಿಯಲ್ಲಿ ಹುನ್ತಾರ್ ವಲಯದಲ್ಲಿ ಭೂಕುಸಿತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಂಡಮಾರುತದ ಪರಿಣಾಮ ರಾಜಸ್ಥಾನದ ಜಾಲೋರ್, ಬಾರ್ಮರ್ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಿದೆ. ರಾಷ್ಟ್ರ ರಾಜಧಾನಿ ದೆಹಲಿಯ ವಿವಿಧೆಡೆ ಕಳೆದ 24 ಗಂಟೆಗಳಲ್ಲಿ ಉತ್ತಮ ಮಳೆಯಾಗಿದೆ.

ಸಮ್ಮತಿಯ ವಯಸ್ಸು: ಮಾಹಿತಿ ಕೋರಿದ ಆಯೋಗ

ನವದೆಹಲಿ (ಪಿಟಿಐ): ಸಮ್ಮತಿಯ ವಯಸ್ಸಿನ ಪುನರ್ ಪರಿಶೀಲನೆ ಸಂಬಂಧ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಅಧಿಕಾರಿಗಳೊಂದಿಗೆ ಇತ್ತೀಚೆಗೆ ಸಭೆ ನಡೆಸಿದ 22ನೇ ಕಾನೂನು ಆಯೋಗವು ಈ ಬಗ್ಗೆ ವಿವರ ಕೇಳಿದೆ ಎಂದು ಮೂಲಗಳು ತಿಳಿಸಿವೆ.

ನ್ಯಾಯಮೂರ್ತಿ (ನಿವೃತ್ತ) ಋತು ರಾಜ್ ಅವಸ್ಥಿ ಅವರ ನೇತೃತ್ವದ ಕಾನೂನು ಆಯೋಗವು ಸರ್ಕಾರದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಸಮ್ಮತಿಯ ವಯಸ್ಸಿನ ಮಾನದಂಡದ ವಿಷಯದ ಬಗ್ಗೆ ಕೆಲವು ಮಾಹಿತಿ ಕೋರಿದೆ ಎಂದು ಮೂಲಗಳು ತಿಳಿಸಿವೆ.

'ನಾವು ಈ ವಿಷಯದ ಬಗ್ಗೆ ಗಮನ ಹರಿಸಿದ್ದೇವೆ. ಕೆಲವು ಮಾಹಿತಿಯನ್ನು ಒದಗಿಸಲು ನಾವು ಕಾನೂನು ಆಯೋಗದ ಸದಸ್ಯರೊಂದಿಗೆ ಸಭೆ ನಡೆಸಿದ್ದೇವೆ' ಎಂದು ಸರ್ಕಾರದ ಅಧಿಕಾರಿಗಳು ಹೇಳಿದ್ದಾರೆ.

18ಕ್ಕಿಂತ ಕಡಿಮೆ ವಯಸ್ಸಿನವರನ್ನು ಮಕ್ಕಳು ಎಂದು ವ್ಯಾಖ್ಯಾನಿಸುವ, ಲೈಂಗಿಕ ಅಪರಾಧಗಳಿಂದ ಮಕ್ಕಳಿಗೆ ರಕ್ಷಣೆ ನೀಡುವ (ಪೋಕ್ಸೊ) ಕಾಯ್ದೆ ಮತ್ತು ಹದಿಹರೆಯದವರ ನಡುವಿನ ಸಂಬಂಧಗಳ ಸ್ವರೂಪ ನಿರ್ಣಯಿಸುವಲ್ಲಿನ ಸಮ್ಮತಿಯ ವಯಸ್ಸಿನ ಗೊಂದಲ ಹಲವು ವರ್ಷಗಳಿಂದ ಇದೆ. ಪೋಕ್ಸೊ ಕಾಯ್ದೆ ಅಡಿಯಲ್ಲಿನ ಸಮ್ಮತಿಯ ವಯಸ್ಸಿನ ಮಾನದಂಡದ ಬಗ್ಗೆ ಕಾನೂನು ಆಯೋಗ ಮರುಚಿಂತನೆ ನಡೆಸುವ ಅಗತ್ಯವಿರುವುದಾಗಿ ಹೈಕೋರ್ಟ್ ನ್ಯಾಯಪೀಠಗಳು ಅಭಿಪ್ರಾಯಪಟ್ಟಿದ್ದವು.

ಮಧ್ಯಸ್ಥಿಕೆ: ಸಮಿತಿ ರಚನೆ

ನವದೆಹಲಿ (ಪಿಟಿಐ): ಮಧ್ಯಸ್ಥಿಕೆ ಕಾನೂನಿನಲ್ಲಿ ಸುಧಾರಣೆಗಳನ್ನು ತರಲು ಮುಂದಾಗಿರುವ ಕೇಂದ್ರ ಸರ್ಕಾರ, ಕಾನೂನು ಸಚಿವಾಲಯದ ಮಾಜಿ ಕಾರ್ಯದರ್ಶಿ ಟಿ.ಕೆ. ವಿಶ್ವನಾಥನ್ ನೇತೃತ್ವದಲ್ಲಿ ತಜ್ಞರ ಸಮಿತಿ ರಚಿಸಿದೆ.

ಮಣಿಪುರ: ಕೇಂದ್ರ ಸಚಿವ ರಂಜನ್ ಸಿಂಗ್ ಮನೆ ಮೇಲೆ ಉದ್ರಿಕ್ತರಿಂದ ದಾಳಿ

'ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ'

ಪ್ರಜಾವಾಣಿ ವಾರ್ತೆ/ಪಿಟಿಐ

ಇಂಫಾಲ್/ಗುವಾಹಟಿ: 'ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ' ಎಂದು ವಿದೇಶಾಂಗ ಖಾತೆ ರಾಜ್ಯ ಸಚಿವ ಆರ್.ಕೆ. ರಂಜನ್ ಸಿಂಗ್ ಅವರು ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಇಂಫಾಲ್‌ನಲ್ಲಿರುವ ನನ್ನ ಮನೆಯ ಮೇಲೆ ಗುಂಪೊಂದು ಗುರುವಾರ ರಾತ್ರಿ ಪೆಟ್ರೋಲ್ ಬಾಂಬ್‌ನಿಂದ ದಾಳಿ ನಡೆಸಿ, ಧ್ವಂಸಗೊಳಿಸಿದೆ. ಮನೆಗೆ ಬೆಂಕಿ ಹಚ್ಚಲೂ ಗುಂಪು ಯತ್ನಿಸಿದೆ. ನನ್ನ ಮನೆಯ ಮೇಲೆ ನಡೆದ ಎರಡನೇ ದಾಳಿ ಇದು. ಅಗ್ನಿಶಾಮಕ ದಳವು ನನ್ನ ಮನೆಗೆ ಬರದಂತೆ ಉದ್ರಿಕ್ತ ಗುಂಪು ರಸ್ತೆಗಳನ್ನು ಬಂದ್ ಮಾಡಿತು. ಕೇಂದ್ರದಿಂದ ಇಷ್ಟೊಂದು ಸಹಾಯ ದೊರೆತಿದ್ದರೂ, ರಾಜ್ಯ ಸರ್ಕಾರ ಸೂಕ್ತ ರೀತಿಯಲ್ಲಿ ಭದ್ರತೆ ಒದಗಿಸುತ್ತಿಲ್ಲ' ಎಂದು ಸಚಿವ ರಂಜನ್ ದೂರಿದ್ದಾರೆ.

ಗುರುವಾರ ಮಧ್ಯಾಹ್ನದ ವೇಳೆಗೆ ಇಂಫಾಲ್‌ನ ಹೃದಯ ಭಾಗದಲ್ಲಿ ಉದ್ರಿಕ್ತ ಗುಂಪು ಹಾಗೂ ಕ್ಷಿಪ್ರ ಕಾರ್ಯ ಪಡೆಗಳ ಮಧ್ಯೆ ಘರ್ಷಣೆ ನಡೆದಿದೆ. ಇದೇ ದಿನ ರಾತ್ರಿ ಸಚಿವರ ಮನೆ ಮೇಲೆ ದಾಳಿ ನಡೆದಿದೆ. ಬುಧವಾರ ರಾಜ್ಯ ಸರ್ಕಾರದ ಸಚಿವೆ ನೆಮ್ಚಾ ಕಿಪ್ಗೆನ್ ಅವರ ಮನೆ ಮೇಲೂ ದಾಳಿ ನಡೆದಿತ್ತು. ಇವರು ಕುಕಿ ಸಮುದಾಯಕ್ಕೆ ಸೇರಿದವರು. ರಂಜನ್ ಅವರು ಮೈತೇಯಿ ಸಮುದಾಯಕ್ಕೆ ಸೇರಿದವರು. ಪ್ರತೀಕಾರವಾಗಿ ರಂಜನ್ ಅವರ ಮನೆ ಮೇಲೆ ದಾಳಿ ನಡೆಸಿದೆ ಎನ್ನಲಾಗಿದೆ.

'ಸಾವಿರಾರು ಜನರು ಮನೆಯ ಮುಂದೆ ಜಮಾವಣೆಗೊಂಡಿದ್ದರು. ಉದ್ರಿಕ್ತ ಗುಂಪು ಮನೆಗೆ ಬೆಂಕಿ ಹಚ್ಚುವುದನ್ನು ಭದ್ರತಾ ಸಿಬ್ಬಂದಿ ಹಾಗೂ ಅಗ್ನಿಶಾಮಕ ದಳದವರು ತಡೆದರು. ಮನೆಯಲ್ಲಿರುವ ಯಾರಿಗೂ ತೊಂದರೆ ಆಗಿಲ್ಲ' ಎಂದು ಅಧಿಕಾರಿಗಳು ತಿಳಿಸಿದರು. ರಂಜನ್ ಸಿಂಗ್ ಅವರು ಕೇರಳದಲ್ಲಿ ಅಧಿಕೃತ ಪ್ರವಾಸ ದಲ್ಲಿದ್ದರು. ಸುದ್ದಿ ತಿಳಿದ ತಕ್ಷಣವೇ ಅವರು ಇಂಫಾಲ್‌ಗೆ ಮರಳಿದ್ದಾರೆ.

ಮುಂದುವರಿದ ಹಿಂಸಾಚಾರ: ಶುಕ್ರವಾರ ಬೆಳಗಿನ ಜಾವದವರೆಗೂ ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಗುಂಡಿನ ಚಕಮಕಿಯ ಸದ್ದು ಕೇಳಿಸುತ್ತಿತ್ತು. ಉದ್ರಿಕ್ತ ಗುಂಪುಗಳನ್ನು ಚದುರಿಸಲು ಭದ್ರತಾ ಪಡೆಗಳು ಅಶ್ರುವಾಯು ಶೆಲ್ ಹಾಗೂ ಅಣಕು ಬಾಂಬ್‌ಗಳನ್ನು ಹಲವು ಸುತ್ತುಗಳಲ್ಲಿ ಸಿಡಿಸಿದ್ದಾರೆ. ಬುಧವಾರ ನಡೆದ ಸಂಘರ್ಷದಲ್ಲಿ ಒಂಬತ್ತು ಮಂದಿ ನಾಗರಿಕರು ಮೃತಪಟ್ಟಿದ್ದರು. ಈ ಕಾರಣದಿಂದಾಗಿ ಮಣಿಪುರದಲ್ಲಿ ಘರ್ಷಣೆಗಳು ತೀವ್ರಗೊಂಡಿವೆ.

ಶುಕ್ರವಾರ ಸಂಜೆ ವೇಳೆಗೆ ಉದ್ರಿಕ್ತ ಗುಂಪೊಂದು ಗೋದಾಮಿಗೆ ಬೆಂಕಿ ಹಚ್ಚಿದೆ. ಈ ಘಟನೆ ಬಳಿಕ ಕ್ಷಿಪ್ರ ಕಾರ್ಯ ಪಡೆ ಮತ್ತು ಉದ್ರಿಕ್ತ ಗುಂಪಿನ ಮಧ್ಯೆ ಸಂಘರ್ಷ ಹೆಚ್ಚಾಗಿದೆ.



ವಿದೇಶಾಂಗ ವ್ಯವಹಾರಗಳ ರಾಜ್ಯ ಖಾತೆ ಸಚಿವ ಆರ್‌.ಕೆ. ರಂಜನ್ ಸಿಂಗ್ ಮನೆಗೆ ಉದ್ರಿಕ್ತ ಗುಂಪೊಂದು ಬೆಂಕಿ ಹಚ್ಚಿದ್ದು, ಸಿಬ್ಬಂದಿ ಬೆಂಕಿ ನಂದಿಸಿದರು —ಪಿಟಿಐ ಚಿತ್ರ

> **ಕೇಂದ್ರದ ಸಚಿವರೊಬ್ಬರು ರಾಜ್ಯದ ಸ್ಥಿತಿ ಬಗ್ಗೆ ದುಃಖಿಸುತ್ತಿದ್ದರೆ, ಪ್ರಧಾನಮಂತ್ರಿ ಮೌನವಾಗಿದ್ದಾರೆ. ತಮ್ಮ ಅಮೆರಿಕ ಭೇಟಿಗೆ ತಯಾರಿ ನಡೆಸುತ್ತಿದ್ದಾರೆ**
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> **ಮಣಿಪುರದಲ್ಲಿ 'ಡಬಲ್ ಎಂಜಿನ್' ಸೋತಿದೆ. ಇಂಧನ ಖಾಲಿಯಾದ ರಾಜ್ಯದ ಎಂಜಿನ್ ಅನ್ನು ಅಲ್ಲೆ ಬಿಟ್ಟು, ಕೇಂದ್ರದ ಎಂಜಿನ್ ಓಡಿ ಹೋಗಿ ಅಡಗಿ ಕುಳಿತಿದೆ**
> **ಪಿ.ಚಿದಂಬರಂ,** ಕಾಂಗ್ರೆಸ್ ನಾಯಕ

- ಮಣಿಪುರದಲ್ಲಿ ಏನು ನಡೆಯುತ್ತಿದೆ ಎಂದುದನ್ನು ತಿಳಿಯಲು ಗೃಹ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯ ಸಭೆ ಕರೆಯಿರಿ ಎಂದು ತೃಣ ಮೂಲ ಕಾಂಗ್ರೆಸ್ ರಾಜ್ಯಸಭೆ ಸದಸ್ಯ ಡೆರಿಕ್ ಒಬ್ರಿಯಾನ್ ಆಗ್ರಹಿಸಿದ್ದಾರೆ.
- ಮೇಲ್ವಿಚಾರಣೆಗೆ ನ್ಯಾಯಮಂಡಳಿಯೊಂದನ್ನು ಸ್ಥಾಪಿಸಲು ಹಲವು ಸಂಘಟನೆಗಳು ಪ್ರಧಾನಿಯನ್ನು ಆಗ್ರಹಿಸಿವೆ
- ಸಂಘರ್ಷ ನಡೆದ ಪ್ರದೇಶದಲ್ಲಿ ಭದ್ರತಾ ಪಡೆಗಳನ್ನು ಹೆಚ್ಚು ಹೆಚ್ಚು ನಿಯೋಜಿಸುವ ಮೂಲಕ ಕೇಂದ್ರ ಗೃಹ ಸಚಿವಾಲಯವು ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಕಾರ್ಯಪ್ರವೃತ್ತವಾಗಿದೆ

'ಬೌದ್ಧಿಕ ಅಹಂಕಾರದ ಪ್ರತೀಕ'

ಪಠ್ಯಪುಸ್ತಕದಿಂದ ಹೆಸರು ಕೈಬಿಡುವ ಬೇಡಿಕೆ: ತಿರುಗೇಟು

ನವದೆಹಲಿ (ಪಿಟಿಐ): ಪಠ್ಯಪುಸ್ತಕಗಳಿಂದ ಹೆಸರು ಕೈಬಿಡುವ ಕುರಿತು 'ಪ್ರತಿಷ್ಠೆ ಮತ್ತು ಸ್ವಹಿತಾ ಸಕ್ತಿಯ' ಕೆಲವರ 'ನಗೆಪಾಟಲಿನ ವರ್ತನೆ' ಪಠ್ಯಪರಿಷ್ಕರಣೆ ಪ್ರಕ್ರಿಯೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ' ಎಂದು 73 ಶಿಕ್ಷಣತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರೀಯ ವಿಶ್ವವಿದ್ಯಾಲಯಗಳ ಕುಲಪತಿಗಳಲ್ಲದೆ, ಎನ್‌ಐಟಿ ನಿರ್ದೇಶಕರು, ಐಐಎಂ ಅಧ್ಯಕ್ಷರು ಸೇರಿದಂತೆ 73 ಶಿಕ್ಷಣ ತಜ್ಞರು ಈ ಬಗ್ಗೆ ಜಂಟಿ ಹೇಳಿಕೆ ನೀಡಿದ್ದಾರೆ. ಈ ಮೂಲಕ ಪಠ್ಯಪುಸ್ತಕದಿಂದ ಹೆಸರು ಕೈಬಿಡಲು ಒತ್ತಾಯಿಸಿದ್ದ 33 ಶಿಕ್ಷಣತಜ್ಞರಿಗೆ ತಿರುಗೇಟು ನೀಡಿದ್ದಾರೆ.

'ಎನ್‌ಸಿಇಆರ್‌ಟಿಗೆ ಕಳಂಕ ತರುವ ಯತ್ನ ಉದ್ದೇಶ ಪೂರ್ವಕವಾಗಿಯೇ ನಡೆದಿದೆ. ವಿದ್ಯಾರ್ಥಿಗಳು 17 ವರ್ಷ ಹಳೆಯದಾದ ಪಠ್ಯಪುಸ್ತಕಗಳನ್ನೇ ಓದಬೇಕು ಎಂಬ ಶಿಕ್ಷಣತಜ್ಞರ ಬೌದ್ಧಿಕ ಅಹಂಕಾರವನ್ನು ಇದು ಬಿಂಬಿಸಲಿದೆ' ಎಂದೂ ಹೇಳಿದ್ದಾರೆ.

ಬೆಂಗಳೂರು ವಿ.ವಿ, ಜವಹರಲಾಲ್ ನೆಹರೂ ವಿ.ವಿ, ತೇಜ್‌ಪುರ್ ವಿ.ವಿ, ಮಹಾತ್ಮಗಾಂಧಿ ಕೇಂದ್ರೀಯ ವಿ.ವಿ, ಇಂಗ್ಲಿಷ್ ಮತ್ತು ವಿದೇಶಿ ಭಾಷೆಗಳ ವಿ.ವಿ, ಜಾರ್ಖಂಡ್ ಕೇಂದ್ರೀಯ ವಿ.ವಿ, ರಾಂಚಿ ವಿ.ವಿ, ಇಂದಿರಾಗಾಂಧಿ ರಾಷ್ಟ್ರೀಯ ಬುಡಕಟ್ಟು ವಿಶ್ವವಿದ್ಯಾಲಯ, ಜಲಂಧರ್ ಎನ್‌ಐಟಿಯ ನಿರ್ದೇಶಕರು, ಐಐಎಂ ಕಾಶಿಪುರ್‌ನ ಆಡಳಿತ ಮಂಡಳಿ ಅಧ್ಯಕ್ಷ, ಐಸಿಎಸ್‌ಎಸ್‌ಆರ್ ಕಾರ್ಯದರ್ಶಿ, ಎನ್‌ಐಒಎಸ್ ಅಧ್ಯಕ್ಷರು ಜಂಟಿ ಹೇಳಿಕೆಗೆ ಸಹಿ ಹಾಕಿರುವ ಪ್ರಮುಖರಲ್ಲಿ ಸೇರಿದ್ದಾರೆ.

'ಎನ್‌ಸಿಇಆರ್‌ಟಿಗೆ ಕಳಂಕ ತರುವ ಹಾಗೂ ಈ ಮೂಲಕ ಪಠ್ಯ ಪರಿಷ್ಕರಣೆಯ ಪ್ರಕ್ರಿಯೆಗೆ ತೊಡಕುಂಟು ಮಾಡುವ ಯತ್ನ ನಡೆದಿದೆ. ಈ ಮೂಲಕ ಅವರು ಮಾಧ್ಯಮಗಳ ಗಮನಸೆಳೆಯಲು ಯತ್ನಿಸುತ್ತಿದ್ದಾರೆ. ಆದರೆ, ಪಠ್ಯಪುಸ್ತಕ ಪರಿಷ್ಕರಣೆಯು ಸಂಘಟಿತ ಮತ್ತು ಕಠಿಣ ಶ್ರಮದ ಫಲ ಎಂಬುದನ್ನು ಅವರು ಇದೇ ಸಂದರ್ಭದಲ್ಲಿ ಮರೆತಿದ್ದಾರೆ' ಎಂದು ಟೀಕಿಸಿದ್ದಾರೆ.

'ಪಠ್ಯಕ್ರಮವನ್ನು ಯಾರು ನಿರ್ಧರಿಸಬೇಕು, ಯಾವುದು ಸ್ವೀಕಾರಾರ್ಹ, ಯಾವುದು ಅಗತ್ಯ ಎಂಬ ವಾದಗಳು ಕೇಳಿ ಬರುತ್ತಿವೆ. ಆದರೆ, ಪ್ರತಿ ಹೊಸ ಪೀಳಿಗೆಗೂ ಲಭ್ಯ/ಪ್ರಸ್ತುತ ಜ್ಞಾನದ ಅರಿವು ಆಧರಿಸಿ ಪಠ್ಯ ಸೇರ್ಪಡೆಗೊಳಿಸುವ ಅಥವಾ ಕೈಬಿಡುವ ಹಕ್ಕಿದೆ' ಎಂದು ಪ್ರತಿಪಾದಿಸಿದ್ದಾರೆ.

ಒಟ್ಟಾರೆ, 'ತಪ್ಪುಮಾಹಿತಿ, ವದಂತಿ ಹಾಗೂ ಆಧಾರರಹಿತ ಆರೋಪಗಳ ಮೂಲಕ ಈ ಶಿಕ್ಷಣತಜ್ಞರು ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿಗೊಳಿಸುವ ಪ್ರಕ್ರಿಯೆಯ ಹಳಿತಪ್ಪಿಸಲು ಬಯಸಿದ್ದಾರೆ' ಎಂದೂ ತರಾಟೆಗೆ ತೆಗೆದುಕೊಂಡಿದ್ದಾರೆ.

ಎನ್‌ಸಿಇಆರ್‌ಟಿಗೆ ಯುಜಿಸಿ ಬೆಂಬಲ

ನವದೆಹಲಿ: ಪಠ್ಯಪುಸ್ತಕ ಪರಿಷ್ಕರಣೆ ಗೊಳಿಸಿರುವ ಎನ್‌ಸಿಇಆರ್‌ಟಿ ಕ್ರಮವನ್ನು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಜಗದೀಶ್ ಕುಮಾರ್ ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. 'ವಿವಿಧ ಶಿಕ್ಷಣ ತಜ್ಞರ ಆಕ್ಷೇಪಗಳಿಗೆ ಯಾವುದೇ ಮಹತ್ವವಿಲ್ಲ' ಎಂದು ಹೇಳಿದ್ದಾರೆ.

ಪಠ್ಯಪುಸ್ತಕ ರಚನಾ ಸಮಿತಿಗಳ ಸದಸ್ಯರಾಗಿದ್ದ 33ಕ್ಕೂ ಅಧಿಕ ಶಿಕ್ಷಣ ತಜ್ಞರು, ಪಠ್ಯ ಪರಿಷ್ಕರಣೆಯ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿ ಸಿದ್ದು, ಸಮಿತಿಯಿಂದ ತಮ್ಮ ಹೆಸರು ಕೈಬಿಡುವಂತೆ ಒತ್ತಾಯಿಸಿದ್ದರು. ಈ ಬೆಳವಣಿಗೆಯನ್ನು ಜಗದೀಶ್ ಕುಮಾರ್ ಖಂಡಿಸಿದ್ದಾರೆ.

'ಕಾಲಕಾಲಕ್ಕೆ ಎನ್‌ಸಿಇಆರ್‌ಟಿ ಪಠ್ಯ ಪರಿಷ್ಕರಿಸುತ್ತಿದೆ. ಈಗಿನ ಆಕ್ಷೇಪಕ್ಕೆ ಶೈಕ್ಷಣಿಕ ಕಾರಣವನ್ನು ಹೊರತುಪಡಿಸಿ ಬೇರೇ ಏನೋ ಇರಬಹುದು' ಎಂದಿದ್ದಾರೆ.

ಎನ್‌ಸಿಇಆರ್‌ಟಿ ಕ್ರಮ ಸಂಪೂರ್ಣ ಸಮರ್ಥನೀಯ. ಸಲಹೆ, ಪ್ರತಿಕ್ರಿಯೆ ಆಧರಿಸಿಯೇ ಪರಿಷ್ಕರಣೆ ನಡೆಯಲಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

'ಕೈಬಿಟ್ಟ ಸಾವರ್ಕರ್ ಪಠ್ಯ; ಉದ್ಧವ್ ನಿಲುವೇನು?'

ಮುಂಬೈ (ಪಿಟಿಐ): 'ಕರ್ನಾಟಕದಲ್ಲಿ ಶಾಲಾ ಪಠ್ಯದಿಂದ ಹಿಂದುತ್ವ ಸಿದ್ಧಾಂತ ಪ್ರತಿಪಾದಕ ವಿ.ಡಿ. ಸಾವರ್ಕರ್ ಹಾಗೂ ಆರ್‌ಎಸ್‌ಎಸ್ ಸ್ಥಾಪಕ ಹೆಡಗೇವಾರ್ ಅವರ ಪಠ್ಯವನ್ನು ಕೈಬಿಟ್ಟಿರುವ ಕಾಂಗ್ರೆಸ್ ಸರ್ಕಾರದ ಕ್ರಮದ ಬಗ್ಗೆ ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರ ನಿಲುವೇನು' ಎಂದು ಬಿಜೆಪಿ ನಾಯಕರು ಶುಕ್ರವಾರ ಪ್ರಶ್ನಿಸಿದ್ದಾರೆ.

6ರಿಂದ 10ನೇ ತರಗತಿವರೆಗಿನ ಕನ್ನಡ ಹಾಗೂ ಸಮಾಜ ವಿಜ್ಞಾನ ಪಠ್ಯದಿಂದ ಸಾವರ್ಕರ್ ಹಾಗೂ ಹೆಡಗೇವಾರ್ ಅವರ ಪಠ್ಯವನ್ನು ಕೈಬಿಟ್ಟು, ಸಾವಿತ್ರಿ ಬಾಯಿ ಫುಲೆ, ಇಂದಿರಾ ಗಾಂಧಿ ಅವರಿಗೆ ನೆಹರೂ ಅವರು ಬರೆದ ಪತ್ರ ಹಾಗೂ ಅಂಬೇಡ್ಕರ್ ಅವರ ಕವಿತೆಗಳನ್ನು ಸೇರಿಸಲು ಕರ್ನಾಟಕದ ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಮಹಾರಾಷ್ಟ್ರ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದ್ದು, ಇದು ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಎಂದಿದೆ.

ಪವಾರ್ ಬೆಂಬಲ: ಹೆಡಗೇವಾರ್ ಹಾಗೂ ಸಾವರ್ಕರ್ ಅವರನ್ನು ಕುರಿತ ಪಾಠಗಳನ್ನು ಶಾಲಾ ಪಠ್ಯಗಳಿಂದ ಕೈಬಿಟ್ಟಿರುವ ಕರ್ನಾಟಕ ಸರ್ಕಾರದ ಕ್ರಮಕ್ಕೆ ಎನ್‌ಸಿಪಿ ವರಿಷ್ಠ ಶರದ್ ಪವಾರ್ ಬೆಂಬಲ ವ್ಯಕ್ತಪಡಿಸಿದ್ದಾರೆ.

'ರಾಜ್ಯದಲ್ಲಿರುವ ಸೌಹಾರ್ದಕ್ಕೆ ಧಕ್ಕೆ ಉಂಟು ಮಾಡಬಾರದು' ಎಂದೂ ಅವರು ಪ್ರತಿಪಾದಿಸಿದ್ದಾರೆ.

ಐಪಿಎಸ್ ಅಧಿಕಾರಿಗೆ 3 ವರ್ಷ ಜೈಲು ಶಿಕ್ಷೆ

ವಿಲ್ಲುಪುರ (ತಮಿಳುನಾಡು, ಪಿಟಿಐ): ಸಹೋದ್ಯೋಗಿಗೆ ಲೈಂಗಿಕ ಕಿರುಕುಳ ನೀಡಿದ್ದ ಪ್ರಕರಣದಲ್ಲಿ ಅಮಾನತುಗೊಂಡಿದ್ದ ಹಿರಿಯ ಐಪಿಎಸ್ ಅಧಿಕಾರಿ ರಾಜೇಶ್ ದಾಸ್‌ಗೆ, ಶುಕ್ರವಾರ ಇಲ್ಲಿನ ಪ್ರಧಾನ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮೂರು ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಮಂಜೂರು ಮಾಡಿರುವ ನ್ಯಾಯಾಲಯ, ಮೇಲ್ಮನವಿ ಸಲ್ಲಿಸಲು 30 ದಿನ ಅವಕಾಶ ನೀಡಿದೆ.

ರಾಜೇಶ್ ದಾಸ್ 2021ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ವಿಶೇಷ ಡಿಜಿಪಿ ಆಗಿದ್ದಾಗ, ಪೊಲೀಸ್ ವರಿಷ್ಠಾಧಿಕಾರಿ ಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದ ದೂರು ದಾಖಲಾಗಿತ್ತು.

ಆರೋಪ ಕೇಳಿ ಬಂದ ತಕ್ಷಣವೇ ತಮಿಳುನಾಡು ಸರ್ಕಾರ ದಾಸ್‌ಗೆ ಹಿಂಬಡ್ತಿ ನೀಡಿ, ನಂತರ ಅಮಾನತುಗೊಳಿಸಿತ್ತು.


ಪತ್ರಕರ್ತ ನದೀಮ್ ಹತ್ಯೆ: ತನಿಖೆಗೆ ಆಗ್ರಹ

ಜಿನೀವಾ: ಬಾಂಗ್ಲಾದೇಶದ ಪತ್ರಕರ್ತ ಗುಲಾಮ್ ರಬ್ಬಾನಿ ನದೀಮ್ (45) ಅವರ ಹತ್ಯೆಯನ್ನು 'ಪ್ರೆಸ್ ಎಂಬ್ಲೆಮ್ ಕ್ಯಾಂಪೇನ್' (ಪಿಇಸಿ) ಖಂಡಿಸಿದೆ. ಈ ಪ್ರಕರಣ ಕುರಿತು ನ್ಯಾಯಯುತ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು ಎಂದು ಸಂಘಟನೆಯು ಬಾಂಗ್ಲಾದೇಶ ಸರ್ಕಾರವನ್ನು ಒತ್ತಾಯಿಸಿದೆ.

'ಪಿಇಸಿ' ಜಾಗತಿಕ ಸಂಘಟನೆಯಾಗಿದ್ದು, ಮಾಧ್ಯಮ ಕ್ಷೇತ್ರದ ಸುರಕ್ಷತೆ ಹಾಗೂ ಹಕ್ಕುಗಳ ರಕ್ಷಣೆಗಾಗಿ ಶ್ರಮಿಸುತ್ತದೆ.

ನದೀಮ್ ಅವರು ಢಾಕಾ ಮೂಲದ 'ಬಾಂಗ್ಲಾನ್ಯೂಸ್24.ಕಾಮ್' ಪೋರ್ಟಲ್ ಹಾಗೂ 'ಏಕತ್ತರ್ ಟಿವಿ' ವಾಹಿನಿ ವರದಿಗಾರರಾಗಿದ್ದರು.

'ಆಡಳಿತಾರೂಢ ಅವಾಮಿ ಲೀಗ್ ಪಕ್ಷದ ಮುಖಂಡರೊಬ್ಬರ ಬೆಂಬಲಿಗರು ಜೂನ್ 14ರಂದು ನದೀಮ್ ಮೇಲೆ ಹಲ್ಲೆ ನಡೆಸಿದ್ದರು. ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಜೂನ್ 15ರಂದು ಮೃತಪಟ್ಟರು' ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.



ಸುಭಾಷಿತ

ಮತ್ತೊಬ್ಬರ ಸಹಾಯವು ನಿಮ್ಮಲ್ಲಿ ಪರಿವರ್ತನೆ ತರಲು ಸಾಧ್ಯವೇ? ಹಾಗೊಂದು ವೇಳೆ ಸಾಧ್ಯವಾಗಿದೆ ಎಂದಾದರೆ, ನೀವು ನಿಜವಾಗಿ ಪರಿವರ್ತಿತರಾಗಿಲ್ಲ, ಬದಲಿಗೆ, ಕೇವಲ ಅವರ ಅಧೀನಕ್ಕೆ, ಪ್ರಭಾವಕ್ಕೆ ಒಳಗಾಗಿದ್ದೀರಿ ಎಂದರ್ಥ.

– ಜಿಡ್ಡು ಕೃಷ್ಣಮೂರ್ತಿ

ಅಕ್ರಮ: ಸಮಗ್ರ ತನಿಖೆ ನಡೆಯಲಿ ಕಠಿಣ ಸಂದೇಶ ರವಾನೆಯಾಗಲಿ

ಭ್ರಷ್ಟಾಚಾರಕ್ಕೆ ನೇರವಾದ ಆರೋಪದ ಅಡಿ ಒಂಬತ್ತು ಅಧಿಕಾರಿಗಳನ್ನು ಈ ಹದಿನೈದು ದಿನಗಳ ಅವಧಿಯಲ್ಲಿ ರಾಜ್ಯ ಸರ್ಕಾರ ಅಮಾನತುಗೊಳಿಸಿದೆ. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಂದಾಗಿ ಅಧಿಕಾರಿಗಳು ಈಗ ಆರೋಪಿ ಸ್ಥಾನದಲ್ಲಿ ನಿಂತಿದ್ದಾರೆ. ಬೆಂಗಳೂರಿನ ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಮಗಾರಿ ನಡೆಸದೇ, ಕಳಪೆ ಕಾಮಗಾರಿಗಳನ್ನು ಪರಿಶೀಲಿಸದೇ ಬಿಲ್ ಪಾವತಿಸಿ ಅಕ್ರಮ ಎಸಗಲಾಗಿದೆ ಎಂದು ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ದೂರನ್ನು ಆಧರಿಸಿ ಈ ಕ್ಷೇತ್ರದಲ್ಲಿ ಪರಿಶೀಲಿಸಲಾದ ಕಾಮಗಾರಿಗಳಲ್ಲಿ ಈ ಆರೋಪಗಳು ಮೇಲ್ನೋಟಕ್ಕೆ ದೃಢಪಟ್ಟಿದ್ದು, ಇದರಿಂದಾಗಿ ಬೊಕ್ಕಸಕ್ಕೆ ₹ 118 ಕೋಟಿ ನಷ್ಟವಾಗಿದೆ ಎಂದು ಲೋಕಾಯುಕ್ತರ ವರದಿ ಹೇಳಿತ್ತು. ಉನ್ನತ ಮಟ್ಟದ ತನಿಖೆಗೂ ಶಿಫಾರಸು ಮಾಡಿತ್ತು. ಈ ತನಿಖೆಯ ಸಂದರ್ಭದಲ್ಲಿ ದಾಖಲೆಗಳನ್ನು ತಿದ್ದುವ, ಸಾಕ್ಷ್ಯಾಧಾರಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುವ ಕಾರಣ, ಬಿಬಿಎಂಪಿ ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ದೊಡ್ಡಯ್ಯ ಸೇರಿ ಎಂಟು ಮಂದಿ ಎಂಜಿನಿಯರುಗಳನ್ನು ಅಮಾನತು ಮಾಡುವಂತೆ ಲೋಕಾಯುಕ್ತರು ಶಿಫಾರಸು ಮಾಡಿದ್ದರು. ಇದನ್ನು ಆಧರಿಸಿ ಈ ಅಧಿಕಾರಿಗಳನ್ನು ನಗರಾಭಿವೃದ್ಧಿ ಇಲಾಖೆ ಅಮಾನತು ಮಾಡಿರುವುದು ಸೂಕ್ತ ನಡೆ.



ಅಕ್ರಮ ಆರೋಪಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಸಮಗ್ರ ತನಿಖೆಗೆ ಒಳಪಡಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು

ಕೆಲವು ದಿನಗಳ ಹಿಂದೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮುದ್ದಯ್ಯ ಅವರನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಜವಳಿ) ಅಮಾನತು ಮಾಡಿದೆ. ಸರ್ಕಾರಿ ಶಾಲೆಯ ಮಕ್ಕಳಿಗೆ ಕಳಪೆ ಗುಣಮಟ್ಟದ ಸಮವಸ್ತ್ರ ಪೂರೈಕೆ ಮತ್ತು ನಿಗಮದ ಜಾಗವನ್ನು ಬಾಡಿಗೆಗೆ ನೀಡುವಾಗ, ಟೆಂಡರ್ ಕರೆಯದೆ 22 ವರ್ಷಗಳ ಸುದೀರ್ಘ ಅವಧಿಗೆ ಟೆಂಡರ್ ಪ್ರಕ್ರಿಯೆ ಮುಗಿಸಿದ್ದಾರೆ ಎಂಬುದು ಅವರ ಮೇಲಿರುವ ಪ್ರಮುಖ ಆರೋಪ. ಅವ್ಯವಹಾರ ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ ಮುದ್ದಯ್ಯ ಅವರನ್ನು ಅಮಾನತು ಮಾಡಲಾಗಿದೆ. ಒಂದರಿಂದ 10ನೇ ತರಗತಿವರೆಗಿನ ಗಂಡುಮಕ್ಕಳಿಗೆ ಮತ್ತು ಒಂದರಿಂದ ಏಳನೇ ತರಗತಿ ವರೆಗಿನ ಹೆಣ್ಣುಮಕ್ಕಳಿಗೆ ಸಮವಸ್ತ್ರ, ಎಂಟರಿಂದ 10ನೇ ತರಗತಿವರೆಗಿನ ಹೆಣ್ಣುಮಕ್ಕಳಿಗೆ ಚೂಡಿದಾರ್ ಸೇರಿ ಎರಡು ಜೊತೆ ಸಮವಸ್ತ್ರ ಖರೀದಿಗೆ ಶಿಕ್ಷಣ ಇಲಾಖೆಯು ₹ 1.34 ಕೋಟಿ ಮೊತ್ತದ ಕಾರ್ಯಾದೇಶವನ್ನು ನಿಗಮಕ್ಕೆ ನೀಡಿತ್ತು. ನಿಗಮದಲ್ಲಿ ನೋಂದಾಯಿಸಿಕೊಂಡಿರುವ ಕೈಮಗ್ಗ ನೇಕಾರರಿಂದ ಬಟ್ಟೆ ಖರೀದಿಸುವ ಬದಲು ಹೊರಗಡೆಯಿಂದ ಖರೀದಿಸಲಾಗಿತ್ತು. ಬಟ್ಟೆ ಕಳಪೆ ಗುಣಮಟ್ಟದ್ದೆಂದು ಕೇಂದ್ರ ರೇಷ್ಮೆ ಮಂಡಳಿ ವರದಿ ನೀಡಿತ್ತು. ಈ ಎಲ್ಲವೂ ಹಿಂದಿನ ಸರ್ಕಾರದ ಅವಧಿಯಲ್ಲಿಯೇ ಆಗಿದ್ದವು. ಆದರೆ ಕ್ರಮ ಕೈಗೊಳ್ಳುವ ಕೆಲಸ ಆಗಿರಲಿಲ್ಲ. ಈಗ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಅಮಾನತು ಮಾಡಲಾಗಿದೆ. ಕಾಮಗಾರಿ ಟೆಂಡರ್ ಹಾಗೂ ಖರೀದಿ ಟೆಂಡರ್ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರವು ಬಹಳ ಹಿಂದಿನಿಂದಲೂ ಇದೆ. ಪಕ್ಷವೊಂದು ಹೊಸದಾಗಿ ಅಧಿಕಾರ ಹಿಡಿದಾಗ, ನಿಕಟಪೂರ್ವ ಸರ್ಕಾರದ ಅವಧಿಯಲ್ಲಿನ ಅಕ್ರಮದ ಆರೋಪಗಳ ಬಗ್ಗೆ ಕ್ರಮ, ತನಿಖೆ ಬಿರುಸು ಪಡೆಯುತ್ತದೆ. ಅದು ಆಗಬೇಕು ಕೂಡ. ಆದರೆ, ಅದು ಆರಂಭಶೂರತ್ವ ಆಗಬಾರದು. ಕೆಲವು ಅಧಿಕಾರಿಗಳನ್ನು ಅಮಾನತು ಮಾಡುವುದಕ್ಕಷ್ಟೇ ಸೀಮಿತವಾಗಬಾರದು.

ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಕಾಂಗ್ರೆಸ್ ಮುಖಂಡರು ಗಂಭೀರವಾದ ಆರೋಪಗಳನ್ನು ಮಾಡಿದ್ದರು. ಶೇ 40ರ ಕಮಿಷನ್ ಸರ್ಕಾರ ಎಂದು ದೂಷಿಸಿದ್ದರು. ರಾಜ್ಯದ ಜನ ಈಗ ಕಾಂಗ್ರೆಸ್‌ಗೆ ಅಧಿಕಾರ ನೀಡಿದ್ದಾರೆ. ಜನರ ವಿಶ್ವಾಸವನ್ನು ಉಳಿಸಿಕೊಳ್ಳುವ ಗುರುತರ ಹೊಣೆ ಈ ಸರ್ಕಾರದ ಮೇಲಿದೆ. ಭ್ರಷ್ಟಾಚಾರದ ಬಗ್ಗೆ ಜನರಿಗೆ ತೀವ್ರ ಅಸಹನೆ ಇದೆ. ಸರ್ಕಾರದ ಕೆಲಸಗಳಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ಕೊಡದೆ ಆಡಳಿತ ನಡೆಸಬೇಕು. ಕೆಲವು ಅಧಿಕಾರಿಗಳ ಮೇಲಷ್ಟೇ ಪ್ರಹಾರ ಮಾಡಿದರೆ ಸಮಸ್ಯೆ ಸಂಪೂರ್ಣವಾಗಿ ನಿವಾರಣೆ ಆಗುವುದಿಲ್ಲ. ಅಕ್ರಮ ಆರೋಪಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಸಮಗ್ರ ತನಿಖೆಗೆ ಒಳಪಡಿಸಬೇಕು. ಇವುಗಳ ಹಿಂದೆ ಕಾಣದ ಕೈಗಳ ಒತ್ತಡ, ಪ್ರಲೋಭನೆಗಳು ಇದ್ದರೆ ಅವು ಕೂಡ ಹೊರಗೆ ಬರಬೇಕು. ಅಕ್ರಮಕ್ಕೆ ಕಾರಣರಾದವರನ್ನು ಪತ್ತೆ ಮಾಡಿ, ಶಿಕ್ಷೆಗೆ ಗುರಿಪಡಿಸುವ ಕೆಲಸ ಆಗಬೇಕು. ಸಚಿವರು, ಶಾಸಕರಂಥ ಜನಪ್ರತಿನಿಧಿಗಳ ಪಾತ್ರವಿದ್ದರೆ ಅದು ಕೂಡ ಹೊರಗೆ ಬರಬೇಕು. ನಿಯಮಗಳನ್ನು ಗಾಳಿಗೆ ತೂರಿ, ಆಡಳಿತಾರೂಢ ರಾಜಕಾರಣಿಗಳ ತಾಳಕ್ಕೆ ತಕ್ಕಂತೆ ಕುಣಿದರೆ ಎಂತಹ ಅಪಾಯ ಕಾದಿರುತ್ತದೆ ಎಂಬ ಕಠಿಣ ಸಂದೇಶವನ್ನು ಈ ಮೂಲಕ ಅಧಿಕಾರಿಗಳ ವಲಯಕ್ಕೆ ರವಾನಿಸಿದರೆ ಅಕ್ರಮಗಳಿಗೆ ತಕ್ಕಮಟ್ಟಿಗಾದರೂ ಲಗಾಮು ಬೀಳಬಹುದು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಸೋಲಿನ ಸುತ್ತ...

ಸಂಧ್ಯಾಕಾಲದಲ್ಲಿ ರೋಹಿತ್ ನಾಯಕತ್ವ?



ವಿಶ್ಲೇಷಣೆ

ಗಿರೀಶ ದೊಡ್ಡಮನಿ

‘ನಾವು ಮೊದಲ ದಿನವೇ ಪಂದ್ಯ ಸೋತಾಗಿತ್ತು...’

–ಲಂಡನ್‌ನ ದಿ ಓವಲ್ ಕ್ರೀಡಾಂಗಣದಲ್ಲಿ ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ನಂತರ ಭಾರತ ಸೋತಾಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ರೋಜರ್ ಬಿನ್ನಿ ನೀಡಿದ್ದ ಪ್ರತಿಕ್ರಿಯೆ ಇದು.

ಈ ಪಂದ್ಯದ ಮೊದಲ ದಿನದಾಟದಲ್ಲಿ ಸ್ಟೀವನ್ ಸ್ಮಿತ್ ಮತ್ತು ಟ್ರಾವಿಸ್ ಹೆಡ್ ಅವರ ಅಮೋಘ ಜೊತೆಯಾಟದಿಂದಾಗಿ ಭಾರತ ಸೋತಿತು ಎಂಬುದು ಅವರ ಮಾತಿನ ಮರ್ಮವಾಗಿತ್ತು. ಆದರೆ, ಇದಕ್ಕೂ ಮುನ್ನ ಭಾರತ ತಂಡದ ನಾಯಕ ರೋಹಿತ್ ಶರ್ಮಾ ತೆಗೆದುಕೊಂಡ ಎರಡು ನಿರ್ಧಾರಗಳು ಸೋಲಿಗೆ ಕಾಣಿಕೆ ನೀಡಿದ್ದು ಸುಳ್ಳಲ್ಲ. ಮೊದಲನೆಯದ್ದು– ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದು. ಎರಡನೆಯದ್ದು– ಈ ಬಾರಿಯ ಡಬ್ಲ್ಯುಟಿಸಿಯಲ್ಲಿ ಭಾರತದ ಪರ ಅತಿ ಹೆಚ್ಚು ವಿಕೆಟ್ ಪಡೆದ ಅನುಭವಿ ಆಫ್‌ಸ್ಪಿನ್ ಆಲ್‌ರೌಂಡರ್ ಆರ್.ಅಶ್ವಿನ್ ಅವರನ್ನು ಹನ್ನೊಂದರ ಬಳಗದಿಂದ ಕೈಬಿಟ್ಟಿದ್ದು.

ಯಾವುದೇ ಟೆಸ್ಟ್ ಪಂದ್ಯದ ನಾಲ್ಕನೇ ಅಥವಾ ಕೊನೆಯ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ಮಾಡುವುದು ಕಷ್ಟ ಎಂಬ ಕಾರಣದಿಂದ, ಟಾಸ್ ಗೆದ್ದ ಬಹುತೇಕ ತಂಡಗಳು ಮೊದಲು ಆಯ್ಕೆ ಮಾಡಿಕೊಳ್ಳುವುದು ಬ್ಯಾಟಿಂಗ್. ದಿ ಓವಲ್ ಕ್ರೀಡಾಂಗಣದಲ್ಲಿ ಇದುವರೆಗೆ ಯಾವುದೇ ತಂಡವು 263 ರನ್‌ಗಳಿಗಿಂತ ಹೆಚ್ಚು ಮೊತ್ತವನ್ನು ನಾಲ್ಕನೇ ಇನಿಂಗ್ಸ್‌ನಲ್ಲಿ ಗಳಿಸಿಲ್ಲ. ಅಲ್ಲದೆ ಆಸ್ಟ್ರೇಲಿಯಾ-ದಂಥ ಪ್ರಬಲ ಎದುರಾಳಿ ತಂಡವನ್ನು ವಿದೇಶಿ ನೆಲದಲ್ಲಿ ಇನ್ನೂರು ರನ್‌ಗಳ ಮೊತ್ತಕ್ಕೆ ಕಟ್ಟಿಹಾಕುವಂಥ ಸಮರ್ಥ ವೇಗಿಗಳು ಭಾರತ ತಂಡದಲ್ಲಿ ಇರಲಿಲ್ಲ ಎನ್ನುವುದೂ ನಿಜ. ಆದರೂ ರೋಹಿತ್ ಎದುರಾಳಿಗಳಿಗೆ ಬ್ಯಾಟಿಂಗ್ ಅವಕಾಶ ಕೊಟ್ಟು ಹೊಡೆಸಿಕೊಂಡರು!

2021–23ರ ಅವಧಿಯ ಡಬ್ಲ್ಯುಟಿಸಿಯಲ್ಲಿ 13 ಪಂದ್ಯಗಳನ್ನು ಆಡಿ 61 ವಿಕೆಟ್ ಗಳಿಸಿದವರು ಅಶ್ವಿನ್. ಅಲ್ಲದೆ 23.22ರ ಸರಾಸರಿಯಲ್ಲಿ 444 ರನ್ (ಕಾಕತಾಳೀಯವೋ ಏನೋ ಭಾರತಕ್ಕೆ ಆಸ್ಟ್ರೇಲಿಯಾ ನೀಡಿದ ಗೆಲುವಿನ ಗುರಿಯೂ 444 ರನ್) ಗಳಿಸಿದವರು. ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಮತ್ತು ಅಶ್ವಿನ್ ಅವರ ಬೌಲಿಂಗ್ ಜೊತೆಯಾಟವು ಕೆಲವು ಪಂದ್ಯಗಳಲ್ಲಿ ಭಾರತವನ್ನು ಸೋಲಿನಿಂದ ಪಾರು ಮಾಡಿತ್ತು. ಎಲ್ಲಕ್ಕಿಂತ ಮಿಗಿಲಾಗಿ 92 ಟೆಸ್ಟ್‌ಗಳಲ್ಲಿ ಆಡಿರುವ ಅನುಭವಿ ಅಶ್ವಿನ್ ಚೆಸ್ ಆಟಗಾರನಂತೆ ಚಾಣಾಕ್ಷಮತಿಯೂ ಹೌದು. 2021ರಲ್ಲಿ ಸೌತಾಂಪ್ಟನ್‌ನಲ್ಲಿ ನಡೆದಿದ್ದ ಫೈನಲ್‌ನಲ್ಲಿ ಒಬ್ಬರೇ ಸ್ಪಿನ್ನರ್ ಅವಶ್ಯಕತೆ ಇದ್ದರೂ ಇಬ್ಬರನ್ನು ಆಡಿಸಲಾಗಿತ್ತು. ಆಗಲೂ ನ್ಯೂಜಿಲೆಂಡ್ ಎದುರು ಭಾರತವು ಸೋತಿತ್ತು. ಅದೇ ಭಯದಿಂದ ಇಲ್ಲಿ ಒಬ್ಬ ಸ್ಪಿನ್ನರ್ ಅವಕಾಶ ಪಡೆದರು. ಆದರೆ ಓವಲ್ ಪಿಚ್ ಹಿಂದಿನಿಂದಲೂ ಸ್ಪಿನ್ ಬೌಲಿಂಗ್‌ಗೆ ನೆರವು ನೀಡುವ ಗುಣ ಹೊಂದಿದೆ. ಅದಕ್ಕಾಗಿಯೇ ಪಂದ್ಯ ಆರಂಭವಾಗುವ ಎರಡು ದಿನಗಳ ಮೊದಲೇ ದಿಗ್ಗಜ ಸಚಿನ್ ತೆಂಡೂಲ್ಕರ್, ‘ಓವಲ್‌ನಲ್ಲಿ ಇಬ್ಬರು ಸ್ಪಿನ್ನರ್‌ಗಳನ್ನು ಆಡಿಸುವುದು ಲೇಸು’ ಎಂದಿದ್ದರು.

ಇನ್ನೊಂದೆಡೆ, ವಿದೇಶಿ ನೆಲದಲ್ಲಿ ಬಹಳಷ್ಟು ಯಶಸ್ವಿಯಾಗಿದ್ದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಮತ್ತು ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರ ಗೈರುಹಾಜರಿಯು ಆಸ್ಟ್ರೇಲಿಯಾ ತಂಡಕ್ಕೆ ನಿರಾಳ ಭಾವ ನೀಡಿದ್ದು ಸುಳ್ಳಲ್ಲ. ಅವರಿಗೆ ಹೆಚ್ಚು ಭಯ ಇದ್ದದ್ದು ವಿರಾಟ್ ಕೊಹ್ಲಿ ಮತ್ತು ಚೇತೇಶ್ವರ್ ಪೂಜಾರ ಅವರ ಬ್ಯಾಟಿಂಗ್ ಹಾಗೂ ಅಶ್ವಿನ್ ಅವರ ಬೌಲಿಂಗ್ ಬಗ್ಗೆಯಷ್ಟೇ. ಆದರೆ ಹಲವು ದಿನಗಳಿಂದ ಕೌಂಟಿ ಕ್ರಿಕೆಟ್‌ನಲ್ಲಿ ಆಡಿದ್ದ ಪೂಜಾರ ವಿಫಲರಾಗಿದ್ದು ತಂಡದ ಹಿನ್ನಡೆಗೆ ಕಾರಣವಾಯಿತು. ವಿರಾಟ್ ಎರಡನೇ ಇನಿಂಗ್ಸ್‌ನಲ್ಲಿ ಉತ್ತಮವಾಗಿ ಆಡಿದರು. ಆದರೆ ಅದು ಗೆಲುವಿಗೆ ಸಾಕಾಗಲಿಲ್ಲ. ಅಶ್ವಿನ್ ಆಡದಿರುವುದರಿಂದ ಪ್ಯಾಟ್ ಕಮಿನ್ಸ್ ಆತ್ಮವಿಶ್ವಾಸ ಇಮ್ಮಡಿಯಾಯಿತು. ಆದರೂ ‘ವಾಟರ್ ಬಾಯ್’ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಅಶ್ವಿನ್ ತಂಡಸ್ಫೂರ್ತಿ ಮೆರೆದರು.

ಹಾಗೆಂದು ಅಶ್ವಿನ್ ಆಡಿದ್ದರೆ ಭಾರತ ಜಯಿಸಿ ಬಿಡುತ್ತಿತ್ತೇ ಎಂದು ಪ್ರಶ್ನಿಸುವವರೂ ಇದ್ದಾರೆ. ಆದರೆ, ಅವರ ಹೋರಾಟದ ಮನೋಭಾವವು ಪಂದ್ಯಕ್ಕೆ ಬೇರೆಯದೇ ದಿಕ್ಕು ತೋರಿಸುವ ಸಾಧ್ಯತೆ ಇತ್ತು. ಅದರಲ್ಲೂ ಕ್ರಿಕೆಟ್‌ನಿಂದ ನಿವೃತ್ತರಾಗುವ ಯೋಚನೆಯಲ್ಲಿರುವ ಅಶ್ವಿನ್ ಬಹುಶಃ ವಿಶ್ವ ಟೆಸ್ಟ್ ಪ್ರಶಸ್ತಿ ಗೆಲುವಿಗಾಗಿ ಖಂಡಿತ ಛಲ ತೋರುವ ಸಾಧ್ಯತೆ ಇತ್ತು.

ಇದೆಲ್ಲದರಾಚೆ, ಐಪಿಎಲ್‌ನಿಂದಾಗಿ ಭಾರತ ತಂಡವು ಡಬ್ಲ್ಯುಟಿಸಿಯಲ್ಲಿ ಸೋತಿತು ಎಂಬ ವಾದವೂ ಇದೆ. ಸೋಲಿನಲ್ಲಿ ಐಪಿಎಲ್ ಪಾಲು ಇರುವುದನ್ನು ಸಂಪೂರ್ಣವಾಗಿ ಅಲ್ಲಗಳೆಯಲಾಗದು. ಆದರೆ ಅದೇ ಎಲ್ಲವೂ ಅಲ್ಲ. ಏಕೆಂದರೆ, ಐಪಿಎಲ್‌ನಲ್ಲಿ ಮಿಂಚಿದ್ದ ಅಜಿಂಕ್ಯ ರಹಾನೆ, ರವೀಂದ್ರ ಜಡೇಜ ಮತ್ತು ವಿರಾಟ್ ಕೊಹ್ಲಿ ಅವರು ಇಲ್ಲಿಯೂ ಚೆನ್ನಾಗಿ ಆಡಿದರು.

ಇಲ್ಲಿ ಮುಖ್ಯವಾಗಿ ರೋಹಿತ್ ಬ್ಯಾಟಿಂಗ್ ಫಾರ್ಮ್ ಕುರಿತ ಚರ್ಚೆಯೂ ಆಗಬೇಕಿದೆ. ಒಂದು ವರ್ಷದಿಂದ ರೋಹಿತ್ ತಮ್ಮ ನಾಯಕತ್ವ ಹಾಗೂ ಬ್ಯಾಟಿಂಗ್‌ನಲ್ಲಿ ಸತತವಾಗಿ ವೈಫಲ್ಯ ಅನುಭವಿಸುತ್ತಲೇ ಇದ್ದಾರೆ. ಜೊತೆಗೆ ಅವರ ಫಿಟ್‌ನೆಸ್ ಕೂಡ ಶ್ರೇಷ್ಠ ಮಟ್ಟದಲ್ಲಿ ಇಲ್ಲ. ಈ ಡಬ್ಲ್ಯುಟಿಸಿಯಲ್ಲಿ 11 ಪಂದ್ಯಗಳಿಂದ ಅವರು 42.11ರ ಸರಾಸರಿಯಲ್ಲಿ 758 ರನ್ ಗಳಿಸಿದ್ದಾರೆ. 2021ರಲ್ಲಿ ಇದೇ ಓವಲ್ ಕ್ರೀಡಾಂಗಣದಲ್ಲಿ ಅವರು ಗಳಿಸಿದ್ದ ಶತಕದಿಂದಾಗಿ ಭಾರತವು ಇಂಗ್ಲೆಂಡ್ ವಿರುದ್ಧ ಜಯಿಸಿತ್ತು. ಆಗಿನ್ನೂ ವಿರಾಟ್ ನಾಯಕರಾಗಿದ್ದರು. ಹೋದ ವರ್ಷ ಜನವರಿಯಲ್ಲಿ ದಕ್ಷಿಣ ಆಫ್ರಿಕಾ ಎದುರು ಸೋಲಿನ ನಂತರ ಟೆಸ್ಟ್ ನಾಯಕತ್ವ ಬಿಟ್ಟುಕೊಟ್ಟಿದ್ದರು. ಅಲ್ಲಿಂದ ಇಲ್ಲಿಯವರೆಗೆ ರೋಹಿತ್ ನಾಯಕತ್ವವು ‘ವಿರಾಟ್ ದರ್ಜೆ’ಗೆ ಏರಿಲ್ಲ ಎನ್ನುವುದನ್ನು ಅಲ್ಲಗಳೆಯಲಾಗದು.

ಟೆಸ್ಟ್ ಮಾತ್ರವಲ್ಲ, ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿಯೂ ಅವರ ಆಟ ರಂಗೇರಿರಲಿಲ್ಲ. ‘ಹಿಟ್‌ಮ್ಯಾನ್’ ಖ್ಯಾತಿಯ ರೋಹಿತ್ ಬ್ಯಾಟ್‌ನಿಂದ ಹೊಡೆತಗಳು ಹಿಂದಿನಂತೆ ಹೊರಹೊಮ್ಮುತ್ತಿಲ್ಲ. ಆದರೂ ಈ ಹಿಂದೆ ಕಪಿಲ್ ದೇವ್, ಸುನಿಲ್ ಗಾವಸ್ಕರ್, ಸೌರವ್ ಗಂಗೂಲಿ, ಅನಿಲ್ ಕುಂಬ್ಳೆ, ಮಹೇಂದ್ರ ಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ ನಾಯಕತ್ವದಲ್ಲಿ ತಂಡವು ವೈಫಲ್ಯ ಅನುಭವಿಸಿದಾಗ ನಡೆಯುತ್ತಿದ್ದ ಚರ್ಚೆಗಳು ಈಗ ಇಲ್ಲ. ಕೇವಲ ಐವತ್ತು ಟೆಸ್ಟ್‌ಗಳಲ್ಲಿ ಆಡಿರುವ ರೋಹಿತ್ ಸೀಮಿತ ಓವರ್‌ಗಳ ಕ್ರಿಕೆಟ್‌ಗೇ ಫಿಟ್ ಎನ್ನುವ ಮಾತಿಗೆ ಈಗ ಹೆಚ್ಚು ಬಲ ಬರತೊಡಗಿದೆ. ಹೋದ ವರ್ಷದ ಟಿ20 ವಿಶ್ವಕಪ್‌ನಲ್ಲಿಯೂ ರೋಹಿತ್ ನಾಯಕತ್ವದಲ್ಲಿನ ಲೋಪಗಳು ಎದ್ದುಕಂಡಿದ್ದವು.

‘2011ರ ವಿಶ್ವಕಪ್ ವಿಜಯದ ಶ್ರೇಯ ನಾಯಕ ಧೋನಿಗಷ್ಟೇ ಸಲ್ಲಬೇಕೇ’ ಎಂದು ಪ್ರಶ್ನೆ ಮಾಡುವ ಮಾಜಿ ಆಟಗಾರರೂ ರೋಹಿತ್ ನಾಯಕತ್ವ ಸಾಮರ್ಥ್ಯವನ್ನು ಒರೆಗೆ ಹಚ್ಚುತ್ತಿಲ್ಲ. ಐಪಿಎಲ್‌ನಲ್ಲಿ ಐದು ಬಾರಿ ಪ್ರಶಸ್ತಿ ಗೆದ್ದ ಮುಂಬೈ ಇಂಡಿಯನ್ಸ್ ತಂಡದ ನಾಯಕನೆಂಬ ಕಾರಣವಷ್ಟೇ ಮಾನದಂಡವಾದರೆ ದೊಡ್ಡ ಗುರಿ ಸಾಧನೆ ಕೈಗೂಡುವುದು ಕಷ್ಟ. ಇದೇ ವರ್ಷ ಭಾರತವು ಏಕದಿನ ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸುತ್ತಿದೆ. ಹತ್ತು ವರ್ಷಗಳಿಂದ ಎದುರಿಸುತ್ತಿರುವ ಐಸಿಸಿ ಟ್ರೋಫಿ ಬರ ನೀಗಲು ಸಮರ್ಥ ನಾಯಕತ್ವ ಬೇಕಲ್ಲವೇ?

ಇದೆಲ್ಲದರ ಜೊತೆಗೆ ಈ ಫೈನಲ್ ಪಂದ್ಯದ ಇನ್ನೊಂದು ವಿಶೇಷವೆಂದರೆ, ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಇದೇ ಮೊದಲ ಬಾರಿಗೆ ತಟಸ್ಥ ತಾಣದಲ್ಲಿ ಟೆಸ್ಟ್ ಪಂದ್ಯದಲ್ಲಿ ಮುಖಾಮುಖಿಯಾದವು. ಸ್ಥಳೀಯ ತಂಡವು ಇಲ್ಲಿ ಆಡದಿದ್ದರೂ ಪಂದ್ಯದ ಐದು ದಿನಗಳಲ್ಲಿಯೂ ಕ್ರೀಡಾಂಗಣದ ಗ್ಯಾಲರಿಗಳು ಅಭಿಮಾನಿಗಳಿಂದ ತುಂಬಿ ತುಳುಕಿದ್ದವು. ಟೆಸ್ಟ್ ಕ್ರಿಕೆಟ್ ಮಾದರಿಗೆ ಅಳಿವು ಇಲ್ಲ ಎಂಬುದನ್ನು ಅವರೆಲ್ಲರೂ ತೋರಿಸಿದರು. ಆದರೆ, ಕ್ರಿಕೆಟ್ ಆಟವನ್ನು ಧರ್ಮದಂತೆ ಆರಾಧಿಸುವ ಭಾರತದಲ್ಲಿ ನಡೆಯುವ ಟೆಸ್ಟ್ ಪಂದ್ಯಗಳಲ್ಲಿ ಇಂತಹ ದೃಶ್ಯಗಳನ್ನು ಊಹಿಸಿಕೊಳ್ಳುವುದು ಕಷ್ಟ ಅಲ್ಲವೇ?



ಚುರುಮುರಿ



ಅಕ್ಕಿ ತಿಕ್ಕಾಟ

• ಮಣ್ಣೆರಾಜು

‘ನಮ್ಮ ಮನೆ ಒಗ್ಗರಣೆಗೆ ನೆರೆಮನೆಯ ಸಾಸಿವೆ ನಂಬಿಕೊಂಡಂತಾಗಿದೆ. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು, ಕೇಂದ್ರದ ಮುಂದೆ ಕೈ ಚಾಚಬಾರದು ಅಂತ ಸರ್ಕಾರಕ್ಕೆ ಈಗ ಅರ್ಥ ಆಗಿರಬಹುದು...’ ಎಂದಳು ಸುಮಿ.

‘ಕೈ ಚಾಚುವ ಪರಿಸ್ಥಿತಿ ಬರೊಲ್ಲ, ಸಹಾಯಹಸ್ತ ದೊರೆಯುತ್ತದೆ ಎಂಬ ನಂಬಿಕೆ ಮೇಲೆ, ಉಣ್ಣೋ ಭಾಗ್ಯಕ್ಕೆ ಹತ್ತು ಕೆ.ಜಿ ಅಕ್ಕಿ ಕೊಡ್ತೀವಿ ಅಂತ ಘೋಷಣೆ ಮಾಡಿದ್ದರು’ ಅಂದ ಶಂಕ್ರಿ.

‘ಕೇಂದ್ರದ ಐದು ಕೆ.ಜಿ ಜೊತೆಗೆ ನಾವು ಐದು ಸೇರಿಸಿ ಹತ್ತು ಕೆ.ಜಿ ಅಕ್ಕಿ ಕೊಡ್ತೀವಿ ಅಂತ ಎಲೆಕ್ಷನ್ ಭಾಷಣದಲ್ಲಿ ಬಿಡಿಸಿ ಹೇಳಿದ್ದರೆ ಕೇಂದ್ರ ಸಹಿಸಿಕೊಳ್ತಿತ್ತು, ಅಕ್ಕಿ ಬಿಕ್ಕಟ್ಟು ಎದುರಾಗುತ್ತಿರಲಿಲ್ಲ ಅಲ್ವೇನ್ರೀ?’

‘ಎಲೆಕ್ಷನ್ ಕ್ರೆಡಿಟ್ ಏನೇ ಇರಲಿ, ಕ್ರೆಡಿಟ್‌ನಲ್ಲಿ ಕೊಡಬೇಡಿ, ಕ್ಯಾಷ್ ಕೊಡ್ತೀವಿ ಅಕ್ಕಿ ಕೊಡಿ ಅಂದರೂ ಕೇಂದ್ರದವರು ಕೊಡ್ತಿಲ್ಲವಂತೆ’.

‘ಅಕ್ಕಿ ಕೊಡುವುದಿಲ್ಲ, ಕಷ್ಟಕಾಲಕ್ಕೆ ಬೇಕಾಗುತ್ತದೆ ಎಂದು ಇಟ್ಟುಕೊಂಡಿದ್ದೇವೆ ಅಂತ ಹೇಳ್ತಿದ್ದಾರಂತೆ’.

‘ಹತ್ತು ಕೆ.ಜಿ ಅಕ್ಕಿ ಕೊಡಲೇಬೇಕಾಗಿದೆ. ಹಾಗಂತ ಅರ್ಜೆಂಟಾಗಿ ಗದ್ದೆ ಉತ್ತು, ಭತ್ತ ಬೆಳೆದು ಅಕ್ಕಿ ಉತ್ಪಾದನೆ ಮಾಡಲಂತೂ ಸಾಧ್ಯವಿಲ್ಲ, ಕೇಂದ್ರ ಕೈ ಹಿಡಿಯದ ಕಾರಣ ಚೀಲ ಹಿಡಿದು ಪರ ರಾಜ್ಯಗಳಲ್ಲಿ ಅಕ್ಕಿ ಕೊಳ್ಳುವ ಸ್ಥಿತಿ ಎದುರಾಗಿದೆ’.

‘ಅಕ್ಕಿ ಕೊಡಲು ಸಾಧ್ಯವಾಗದಿದ್ದರೆ, ಅದರ ಬಾಬ್ತಿನ ದುಡ್ಡನ್ನು ಜನರ ಬ್ಯಾಂಕ್ ಅಕೌಂಟಿಗೆ ಜಮಾ ಮಾಡಿ ಎಂದು ವಿಪಕ್ಷದವರು ಪರ್ಯಾಯ ಫಜೀತಿ ಶುರುಮಾಡಿದ್ದಾರೆ’.

‘ಗಾಬರಿಪಡುವ ಅಗತ್ಯವಿಲ್ಲ. ಪಾರ್ಲಿಮೆಂಟ್ ಎಲೆಕ್ಷನ್‌ವರೆಗೂ ಅಕ್ಕಿ ತಿಕ್ಕಾಟ ಇರುತ್ತದೆ. ಚುನಾವಣೆ ಮುಗಿದ ಮೇಲೆ ಸರ್ಕಾರಿ ಆಡಳಿತದ ಪರಿಸ್ಥಿತಿ, ಮನಃಸ್ಥಿತಿ ಸಹಜಸ್ಥಿತಿಗೆ ಬಂದು ಸರಾಗ-ವಾಗುತ್ತದೆ...’ ಎಂದ ಶಂಕ್ರಿ.

ದಿನದ ಟ್ವೀಟ್

ಮಾತಿನ ಮೆಲುಕು



‘ನಾನು ದೇವರಿಲ್ಲ ಎಂದು ಬರೆದ ‘ದೇವರು’ ಕೃತಿಗೆ ಪಂಪ ಪ್ರಶಸ್ತಿ ಬಂತು. ದೇವರ ಅಸ್ತಿತ್ವವನ್ನು ನಿರೂಪಿಸುವ ಪು.ತಿ.ನ ಅವರ ‘ಶ್ರೀಹರಿಚರಿತೆ’ಗೆ ಕೂಡಾ ಪಂಪ ಪ್ರಶಸ್ತಿ ಬಂತು. ಒಟ್ಟಿನಲ್ಲಿ ದೇವರು ನಿಷ್ಪಕ್ಷಪಾತಿ’.

ಎ.ಎನ್.ಮೂರ್ತಿರಾಯರ ಜನ್ಮದಿನದ ಸಂದರ್ಭದಲ್ಲಿ ಅವರ ಈ ಮಾತಿನ ಮೆಲುಕು... ನಮನ...

ಆಶಾ ರಘು, ಲೇಖಕಿ

ಕಿಡಿನುಡಿ



ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದು, ಅಂತಹ ಸ್ಥಿತಿ ತಲೆದೋರಿದ ಒಂದು ತಿಂಗಳಾದ ಬಳಿಕ ಮತ್ತು ತಮ್ಮ ಮನೆಯೇ ಬೆಂಕಿಗೆ ಆಹುತಿಯಾದ ನಂತರ ಅವರ ಅರಿವಿಗೆ ಬಂತೇ?

(‘ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ’ ಎಂಬ ಕೇಂದ್ರ ಸಚಿವ ಆರ್‌.ಕೆ.ರಂಜನ್ ಸಿಂಗ್ ಅವರ ಹೇಳಿಕೆಗೆ ಪ್ರತಿಕ್ರಿಯೆ. ಮಣಿಪುರದಲ್ಲಿನ ಅವರ ಮನೆಗೆ ಗುಂಪೊಂದು ಬೆಂಕಿ ಹಚ್ಚಿದೆ.)

ತಾರಾ ಕೃಷ್ಣಸ್ವಾಮಿ, ಸಹಸಂಸ್ಥಾಪಕಿ, ‘ಪೊಲಿಟಿಕಲ್ ಶಕ್ತಿ’ ಆಂದೋಲನ

25 ವರ್ಷಗಳ ಹಿಂದೆ

ಬುಧವಾರ, 17-6-1998

• ಪಟೇಲ್ ಬದಲಾವಣೆಗೆ ಭಿನ್ನರ ಪಟ್ಟು; ನಿರಂತರ ಸಂಧಾನ ಯತ್ನ

ಬೆಂಗಳೂರು, ಜೂನ್ 16– ನಾಯಕತ್ವ ಬದಲಾವಣೆಗೆ ಒತ್ತಾಯಿಸುತ್ತಿರುವ ಭಿನ್ನಮತೀಯ ಸಚಿವರು ಹಾಗೂ ಶಾಸಕರು ತಮ್ಮ ಪಟ್ಟು ಸಡಿಲಿಸದೇ ಇರುವುದರಿಂದ ಆಡಳಿತಾರೂಢ ಜನತಾದಳದಲ್ಲಿ ಉಂಟಾಗಿರುವ ಬಿಕ್ಕಟ್ಟಿಗೆ ಇನ್ನೂ ಪರಿಹಾರ ಕಾಣದಿದ್ದರೂ ನಿರಂತರವಾಗಿ ಸಂಧಾನದ ಯತ್ನ ಮುಂದುವರಿದಿದೆ.

ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಮತ್ತು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾಳಯದಲ್ಲಿ ಬಿರುಸಿನ ರಾಜಕೀಯ ಚಟುವಟಿಕೆಗಳು ಕಂಡುಬಂದಿದ್ದು, ಅಗತ್ಯ ಬಿದ್ದಲ್ಲಿ ಶಕ್ತಿ ಪ್ರದರ್ಶನಕ್ಕೆ ಎರಡೂ ಬಣಗಳು ಸಿದ್ಧತೆ ನಡೆಸಿವೆ. ಜನತಾದಳದ ಶಾಸಕಾಂಗ ಪಕ್ಷದ ಸಭೆ ಕರೆಯಬೇಕೆಂದು ಒತ್ತಾಯಿಸುತ್ತಿರುವ ಭಿನ್ನಮತೀಯರು ಈ ಸಂಬಂಧ ಸಿದ್ಧಪಡಿಸಿ-ರುವ ಪತ್ರಕ್ಕೆ ಶಾಸಕರಿಂದ ಸಹಿ ಪಡೆಯುವ ಕಾರ್ಯವನ್ನು ಭರದಿಂದ ನಡೆಸಿದ್ದಾರೆ.

• 50 ಕೋಟಿ ರೂ. ಲಂಚ ಕೇಳಿದ ಸಂಯುಕ್ತರಂಗ ಸರ್ಕಾರದ ಗಣ್ಯರು

ಬೆಂಗಳೂರು, ಜೂನ್ 16– ಉದ್ದೇಶಿತ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಯೋಜನೆಯನ್ನು ಟಾಟಾ ಕಂಪನಿಗೆ ವಹಿಸಬೇಕಾದರೆ 50 ಕೋಟಿ ರೂಪಾಯಿಗಳ ಲಂಚ ನೀಡಬೇಕು ಎಂದು ಹಿಂದಿನ ಸರ್ಕಾರದ ಅವಧಿಯಲ್ಲಿ ಒತ್ತಾಯಿಸಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಅವರು ಸಂಯುಕ್ತ ರಂಗ ಸರ್ಕಾರದ ಹೆಸರನ್ನು ಪ್ರಸ್ತಾಪಿಸದೆಯೇ ಆರೋಪ ಮಾಡಿದರು.

ಈ ರೀತಿ ಲಂಚ ಕೇಳಿದ ವ್ಯಕ್ತಿ ಯಾರು ಎಂದು ವರದಿಗಾರರು ಮೇಲಿಂದ ಮೇಲೆ ಪ್ರಶ್ನಿಸಿದಾಗ ಅವರು ‘ನಾನು ಅದನ್ನು ಬಹಿ-ರಂಗಪಡಿಸುವುದಿಲ್ಲ’ ಎಂದರು.

‘ಟಾಟಾ ಕಂಪನಿಯವರು ಯಾವತ್ತೂ ಲಂಚ ನೀಡುವುದಿಲ್ಲ. ಪಾಪ, ಲಂಚ ಕೇಳಿದ ವ್ಯಕ್ತಿಗೆ ಇದು ಗೊತ್ತಿರಲಿಲ್ಲ ಎಂದು ಕಾಣುತ್ತದೆ’ ಎಂದು ಅವರು ವ್ಯಂಗ್ಯವಾಡಿದರು.

50 ವರ್ಷಗಳ ಹಿಂದೆ

ಭಾನುವಾರ, 17-6-1973

• ಬಚ್ಚಿಟ್ಟ ಧಾನ್ಯ ಹೊರಕ್ಕೆ ತೆಗೆಯಲು ರಾಜ್ಯದಾದ್ಯಂತ ಉಗ್ರ ಕ್ರಮ: ಅರಸು

ಬೆಂಗಳೂರು, ಜೂನ್ 16– ರಾಜ್ಯದಲ್ಲಿ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಧಾನ್ಯಗಳ ಅಕ್ರಮ ಸಂಗ್ರಹದ ವಿರುದ್ಧ ಸರ್ಕಾರ ತೀವ್ರ ಕ್ರಮ ಕೈಗೊಳ್ಳಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಮುಖ್ಯಮಂತ್ರಿ ಶ್ರೀ ಅರಸು ಅವರು ಆಹಾರ ಖಾತೆ ರಾಜ್ಯ ಸಚಿವೆ ಶ್ರೀಮತಿ ಈವಾವಾಜ್ ಹಾಗೂ ಅಧಿಕಾರಿಗಳನ್ನು ಕಳುಹಿಸಿಕೊಡಲಿದ್ದಾರೆ.

‘ಅಕ್ರಮ ಸಂಗ್ರಹಣೆ ವಿರುದ್ಧ ಕ್ರಮವನ್ನು ಹೆಚ್ಚಿಸಲಿದ್ದೇನೆ. ಕೇಂದ್ರ ಸರ್ಕಾರ ಹಾಗೂ ಎಲ್ಲರೂ ಈ ಬಗ್ಗೆ ತೀವ್ರತೆಯಿಂದಿದ್ದಾರೆ. ಇರುವ ಕಾನೂನನ್ನು ಉಪಯೋಗಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಗುವುದು’ ಎಂದು ಇಂದು ದೆಹಲಿಯಿಂದ ಹಿಂದಿರುಗಿದ ಮುಖ್ಯಮಂತ್ರಿಗಳು ವರದಿಗಾರರಿಗೆ ತಿಳಿಸಿದರು.

ಸಂಗತ

ಉತ್ತರಾಖಂಡದ ಉಕ್ಕಿನ ಮಹಿಳೆಯರು

ಕಬ್ಬಿಣದ ಪರಿಕರಗಳನ್ನು ತಯಾರಿಸುವ ಶ್ರಮದಾಯಕ ಕೆಲಸದಲ್ಲಿ ತೊಡಗಿಕೊಂಡಿರುವ ಇಲ್ಲಿನ ಮಹಿಳೆಯರು, ಈ ಕಾಯಕದಲ್ಲಿದ್ದ ಪುರುಷ ಪಾರಮ್ಯಕ್ಕೆ ಸಡ್ಡು ಹೊಡೆದಿದ್ದಾರೆ

• ಶ್ರೀಗುರು

ಅದೊಂದು ತೆರೆದ ಕುಲುಮೆ. ಕನಿಷ್ಠ ಒಂಬೈನೂರರಿಂದ ಸಾವಿರ ಡಿಗ್ರಿ ಸೆಂಟಿಗ್ರೇಡ್‌ಗಿಂತ ಹೆಚ್ಚಿನ ಶಾಖವಿರುವ ಜಾಗ. ಮೊದಲೆಲ್ಲ ಅಲ್ಲಿ ಪುರುಷರೇ ಕೆಲಸ ಮಾಡುತ್ತಿದ್ದರು. ಹಾರೆ, ಗುದ್ದಲಿ, ಕೊಡಲಿ, ಕುಡುಗೋಲು, ಬಾಂಡಲಿ, ಬಕೆಟ್ಟು, ಕೊಳಗಗಳನ್ನು ತಯಾರು ಮಾಡುತ್ತಿದ್ದ ಗಂಡಸರು ಭಾರದ ಲೋಹವನ್ನೆತ್ತಿ ಕುಟ್ಟುವುದು, ಸುರಿಯುವುದು, ಬಗ್ಗಿಸುವುದು, ಬೆಸೆಯುವುದು, ಹುಯ್ಯುವುದು, ಕತ್ತರಿಸುವುದನ್ನು ಅವ್ಯಾಹತವಾಗಿ ಮಾಡುತ್ತಿದ್ದರು. ಗಟ್ಟಿಮುಟ್ಟಾದವ-ರಿಂದ ಹೆಚ್ಚಿನ ಶ್ರಮ ಬೇಡುತ್ತಿದ್ದ ಕೆಲಸ ಅದಾಗಿತ್ತು.


ಈಗ ಚಿತ್ರಣ ಬದಲಾಗಿದೆ. ಉತ್ತರಾಖಂಡ ರಾಜ್ಯದ ಚಂಪಾವತ್ ಜಿಲ್ಲೆಯ ಲೋಹಘಾಟ್ ತೆಹಶೀಲ್‌ನ ಪೂರ್ಣಗಿರಿ ಗ್ರಾಮದ ಮಹಿಳೆಯರು ಕಬ್ಬಿಣದ ಉತ್ಪನ್ನ ತಯಾರಿಕೆ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಪುರುಷ ಪಾರಮ್ಯವೇ ತುಂಬಿದ ಜಾಗಗಳಲ್ಲೀಗ ಕೈಬಳೆ, ಕಾಲ್ಗೆಜ್ಜೆಯ ನಾದ ಕೇಳಿಸುತ್ತಿದೆ. ಜೊತೆಗೆ ಠಣ್, ಠಣ್, ಟಕ್, ಟಕ್, ಧಡ್, ಧಡ್ ಎಂದು ಸುತ್ತಿಗೆಯಿಂದ ಕುಟ್ಟುವ, ಬಗ್ಗಿಸುವ, ಮೀಟುವ ಸದ್ದು ಕೇಳಿಸುತ್ತಿದೆ. ಕೃಷಿ ಕೆಲಸಗಳಲ್ಲಿ ಬಳಸಲಾಗುವ ಎಲ್ಲ ಪರಿಕರಗಳನ್ನು ಮಹಿಳೆಯರೇ ತಯಾರಿಸುತ್ತಿದ್ದಾರೆ.

ಐದು ಸ್ವಸಹಾಯ ಗುಂಪುಗಳಿರುವ ಪ್ರಗತಿ ಗ್ರಾಮ ಸಂಘಟನ್ ಎಂಬ ಸಂಘದ ನೇತೃತ್ವ ವಹಿಸಿರುವ ನಾರಾಯಣಿ ದೇವಿ ‘ಕಳೆದ ಆರು ವರ್ಷಗಳಿಂದ ನಾವು ಕೆಲಸ ಮಾಡುತ್ತಿದ್ದೇವೆ, ಅಂಥ ಸುಸ್ತೇನೂ ಆಗುವುದಿಲ್ಲ’ ಎನ್ನುತ್ತಾರೆ. ಬಿಸಿ ಲೋಹದ ಕೆಲಸಗಳಿಗೆ ಗಂಡಸರು ಮಾತ್ರ ಸೂಕ್ತ ಎಂಬ ಪಾರಂಪರಿಕ ನಂಬಿಕೆಯನ್ನು ಮಹಿಳೆಯರು ಬದಲಾಯಿಸಿದ್ದಾರೆ. ಈ ಮೂಲಕ, ಮಹಿಳೆಯರು ಬಹುಕೌಶಲವುಳ್ಳವರು ಎಂಬುದನ್ನು ಸಾಬೀತು ಮಾಡುತ್ತಿದ್ದಾರೆ. ಸಾಮಾನ್ಯ ಮಹಿಳೆಯರು ‘ಉಕ್ಕಿನ ಮಹಿಳೆ’ಯರಾಗಿ ಬದಲಾಗಿದ್ದಾರೆ.

ಮೊದಲೆಲ್ಲ ಗಂಡಸರು ತಯಾರಿಸಿದ ವಸ್ತುಗಳನ್ನು ಹೆಂಗಸರು, ಮಕ್ಕಳು ಪೇಟೆ, ಊರಿನ ಸಂತೆಗಳಲ್ಲಿ ಮಾರುತ್ತಿದ್ದರು. ಆಗ ಬರೀ ಎರಡೋ ಮೂರೋ ಬಾಣಲೆ, ಗುಂಡಾಲುಗಳು ಮಾರಾಟವಾಗುತ್ತಿದ್ದವು. ಕೋವಿಡ್‌ನ ದಿನಗಳಲ್ಲಿ ಕ್ರಮೇಣ ಅದೂ ಕಡಿಮೆಯಾಯಿತು. ಐದು ವರ್ಷಗಳ ಹಿಂದೆ ಸ್ವಸಹಾಯ ಗುಂಪುಗಳನ್ನು ಉತ್ತೇಜಿಸಲು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯ ಅಡಿಯಲ್ಲಿ ವಿಶೇಷ ಕಾರ್ಯಕ್ರಮ ಶುರುವಾದಾಗ ‘ಇದೇ ಸರಿಯಾದ ಅವಕಾಶ ಎಂದು ನಿರ್ಧರಿಸಿದ ನಾರಾಯಣಿ ದೇವಿ ಮತ್ತು ಇತರ ಆರು ಮಹಿಳೆಯರು ‘ನಾವೂ ಕುಲುಮೆಗಳಲ್ಲಿ ದುಡಿಯುತ್ತೇವೆ, ಪ್ರಾರಂಭದ ತರಬೇತಿ ಸಿಕ್ಕರೆ ಸಾಕು’ ಎಂದರು.

ತಮ್ಮ ಹೆಂಡತಿ ಮಕ್ಕಳೇ ಕೆಲಸಕ್ಕೆ ನಿಂತರೆ ಬೇಡ ಎನ್ನಲು ನಾವ್ಯಾರು ಎಂದ ಗಂಡಸರು, ಕಬ್ಬಿಣವನ್ನು ಹೇಗೆ, ಎಷ್ಟು ಕಾಯಿಸಬೇಕು, ಪಾಕ ಹೇಗಿರಬೇಕು, ಅಚ್ಚುಗಳನ್ನು ಸಿದ್ಧಮಾಡಿಕೊಳ್ಳುವುದು ಹೇಗೆ ಎಂಬೆಲ್ಲವನ್ನೂ ವಿವರವಾಗಿ ಮಾಡಿ ತೋರಿಸಿದರು. ಕಲಿಕೆಯಲ್ಲಿ ಹೆಣ್ಣುಮಕ್ಕಳು ಗಂಡಸರಿಗಿಂತ ಮುಂದಲ್ಲವೇ? ಶೀಘ್ರವಾಗಿ ಕುಲುಮೆ ಕೆಲಸ ಕಲಿತ ಮಹಿಳೆಯರು ಈಗ ಕಬ್ಬಿಣದ ಕೆಲಸಗಳನ್ನು ತಾವೇ ಮಾಡಿ ಮುಗಿಸುವಷ್ಟು ಕೌಶಲ ಗಳಿಸಿದ್ದಾರೆ. ಗಂಡಸರು ಕೃಷಿ ಕೆಲಸಗಳಲ್ಲಿ ತೊಡಗಿಕೊಂಡರೆ, ಮಹಿಳೆಯರು ಕುಲುಮೆಯ ಪೂರ್ಣ ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿದ್ದಾರೆ.

‘ಮೊದಮೊದಲು ಭಾರ ಎತ್ತಲು, ಸುತ್ತಿಗೆಯಿಂದ ಹಣಿಯಲು, ಕುದಿಸಲು ತುಂಬಾ ಭಯವಾಗುತ್ತಿತ್ತು. ಕುದಿಯುವ ಲೋಹ ಮೈಮೇಲೆ ಬಿದ್ದರೆ, ಸಿಡಿದರೆ ಗತಿಯೇನು ಎಂದು ಮೈತುಂಬಾ ಎರಡೆರಡು ಬಟ್ಟೆ ತೊಟ್ಟು, ಕೈಗವಸು, ಮುಖಕ್ಕೆ ಹೆಲ್ಮೆಟ್ ಹಾಕಿಕೊಂಡು ಕೆಲಸ ಕಲಿತೆವು. ಈಗ ಅಭ್ಯಾಸವಾಗಿದೆ, ಸಣ್ಣ ಪುಟ್ಟ ಗಾಯಗಳಾಗುತ್ತವೆ, ಅಂಥ ಭಯವೇನೂ ಇಲ್ಲ’ ಎನ್ನುತ್ತಾರೆ ರಾಖಿ ದೇವಿ.



ಸಾಮಾನುಗಳೇನೋ ತಯಾರಾದವು. ಅಲ್ಯೂಮಿನಿಯಂ, ಸ್ಟೀಲ್, ನಾನ್‌ಸ್ಟಿಕ್ ಕುಕ್‌ವೇರ್‌ಗಳ ಮುಂದೆ ಕಬ್ಬಿಣದ ಉತ್ಪನ್ನಗಳನ್ನು ಮಾರುವ ದೊಡ್ಡ ಸವಾಲು ಎದುರಾಯಿತು. ಮಾರುಕಟ್ಟೆಯಲ್ಲಿ ಸಿಗುವ ಬ್ರ್ಯಾಂಡೆಡ್ ಉತ್ಪನ್ನಗಳಿಂದ ರಾಸಾಯನಿಕಗಳು ಸೋರುತ್ತವೆ ಎಂದು ಗೊತ್ತಾದಂದಿನಿಂದ ಜನ ಬ್ರ್ಯಾಂಡೆಡ್ ಉತ್ಪನ್ನಗಳನ್ನು ತ್ಯಜಿಸಿ ಕಬ್ಬಿಣದ ಪಾತ್ರೆ, ಪಡಗಗಳ ಕಡೆ ಮುಖ ಮಾಡುತ್ತಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡ ನಾರಾಯಣಿ ದೇವಿ ಮತ್ತು ಸಂಗಡಿಗರು ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸ್ಥಳೀಯ ತಹಶೀಲ್ದಾರರ ನೆರವಿನಿಂದ ರಾಜ್ಯ ಸರ್ಕಾರದ ಉಸ್ತುವಾರಿಯಲ್ಲಿ ಸ್ಥಾಪಿಸಲಾದ ‘ಬೆಳವಣಿಗೆ ಕೇಂದ್ರ’ದಲ್ಲಿ ಲೋಹ ಕತ್ತರಿಸುವ ಮತ್ತು ಅಚ್ಚು ಹಾಕುವ ಯಂತ್ರಗಳನ್ನು ಇಡಲಾಗಿದ್ದು, ಅವುಗಳನ್ನು ಬಳಸಿ ಹೆಚ್ಚಿನ ಉತ್ಪಾದನೆ ಮಾಡುವ ಕ್ಷಮತೆ ದೊರೆತಿದೆ.

ತಯಾರಾದ ಪರಿಕರಗಳನ್ನು ಸರಸ್ (ಸೇಲ್ ಆಫ್ ಆರ್ಟಿಕಲ್ಸ್ ಆಫ್ ರೂರಲ್ ಆರ್ಟಿಸಾನ್ಸ್ ಸೊಸೈಟಿ) ಮೇಳ, ಜಾತ್ರೆ ಮತ್ತು ಆನ್‌ಲೈನ್‌ನಲ್ಲಿ ಮಾರಾಟ ಮಾಡುತ್ತಿರುವ ಸಂಘಟನೆಯು ಪ್ರತಿ ವರ್ಷ ರಾಜ್ಯ ಕೃಷಿ ಇಲಾಖೆಗೆ ಪರಿಕರಗಳನ್ನು ಮಾರಿ ಹಣ ಸಂಪಾದಿಸುತ್ತಿದೆ. ಶಾಲೆಗಳ ಮಧ್ಯಾಹ್ನದ ಬಿಸಿಯೂಟ ಮತ್ತು ಅಂಗನವಾಡಿಗಳಿಗೆ ರಾಜ್ಯ ಸರ್ಕಾರವೇ ಸ್ವಸಹಾಯ ಗುಂಪುಗಳು ತಯಾರಿಸಿದ ಉತ್ಪನ್ನ-ಗಳನ್ನು ಖರೀದಿಸುತ್ತದೆ. ಪೂರ್ಣಗಿರಿ ಘಟಕವು 2017ರಲ್ಲಿ ಬರೀ ₹ 60 ಸಾವಿರ ಸಂಪಾದಿಸಿತ್ತು. ಈಗ ಈ ಮೊತ್ತ ಲಕ್ಷಗಳಿಗೆ ಏರಿಕೆಯಾಗಿದೆ. ಸ್ತ್ರೀ ಸ್ವಸಹಾಯ ಗುಂಪುಗಳ ತಾಕತ್ತು ಏನು ಎಂಬುದನ್ನು ಪೂರ್ಣಗಿರಿಯ ಮಹಿಳೆಯರು ಸಾಧಿಸಿ ತೋರಿಸಿದ್ದಾರೆ. ಮಹಿಳಾ ಸ್ವಾವಲಂಬನೆಯ ಕುರುಹಾಗಿ ಪೂರ್ಣಗಿರಿ ಸಂಪೂರ್ಣವಾಗಿ ಪ್ರಕಾಶಿಸುತ್ತಿದೆ!

ವಾಚಕರ ವಾಣಿ

ಕಲಿಕಾ ವಿಧಾನ ಮುನ್ನೆಲೆಗೆ ಬರಲಿ

ಶಾಲಾ ಪಠ್ಯಪುಸ್ತಕಗಳ ಪರಿಷ್ಕರಣೆ ಕುರಿತ ಚರ್ಚೆ ಇನ್ನೂ ಕೆಲವು ಅಂಶಗಳನ್ನು ಗಮನಿಸುವುದು ಅಗತ್ಯ ಎನಿಸುತ್ತದೆ. ಅವೆಂದರೆ: ಪೋಷಕರು, ಸಾರ್ವಜನಿಕರ ಅಭಿಪ್ರಾಯ ಕೇಳಬೇಕು. ತಮ್ಮ ಮಕ್ಕಳು ಏನನ್ನು ಕಲಿಯಬೇಕು, ಹೇಗೆ ಕಲಿಯಬೇಕು ಎಂಬ ಬಗ್ಗೆ ಪೋಷಕರ ಅಭಿಪ್ರಾಯವನ್ನು ಗೌರವಿಸಬೇಕು. ಶಿಕ್ಷಣ ಇಲಾಖೆಯು ಅಭಿಪ್ರಾಯವನ್ನು ಆಹ್ವಾನಿಸಿ ಕ್ರೋಡೀಕರಿಸಬಹುದು. ಈಗ ನಡೆಯುತ್ತಿರುವ ಬಹುಪಾಲು ಚರ್ಚೆ ಏನನ್ನು ಕಲಿಸಬೇಕು, ಮಕ್ಕಳ ಮೇಲೆ ಯಾವ, ಯಾರ ದೃಷ್ಟಿಕೋನವನ್ನು ಹೇರಬೇಕು ಎಂಬುದರ ಸುತ್ತಲೇ ಇದೆ. ಬಹುಪಾಲು ದೇಶಗಳಲ್ಲಿ ಏನನ್ನು ಕಲಿಸಬೇಕು ಅನ್ನುವುದ-ಕ್ಕಿಂತ ಹೇಗೆ ಕಲಿಸಬೇಕು ಎಂಬುದರ ಕಡೆಗೆ ಕಲಿಕೆಯ ಕ್ರಮ ಹೊರಳಿಕೊಂಡು ದಶಕಗಳೇ ಆಗಿವೆ. ನಾವು ಮಾತ್ರ ನಮ್ಮ ಅರೆಬರೆ ವಿಚಾರವನ್ನು, ದೃಷ್ಟಿಕೋನವನ್ನು ಮಕ್ಕಳ ಮೇಲೆ ಹೇಗೆ ಹೇರಬೇಕು, ಮುಗ್ಧ ಮನಸ್ಸುಗಳನ್ನು ಎಳೆಯ ವಯಸ್ಸಿನಲ್ಲೇ ಹೇಗೆ ಆಕ್ರಮಿಸಿಕೊಳ್ಳಬೇಕು ಎಂಬುದರ ಬಗ್ಗೆಯೇ ಯೋಚಿಸುತ್ತಿದ್ದೇವೆ. ಅಂದರೆ ಮಕ್ಕಳ ನಾಳಿನ ಚಿಂತನಶೀಲ ಭವಿಷ್ಯದ ಬಗ್ಗೆ ನಮಗೆ ಪ್ರೀತಿಯೂ ಇಲ್ಲ ಗೌರವವೂ ಇಲ್ಲ.

ಇದಕ್ಕೆ ಮುಖ್ಯ ಕಾರಣ, ಪಠ್ಯ ಸಮಿತಿಗಳಲ್ಲಿ ಅಭಿಪ್ರಾಯ ಚತುರರಾದ ಸಾಹಿತಿಗಳು, ವಿಮರ್ಶಕರು, ಪಾರ್ಶ್ವಸತ್ಯದ ಸಂಸ್ಕೃತಿ ಚಿಂತಕರೇ ತುಂಬಿಕೊಂಡಿರುವುದು. ಹೇಗೆ ಕಲಿಸುವುದು ಎಂಬುದರಲ್ಲಿ ಪರಿಣತರಾದ, ಬೋಧನೆಯಲ್ಲಿ ಪ್ರಾಥಮಿಕ ಹಂತದಿಂದಲೂ ಬಹುಕಾಲ ಮತ್ತು ತೀವ್ರವಾಗಿ ತೊಡಗಿಕೊಂಡಿರುವವರನ್ನೇ ಪಠ್ಯ ಸಮಿತಿಗಳ ಮುಖ್ಯಸ್ಥರನ್ನಾಗಿ ಮಾಡುವುದು ಒಳ್ಳೆಯದು. ಪಠ್ಯವನ್ನು ಮತ್ತೆ ಮತ್ತೆ ತಿದ್ದುವುದೇ ಮುಖ್ಯವಲ್ಲ. ಕಲಿಕೆಯ ವಿಧಾನ, ಗುರಿಯ ಆಯಾಮಗಳನ್ನು ಮುನ್ನೆಲೆಗೆ ತರುವುದರ ಕಡೆಗೂ ಗಮನ ನೀಡಿ ನಂತರ ತಿದ್ದಲು ಹೊರಡುವುದು ಒಳ್ಳೆಯದು.

ಕೆ.ಸತ್ಯನಾರಾಯಣ, ಬೆಂಗಳೂರು

ಹಿಂದೆ ಹಿಂದೆ...

ಸಿಇಟಿ ಫಲಿತಾಂಶದಲ್ಲಿ
ಬಾಲಕಿಯರದೇ ಮೇಲುಗೈ
ಹೌದು, ಎಸ್‌ಎಸ್‌ಎಲ್‌ಸಿ,
ಪಿಯುಸಿ ಫಲಿತಾಂಶಗಳಲ್ಲೂ
ಅವರೇ ಮುಂದೆ!
ಅವರನ್ನು ಹಿಂಬಾಲಿಸುವ
ಬಾಲಕರು ಫಲಿತಾಂಶದಲ್ಲೂ
ಹಿಂದೆ ಹಿಂದೆ!

ಮ.ಗು.ಬಸವಣ್ಣ
ನಂಜನಗೂಡು

ಗ್ರಾಮೀಣ ಅಭಿವೃದ್ಧಿ: ಬೇಕು ನೇಮಕಾತಿಯ ಬಲ

ಗ್ರಾಮ ಪಂಚಾಯಿತಿಗಳು ಅಧಿಕಾರ ವಿಕೇಂದ್ರೀಕರಣಕ್ಕೆ ಒತ್ತು ನೀಡಿರುವುದರಿಂದ, ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳು ಮತ್ತು ಚಟುವಟಿಕೆಗಳು ಸ್ಥಳೀಯರನ್ನು ಜಾಗೃತರನ್ನಾಗಿಸಿವೆ. ಆದರೆ ಎಲ್ಲಾ ಕಾರ್ಯಕ್ರಮಗಳನ್ನು ಸಕಾಲದಲ್ಲಿ ಅನುಷ್ಠಾನ ಮಾಡುವುದರಲ್ಲಿ ಸಿಬ್ಬಂದಿ ಕೊರತೆ ಎದ್ದು ಕಾಣುತ್ತಿದೆ. ಸಾರ್ವಜನಿಕರಿಗೆ ಉತ್ತಮ ಸೇವೆಗಳು ಲಭಿಸಬೇಕಾದರೆ ಮತ್ತು ಅಭಿವೃದ್ಧಿ ಚಟುವಟಿಕೆಗಳು ಮತ್ತಷ್ಟು ಮೌಲ್ಯಯುತವಾಗಿ ಇರಬೇಕಾದರೆ ಅಧಿಕಾರಿಗಳ ಅಗತ್ಯವಿದೆ. ಹೀಗಾಗಿ, ಗ್ರಾಮ ಪಂಚಾಯಿತಿಗಳಿಗೆ ಬೇಕಾಗಿರುವ ಹುದ್ದೆಗಳ ಭರ್ತಿಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ರವಿ ಹೊಟ್ಟೂರ, ಹಾನಗಲ್ಲ

ನಕಲಿ ಬಿಲ್: ಹಿಂದೆ ಇರುವವರ ವಿರುದ್ಧ ಯಾವ ಕ್ರಮ?

ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದಲ್ಲಿ ಕಾಮಗಾರಿ ನಡೆಸದೆ ನಕಲಿ ಬಿಲ್ ಸೃಷ್ಟಿಸಿ ₹ 118 ಕೋಟಿಗೂ ಹೆಚ್ಚು ನಷ್ಟ ಉಂಟು ಮಾಡಿರುವ ಎಂಟು ಎಂಜಿನಿಯರ್‌ಗಳನ್ನು ಲೋಕಾಯುಕ್ತರ ಶಿಫಾರಸಿನ ಮೇರೆಗೆ ಅಮಾನತು ಮಾಡಿರುವುದು ಸರಿಯಷ್ಟೇ. ಹೀಗೆ ಅಕ್ರಮ ಕಾಮಗಾರಿ ನಡೆಸಲು ಪ್ರಭಾವ ಬೀರಿರಬಹುದಾದ ಆ ಕ್ಷೇತ್ರದ ಶಾಸಕರು ಅಥವಾ ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುತ್ತದೆ?

ಅಧಿಕಾರವನ್ನು ಬಳಸಿಕೊಂಡು ಅಮಾಯಕ ಅಧಿಕಾರಿಗಳಿಂದ ಕಾಮಗಾರಿಗಳ ಬಿಲ್ಲನ್ನು ಮಾಡಿಸಿಕೊಳ್ಳುವ ಎಲ್ಲರಿಗೂ ಈ ರೀತಿಯ ಅಮಾನತಿನ ಶಿಕ್ಷೆ ಕೊಡುವುದಕ್ಕೆ ಸಾಧ್ಯವಾದರೆ ಬಹಳ ಒಳ್ಳೆಯದು. ತಾವು ಎಲ್ಲೂ ಸಿಕ್ಕಿಹಾಕಿಕೊಳ್ಳದೆ ಅಧಿಕಾರಿಗಳನ್ನು ಮಾತ್ರ ಈ ಕೂಪಕ್ಕೆ ತಳ್ಳುವ ಯಾರೇ ಆಗಲಿ ಅಂತಹವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲೇಬೇಕು. ಸಾರ್ವಜನಿಕರ ತೆರಿಗೆಯ ಹಣವನ್ನು ಅಭಿವೃದ್ಧಿ ಹೆಸರಿನಲ್ಲಿ ಲೂಟಿ ಮಾಡುವುದು ತಪ್ಪಬೇಕು.

ಡಾ. ಎಚ್.ತುಕಾರಾಂ, ಬೆಂಗಳೂರು

ಉಚಿತ ಕೊಡುಗೆ: ಗೊಂದಲ ನಿವಾರಿಸಿ

ಸಾರ್ವಜನಿಕ ಹಿತದೃಷ್ಟಿಯಿಂದ ವಿದ್ಯುತ್ ದರ ಏರಿಕೆಯ ಆದೇಶವನ್ನು ಮರುಪರಿಶೀಲಿಸುವಂತೆ ಕಾಂಗ್ರೆಸ್‌ನ ಹಿರಿಯ ಶಾಸಕ ತನ್ವೀರ್ ಸೇಠ್ ತಮ್ಮದೇ ಸರ್ಕಾರವನ್ನು ಆಗ್ರಹಪಡಿಸಿರುವುದು ವರದಿಯಾಗಿದೆ. ಒಂದು ಕಡೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಘೋಷಿಸಿ, ಮತ್ತೊಂದು ಕಡೆ ಏಪ್ರಿಲ್‌ನಿಂದ ವಿದ್ಯುತ್ ದರ ಹೆಚ್ಚಳ ಮಾಡಿರುವುದು ಹಾಸ್ಯಾಸ್ಪದವಾಗಿದೆ. ಉಚಿತ ವಿದ್ಯುತ್ ಎಂದು ಸಾರಿದ ಮೇಲೆ ದರ ಹೆಚ್ಚಳ ಏತಕ್ಕೆ?

ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡುವುದಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿರುವುದು ರಾಜ್ಯ ಸರ್ಕಾರವನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ. ತಮಿಳುನಾಡಿನ ಚೆನ್ನೈ ನಗರದ ವ್ಯಕ್ತಿಯೊಬ್ಬರು ಇತ್ತೀಚೆಗೆ ಭೇಟಿಯಾಗಿದ್ದರು. ಆ ರಾಜ್ಯದಲ್ಲಿ ಉಚಿತ ಕೊಡುಗೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂದು ಕುತೂಹಲದಿಂದ ಕೇಳಿದೆ. ಅಲ್ಲಿ 50 ಯೂನಿಟ್ ವಿದ್ಯುತ್ ಮಾತ್ರ ಉಚಿತ, ನಂತರ ಸ್ಲ್ಯಾಬ್ ಪದ್ಧತಿ ಪ್ರಕಾರ ಶುಲ್ಕ ವಿಧಿಸಲಾಗುತ್ತದೆ ಎಂದು ಹೇಳಿದರು. ಅದೇ ರೀತಿ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಮಾತ್ರ ಉಚಿತ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ ಎಂದರು. ದೆಹಲಿ ಮತ್ತು ಪಂಜಾಬ್ ರಾಜ್ಯಗಳಲ್ಲಿ ಕೂಡ ಅಲ್ಲಿನ ನಾಗರಿಕರಿಗೆ ಉಚಿತ ಕೊಡುಗೆಗಳನ್ನು ನೀಡಲಾಗುತ್ತಿದೆಯಾದರೂ ನಮ್ಮ ರಾಜ್ಯದಲ್ಲಿ ಮಾತ್ರ ಈ ವಿಚಾರದಲ್ಲಿ ತುಂಬಾ ಗೊಂದಲ ಏರ್ಪಟ್ಟಿದೆ. ಇದಕ್ಕೆ ಬಹುಶಃ ಅನುಭವದ ಕೊರತೆ ಕಾರಣವಾಗಿರಬಹುದು. ಉಚಿತ ಕೊಡುಗೆಗಳ ಹೆಸರಿನಲ್ಲಿ ಉಂಟಾಗಿರುವ ಎಲ್ಲಾ ಗೊಂದಲಗಳನ್ನು ನಿವಾರಿಸಬೇಕಾದದ್ದು ರಾಜ್ಯ ಸರ್ಕಾರದ ಹೊಣೆಯಾಗಿದೆ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಾತ್ಯತೀತ ಮನೋಭಾವ, ಸಾಮಾಜಿಕ ಸೌಹಾರ್ದ, ದೀನದಲಿತರ ಹಿತಾಸಕ್ತಿಯ ಹಂಬಲ, ಮಹಿಳಾ ಅಭ್ಯುದಯ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆ – ಇವು, 'ಪ್ರಜಾವಾಣಿ'ಯ ಎಪ್ಪತ್ತೈದು ವರ್ಷಗಳ ಪಯಣದಲ್ಲಿ ಹಾಸುಹೊಕ್ಕಾಗಿರುವುದಕ್ಕೆ ನೂರಾರು ನಿದರ್ಶನಗಳನ್ನು ನೆನಪಿಸಿಕೊಳ್ಳಬಹುದು. ಆ ನಿದರ್ಶನಗಳನ್ನೆಲ್ಲ ಒಟ್ಟಿಗಿಟ್ಟು ನೋಡಿದರೆ, ಅದು 'ಪ್ರಜಾವಾಣಿ' ನಡೆದುಬಂದ ಹಾದಿಯಾಗಿರುವುದು ಮಾತ್ರವಲ್ಲದೆ, ಸ್ವತಂತ್ರ ಭಾರತದ ಸಾಮಾಜಿಕ ಚರಿತ್ರೆಯೂ– ವಿಶೇಷವಾಗಿ ಕರ್ನಾಟಕದ ಚರಿತ್ರೆಯೂ– ಆಗಿದೆ

ಜನರ ನೋವಿಗೆ ಮಿಡಿವ ಪ್ರಾಣಮಿತ್ರ

● ರಘುನಾಥ ಚ.ಹ.

'ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣಮಿತ್ರ' – 'ಬಂಡಾಯ' ಸಂಘಟನೆಗೆ ಡಿ.ಆರ್. ನಾಗರಾಜ್ ನೀಡಿದ ಈ ಧ್ಯೇಯವಾಕ್ಯವನ್ನು 'ಪತ್ರಿಕೆಯಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂದು ಬದಲಿಸಿದರೆ, ಅದು 'ಪ್ರಜಾವಾಣಿ' ಪತ್ರಿಕೆ ನಡೆದುಬಂದ ಹಾದಿಯನ್ನೇ ಹೇಳಿದಂತಾಗುತ್ತದೆ.

ಜನರ ನೋವಿಗೆ ಮಿಡಿಯುವುದು ಪತ್ರಿಕೆಯೊಂದಕ್ಕೆ ನೇರವಾಗಿ ಸಂಬಂಧಿಸಿದ ಹೊಣೆಗಾರಿಕೆಯಲ್ಲ. ಸಮಾಜದಲ್ಲಿನ ಆಗುಹೋಗುಗಳನ್ನು ವಸ್ತುನಿಷ್ಠವಾಗಿ ಜನರ ಮುಂದಿಡುವುದು ಪತ್ರಿಕೆಯ ಕೆಲಸ. ಈ 'ಕನ್ನಡಿ ಕೆಲಸ'ದ ಅಂತಿಮ ಉದ್ದೇಶವೂ ಸಮಾಜದ ಕಾಳಜಿಯೇ ಆಗಿರುವುದರಿಂದ, ಪತ್ರಿಕೆ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಭಿನ್ನವಾಗಿ ನೋಡುವುದು ಅಸಾಧ್ಯ. ಪತ್ರಿಕಾಧರ್ಮ ಎನ್ನುವುದು ಜನರ ಕಾಳಜಿಯ ವಕ್ತಾರಿಕೆಗಿಂತಲೂ ಭಿನ್ನವಾದುದೇನಲ್ಲ.

ಜಾತ್ಯತೀತ ಮನೋಭಾವ, ಸಾಮಾಜಿಕ ಸೌಹಾರ್ದ, ದೀನದಲಿತರ ಹಿತಾಸಕ್ತಿಯ ಹಂಬಲ, ಮಹಿಳಾ ಅಭ್ಯುದಯ ಹಾಗೂ ಸಾಮಾಜಿಕ ನ್ಯಾಯದ ಪರಿಕಲ್ಪನೆ – ಇವು, 'ಪ್ರಜಾವಾಣಿ'ಯ ಎಪ್ಪತ್ತೈದು ವರ್ಷಗಳ ಪಯಣದಲ್ಲಿ ಹಾಸುಹೊಕ್ಕಾಗಿರುವುದಕ್ಕೆ ನೂರಾರು ನಿದರ್ಶನಗಳನ್ನು ನೆನಪಿಸಿಕೊಳ್ಳಬಹುದು. ಆ ನಿದರ್ಶನಗಳನ್ನೆಲ್ಲ ಒಟ್ಟಿಗಿಟ್ಟು ನೋಡಿದರೆ, ಅದು 'ಪ್ರಜಾವಾಣಿ' ನಡೆದುಬಂದ ಹಾದಿಯಾಗಿರುವುದು ಮಾತ್ರವಲ್ಲದೆ, ಸ್ವತಂತ್ರ ಭಾರತದ ಸಾಮಾಜಿಕ ಚರಿತ್ರೆಯೂ– ವಿಶೇಷವಾಗಿ ಕರ್ನಾಟಕದ ಚರಿತ್ರೆಯೂ– ಆಗಿದೆ.

ಸಾಮಾಜಿಕ ಹೊಣೆಗಾರಿಕೆ ಕೇವಲ 'ಪ್ರಜಾವಾಣಿ'ಗೆ ಮೀಸಲಾದುದಲ್ಲ. ಸಾಮಾಜಿಕ ಕಾಳಜಿ ಪತ್ರಿಕೋದ್ಯಮದ ಅವಿಭಾಜ್ಯ ಅಂಗವೇ ಆಗಿದೆ. ಆದರೆ, ದೀನದಲಿತರ ಸಮಸ್ಯೆಗಳಿಗೆ 'ಪ್ರಜಾವಾಣಿ' ಸ್ಪಂದಿಸಿದಂತೆ ಮತ್ತೊಂದು ಕನ್ನಡ ಪತ್ರಿಕೆ ಸ್ಪಂದಿಸಿದ ಉದಾಹರಣೆಯಿಲ್ಲ. ದಲಿತ ಸಂಘಟನೆ ಮತ್ತು ಚಳವಳಿಯ ಕುರಿತು 'ಪ್ರಜಾವಾಣಿ'ಯಲ್ಲಿ ಪ್ರಕಟಗೊಂಡಷ್ಟು ವರದಿ–ವಿಶ್ಲೇಷಣೆಗಳು ಬೇರೆಲ್ಲೂ ಪ್ರಕಟಗೊಂಡಿಲ್ಲ. ಇದಕ್ಕೆ ಉದಾಹರಣೆಯಾಗಿ, 'ದಲಿತರ ಮೇಲೆ ದೌರ್ಜನ್ಯವಾದಾಗಲೆಲ್ಲಾ ಸಂಪಾದಕೀಯವನ್ನು ಬರೆದ ಪತ್ರಿಕೆ 'ಪ್ರಜಾವಾಣಿ' ಒಂದೇ. ನಾನು ಪ್ರಾರಂಭದಲ್ಲಿ ದಲಿತರ ಮೇಲೆ ಬರೆದ ಸಂಪಾದಕೀಯಗಳನ್ನು ಕತ್ತರಿಸಿ ಜೋಡಿಸಿಡುತ್ತಿದ್ದೆ. ಅವು ತಿಂಗಳಿಗೆ ನಾಲ್ಕು–ಐದು ಆಗತೊಡಗಿದಾಗ ಬಿಟ್ಟುಬಿಟ್ಟೆ. ದಲಿತರ ಮತ್ತು ಮಹಿಳೆಯರ ಮೇಲೆ ಅಷ್ಟೊಂದು ದೌರ್ಜನ್ಯಗಳು ಈ ನಾಡಿನಲ್ಲಿ ನಡೆದಿವೆ, ನಡೆಯುತ್ತಿವೆ. ಈ ಎಲ್ಲಾ ಘಟನೆಗಳು ಮನುಷ್ಯ ಕುಲಕ್ಕೆ ಆದ ಗಾಯವೆಂದು, ನಂಬಿರುವ 'ಪ್ರಜಾವಾಣಿ', ಆ ಕುರಿತ ವರದಿಗಳೊಂದಿಗೆ ಸಮಾಜ ಮತ್ತು ಆಳುವ ಸರ್ಕಾರವನ್ನು ಎಚ್ಚರಿಸುವುದನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿಭಾಯಿಸಿಕೊಂಡು ಬಂದಿದೆ' ಎನ್ನುವ ಕವಿ ಸುಬ್ಬು ಹೊಲೆಯಾರ್ ಅವರ ಮಾತುಗಳನ್ನು ಗಮನಿಸಬಹುದು. 'ಪ್ರಜಾವಾಣಿ ಪತ್ರಿಕೆ ವಾಣಿಜ್ಯದ ಲೆಕ್ಕಾಚಾರಗಳನ್ನು ಮೀರಿ ಮಾನವೀಯ ಜೀವಸ್ಪಂದನ, ಮಹಿಳೆ, ಮಕ್ಕಳು, ಆರೋಗ್ಯ, ವಿಜ್ಞಾನ, ಸಾಹಿತ್ಯ, ಪರಿಸರ, ಪ್ರಾಣಿಪಕ್ಷಿ, ಗಾಳಿ, ನೀರು, ಭೂಮಿ... ಈ ಎಲ್ಲಾ ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿ ಸಾಗುತ್ತಿದೆ ಎಂದು ಭಾವಿಸುತ್ತೇನೆ. 'ಸದಾ ಎಚ್ಚರವಾಗಿರು. ನಿನಗೆ ಎಲ್ಲವೂ ತಿಳಿಯುತ್ತದೆ' ಎನ್ನುವ ಬುದ್ಧನ ಮಾತಿನ ಹಾಗೆ, ಒಂದು ಪತ್ರಿಕೆ ದಿನ ಬೆಳಗಾದರೆ ನಮ್ಮನ್ನಿಲ್ಲಿ ಮತ್ತೆ ಮತ್ತೆ ಎಚ್ಚರಿಸುತ್ತದೆ ಎನ್ನುವುದು ನನ್ನ ಅಭಿಮಾನದ ಮಾತು' ಎನ್ನುವ ಸುಬ್ಬು ಅವರ ಮಾತನ್ನು (ನ. 03, 2022) ಪತ್ರಿಕೆಯೊಂದಿಗೆ ದೀನ–ದಲಿತ ಸಮುದಾಯ ಹೊಂದಿರುವ ನಂಟಿನಂತೆಯೂ ನೋಡಬಹುದು.




ದೇವನೂರ ಮಹಾದೇವ ಅವರ ಅತಿಥಿ ಸಂಪಾದಕತ್ವದಲ್ಲಿ ರೂಪಿಸಿದ್ದ 2012ರ ಏಪ್ರಿಲ್ 14 ವಿಶೇಷ ಸಂಚಿಕೆಯ ಮುಖಪುಟ

ಸಂವಾದ ಸಂಸ್ಕೃತಿಯ 'ಅನುಭವ ಮಂಟಪ'

ನಾಡು–ನುಡಿ ಹಾಗೂ ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದಂತೆ 'ಪ್ರಜಾವಾಣಿ' ನಿರಂತರವಾಗಿ ಸಂವಾದಗಳನ್ನು ನಡೆಸಿಕೊಂಡು ಬಂದಿದೆ ಹಾಗೂ ಆ ಮಾತುಕತೆಗಳಲ್ಲಿ ವಿಷಯತಜ್ಞರ ಜೊತೆಗೆ ಸಾಮಾನ್ಯ ಓದುಗರೂ ಭಾಗವಹಿಸಲು ಅವಕಾಶ ಕಲ್ಪಿಸಿದೆ. ಅಂಥ ಎರಡು ಅಪೂರ್ವ ಸಂವಾದಗಳು: 'ವಚನ ಸಾಹಿತ್ಯ ಸಂವಾದ' ಹಾಗೂ 'ಜಾತಿ ಸಂವಾದ'.

2012ರ ಡಿಸೆಂಬರ್ 3ರಿಂದ 2013ರ ಮೇ 27ರವರೆಗೆ, ವಾರಕ್ಕೊಮ್ಮೆ, 26 ಕಂತುಗಳಲ್ಲಿ ಕಾಲ ಪ್ರಕಟಗೊಂಡ 'ಜಾತಿ ಸಂವಾದ'ದಲ್ಲಿ ಬರಹಗಾರರು, ಕಲಾವಿದರು, ವಿದ್ವಾಂಸರೊಂದಿಗೆ ಜನಸಾಮಾನ್ಯರೂ ಪಾಲ್ಗೊಂಡರು. ಗೋಪಾಲ್ ಗುರು ಮತ್ತು ಸುಂದರ್ ಸರುಕ್ಕೈ ಈ ಸಂವಾದದ ಸಮನ್ವಯಕಾರರು. ಜಾತಿಯನ್ನು ಮಾಧ್ಯಮವೊಂದರಲ್ಲಿ ಮುಕ್ತವಾಗಿ ಚರ್ಚಿಸಿದ್ದು ಭಾರತೀಯ ಪತ್ರಿಕೋದ್ಯಮದಲ್ಲೊಂದು ಅಪೂರ್ವ ಪ್ರಯೋಗ. ಪತ್ರಿಕೆಯ ಓದುಗರು ತಮ್ಮ ಜಾತಿ ಅನುಭವಗಳನ್ನು ಮೊದಲ ಬಾರಿಗೆ ಸಾರ್ವಜನಿಕವಾಗಿ ಹಂಚಿಕೊಂಡರು. ನೂರಾರು ಓದುಗರು ಉತ್ಸಾಹದಿಂದ ಪಾಲ್ಗೊಂಡ ಈ ಸಂವಾದ, ಜಾತಿಗೆ ಸಂಬಂಧಿಸಿದ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸೂಕ್ಷ್ಮಗಳನ್ನು ಅನಾವರಣಗೊಳಿಸಿತು. ಈ ಸಂವಾದದ ಬರಹಗಳನ್ನು 'ಪ್ರಜಾವಾಣಿ ಪ್ರಕಾಶನ' 2014ರಲ್ಲಿ 'ಜಾತಿ ಸಂವಾದ' ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದು, ಈ ಕೃತಿ ಜಾತಿಯ ಬಗ್ಗೆ ನಡೆಯುವ ಸಂಶೋಧನೆಗಳಿಗೆ ಬಹು ಮುಖ್ಯವಾದ ಆಕರವಾಗಿದೆ.

ಎಚ್.ಎಸ್. ಶಿವಪ್ರಕಾಶ್ ಅವರ 'ವಚನ ಸಾಹಿತ್ಯ ಮತ್ತು ಜಾತಿ ವಿರೋಧ' (2013, ಮಾರ್ಚ್ 14) ಅಂಕಣ ಬರಹ ಚರ್ಚೆಯ ರೂಪು ಪಡೆದು, ನಾಡಿನ ಅನೇಕ ಬರಹಗಾರರು ವಚನಕಾರರ ಜಾತಿಮೀಮಾಂಸೆಗೆ ಸಂಬಂಧಿಸಿದ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಪ್ರೇರಣೆಯಾಯಿತು. ಸುಮಾರು ಎರಡೂವರೆ ತಿಂಗಳ ಕಾಲ ನಡೆದ ಈ ಸಂವಾದ, ಜಾತಿವಿರೋಧಕ್ಕೆ ಸಂಬಂಧಿಸಿದ ವಚನಕಾರರ ಒಲವು ನಿಲುವುಗಳನ್ನು ಮರುಪರಿಶೀಲನೆಗೊಳಪಡಿಸಿತು. 'ವಚನಗಳಲ್ಲಿ ಆಧ್ಯಾತ್ಮಿಕತೆ ಮತ್ತು ಸಾಮಾಜಿಕತೆ' ಎನ್ನುವ ಎಚ್.ಎಸ್. ಶಿವಪ್ರಕಾಶರ ಬರಹದೊಂದಿಗೇ ಕೊನೆಗೊಂಡ ಈ ಸಂವಾದದಲ್ಲಿ ಪ್ರಕಟಗೊಂಡ ಇಪ್ಪತ್ತೇಳು ಲೇಖನಗಳನ್ನು 'ವಚನ ಸಾಹಿತ್ಯ ಸಂವಾದ' ಶೀರ್ಷಿಕೆಯಲ್ಲಿ 'ಪ್ರಜಾವಾಣಿ ಪ್ರಕಾಶನ' ಪುಸ್ತಕ ರೂಪದಲ್ಲಿ ಪ್ರಕಟಿಸಿದೆ (2014). ಡಾ. ಎಂ.ಎಂ. ಕಲಬುರ್ಗಿ, ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಮೊಗಳ್ಳಿ ಗಣೇಶ್, ಚಂದ್ರಶೇಖರ ಕಂಬಾರ, ಕೆ.ವಿ. ಅಕ್ಷರ, ದೇವನೂರ ಮಹಾದೇವ ಈ ಸಂವಾದದಲ್ಲಿ ಭಾಗಿಯಾದ ಕೆಲವರು. ಈ ಕೃತಿಗೆ ಬರೆದ ಮುನ್ನುಡಿಯಲ್ಲಿ, 'ಪ್ರಜಾವಾಣಿ ಪತ್ರಿಕೆಯು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಜನಪರ ನಿಲುವುಗಳನ್ನು ಕುರಿತ ತನ್ನ ಬದ್ಧತೆಯಿಂದ ಕರ್ನಾಟಕದ ಇನ್ನಾವ ಪತ್ರಿಕೆಯೂ ಪಡೆಯದ ವಿಶ್ವಾಸಾರ್ಹತೆಯನ್ನು ಪಡೆದುಕೊಂಡಿದೆ' ಎಂದು ಡಾ. ಎಂ.ಎಸ್. ಆಶಾದೇವಿ ಅಭಿಪ್ರಾಯಪಟ್ಟಿದ್ದಾರೆ. ಅವರ ಮಾತು, ವಚನ ಸಂವಾದದ ಮಹತ್ವದೊಂದಿಗೆ ಪತ್ರಿಕೆಯ ಅನನ್ಯತೆಯನ್ನೂ ಹೇಳುವಂತಹದ್ದು.



ಎದೆಗೆ ಬಿದ್ದ ಪತ್ರಿಕೆ

1953ರ ದಸರೆಯ ದಿನಗಳು. ಕುಸ್ತಿ ಪಂದ್ಯಗಳಲ್ಲಿ ಪಾಲ್ಗೊಳ್ಳಲು ಬಂದ ಹರಿಜನ ಪೈಲ್ವಾನರ ಮೇಲೆ ಸವರ್ಣೀಯ ಜೆಟ್ಟಿಗಳು ಮತ್ತು ಅವರ ಬೆಂಬಲಿಗರು ದಾಳಿ ನಡೆಸಿದ್ದರು. ಉದ್ರಿಕ್ತರ ಗುಂಪನ್ನು ಚದುರಿಸಲಿಕ್ಕಾಗಿ ಪೊಲೀಸರು ಗುಂಡು ಹಾರಿಸಿದಾಗ, ಮೂವರು ಸಾವಿಗೀಡಾಗಿದ್ದರು (ನಂತರದಲ್ಲಿ ಸತ್ತವರ ಸಂಖ್ಯೆ ಐದಕ್ಕೇರಿತು). ಆ ಘಟನೆಯ ಬಗ್ಗೆ 1953, ಅ. 9ರ ಸಂಚಿಕೆಯಲ್ಲಿ 'ಮೈಸೂರಿನಲ್ಲಿ ಗೋಲೀಬಾರು; ಮೂರು ಮಂದಿ ಮರಣ' ಶೀರ್ಷಿಕೆಯಲ್ಲಿ ವರದಿ ಪ್ರಕಟಿಸಿದ ಪತ್ರಿಕೆ, ನಂತರದ ದಿನಗಳಲ್ಲಿ ಆ ಪ್ರಕರಣದ ಬಗ್ಗೆ ಸಾಲು ಸಾಲು ವರದಿಗಳನ್ನು ಪ್ರಕಟಿಸಿತ್ತು. 1993ರ ಮಾರ್ಚ್ 25ರಂದು ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಜಾತಿಕಲಹ ಹಿಂಸೆಯ ರೂಪು ತಳೆದು, ಮೂವರು ದಲಿತರ ಹತ್ಯೆ ನಡೆದಿತ್ತು. ಆ ಪ್ರಕರಣವನ್ನು ವಿರೋಧಿಸಿ ನಂಜನಗೂಡಿನಲ್ಲಿ ಏ. 26ರಂದು ನಡೆದ ದಲಿತರ ಮೆರವಣಿಗೆ ಹಿಂಸಾರೂಪು ತಳೆದಾಗ ನಡೆದ ಗೋಲಿಬಾರ್‌ನಲ್ಲಿ ಇಬ್ಬರು ಸಾವಿಗೀಡಾಗಿದ್ದರು. ಬದನವಾಳು ಹತ್ಯೆ ಹಾಗೂ ನಂಜನಗೂಡಿನ ಗೋಲಿಬಾರ್ ಬಗ್ಗೆ ಸರಣಿ–ವರದಿ ಲೇಖನಗಳ ಜೊತೆಗೆ ಸಂಪಾದಕೀಯವನ್ನೂ ಬರೆದಿದ್ದ ಪತ್ರಿಕೆ ಸಾಮಾಜಿಕ ಸೌಹಾರ್ದ ನೆಲೆಗೊಳ್ಳುವ ಹಾಗೂ ತಪ್ಪಿತಸ್ಥರಿಗೆ ಶಿಕ್ಷೆಯಾಗುವ ದಿಸೆಯಲ್ಲಿ ಸರ್ಕಾರ–ಸಮಾಜದ ಗಮನಸೆಳೆಯುವ ಕೆಲಸ ಮಾಡಿತ್ತು.

1987ರ ಆಗಸ್ಟ್ 2 ಕರ್ನಾಟಕದ ಚರಿತ್ರೆಯಲ್ಲೊಂದು ಕರಾಳ ದಿನ. ಬೆಳಗಾವಿ ಜಿಲ್ಲೆಯ ಬೆಂಡಿಕೇರಿಯಲ್ಲಿ, ಜೋಳದ ಕಡ್ಡಿ ಕಳವಿನ ಆರೋಪದ ಮೇರೆಗೆ ಐವರು ದಲಿತರಿಗೆ ಮಲ ತಿನ್ನಿಸಲಾಗಿತ್ತು. ಈ ಪ್ರಕರಣದ ಬಗ್ಗೆ ವರದಿ–ಲೇಖನಗಳನ್ನು ಪ್ರಕಟಿಸಿದ ಪತ್ರಿಕೆ, ವರ್ಷದ ನಂತರವೂ ಪ್ರಕರಣ ತಾರ್ಕಿಕ ಅಂತ್ಯ ಮುಟ್ಟದೆಹೋದಾಗ ಸರ್ಕಾರವನ್ನು ಎಚ್ಚರಿಸುವ ಕೆಲಸವನ್ನೂ ಮಾಡಿತ್ತು. ಬೆಂಡಿಕೇರಿಯಂತಹುದೇ ಪ್ರಕರಣ 1988ರ ಜನವರಿ 29ರಂದು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ತತ್ತೂರಿನಲ್ಲಿ ನಡೆಯಿತು. ದೇವಸ್ಥಾನದಲ್ಲಿ ಪೂಜೆ ಮಾಡಿಕೊಡಲು ಒತ್ತಾಯಿಸಿದ ಚಂದ್ರಪ್ಪ ಎನ್ನುವ ನಿಮ್ನ ವರ್ಗದ ಕೃಷಿ ಕಾರ್ಮಿಕನನ್ನು ಊರವರು ರಸ್ತೆಯ ಪಕ್ಕದ ಟೆಲಿಫೋನ್ ಕಂಬಕ್ಕೆ ಕಟ್ಟಿ ಚಪ್ಪಲಿಯಲ್ಲಿ ಹೊಡೆದಿದ್ದರು. ಮಲ ಮೆತ್ತಿದ ಚಪ್ಪಲಿಯನ್ನು ಬಾಯಿಗೆ ತುರುಕಿದ್ದರು. ಈ ಪ್ರಕರಣದ ಬಗ್ಗೆ ಫೆ. 5ರಂದು ವರದಿ ಪ್ರಕಟಿಸಿದ 'ಪ್ರಜಾವಾಣಿ', ಘಟನೆಯನ್ನು ಖಂಡಿಸಿ ಫೆ. 6ರಂದು ಸಂಪಾದಕೀಯ ಬರೆಯಿತು.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಸಮೀಪದ ಹಂಗರಹಳ್ಳಿ ಗ್ರಾಮದ ಕ್ವಾರಿಯೊಂದರಲ್ಲಿ ಕಾರ್ಮಿಕರ ಕಾಲಿಗೆ ಸರಪಳಿ ಹಾಕಿ ದುಡಿಸುತ್ತಿದ್ದ ಪ್ರಕರಣ 2000 ಇಸವಿಯಲ್ಲಿ ಬೆಳಕಿಗೆ ಬಂದಾಗ, ನಾಗರಿಕ ಜಗತ್ತು ಬೆಚ್ಚಿಬಿದ್ದಿತ್ತು. 15 ಕೆ.ಜಿ. ತೂಕದ ಸರಪಳಿಯಿಂದ ಕಾಲುಗಳನ್ನು ಬಿಗಿದಿದ್ದ ಐವರು ಜೀತಗಾರರನ್ನು ಬಂಧಮುಕ್ತಗೊಳಿಸಿದ ವರದಿ ಜೂನ್ 24, 2000 ಇಸವಿಯ 'ಪ್ರಜಾವಾಣಿ'ಯಲ್ಲಿ ಪ್ರಕಟಗೊಂಡಿತ್ತು. ಅದೇ ದಿನ 'ಅಮಾನುಷ ಕೃತ್ಯ' ಶೀರ್ಷಿಕೆಯಲ್ಲಿ ಪತ್ರಿಕೆಯು ಸಂಪಾದಕೀಯ ಪ್ರಕಟಿಸಿತ್ತು.

ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆಸೇವೆ ಆಚರಣೆಯ ವಿರುದ್ಧ ನಡೆದ ಜನಜಾಗೃತಿ ಆಂದೋಲನದಲ್ಲಿ ಪತ್ರಿಕೆಯದು ಪ್ರಮುಖ ಪಾತ್ರ. ಮೌಢ್ಯಾಚರಣೆಯ ವಿರುದ್ಧ ಸತತವಾಗಿ ವರದಿಗಳನ್ನು ಪ್ರಕಟಿಸಿದ ಪತ್ರಿಕೆ, 1986ರ ಮಾರ್ಚ್ 22ರಂದು ಸಂಪಾದಕೀಯವನ್ನೂ ಬರೆದಿತ್ತು. ಬೆತ್ತಲೆಸೇವೆಯಂಥ ಅಂಧಶ್ರದ್ಧೆಯನ್ನು ಬಲಪ್ರಯೋಗದಿಂದ ಹೋಗಲಾಡಿಸಲು ಪ್ರಯತ್ನಿಸುವುದು ನಕಾರಾತ್ಮಕ ಮಾರ್ಗ ಎಂದು ಅಭಿಪ್ರಾಯಪಟ್ಟಿದ್ದ ಪತ್ರಿಕೆ, ಇಂಥ ಅಂಧಶ್ರದ್ಧೆಗಳ ನಿವಾರಣೆಗೆ ದೀರ್ಘಾವಧಿಯ ಶೈಕ್ಷಣಿಕ–ವೈಜ್ಞಾನಿಕ ಕಾರ್ಯಕ್ರಮಗಳ ಅಗತ್ಯವನ್ನು ಪ್ರತಿಪಾದಿಸಿತ್ತು. ಮಾರ್ಚ್ 11ರಂದು ಪೊಲೀಸ್ ಮತ್ತು ಸಾಮಾಜಿಕ ಕಾರ್ಯಕರ್ತರ ಮೇಲೆ ಭಕ್ತರಿಂದ ನಡೆದ ಹಲ್ಲೆಯನ್ನು ಸಂಪಾದಕೀಯ ಬರಹದಲ್ಲಿ ವಿರೋಧಿಸಿದ್ದ ಪತ್ರಿಕೆ, 'ತಲೆತಲಾಂತರಗಳಿಂದ ನಡೆದು ಬಂದು ಒಂದು ವರ್ಗದ ಜನರಲ್ಲಿ ಪ್ರಬಲವಾಗಿ ಬೇರೂರಿ ಹೋಗಿರುವ ಕಂದಾಚಾರಗಳನ್ನು ಒಂದೆರಡು ತಿಂಗಳು ಅಥವಾ ಒಂದೆರಡು ದಿನಗಳಲ್ಲಿ ಅವರ ಎದುರು ನಿಂತು ಬಲವಂತದಿಂದ ತಡೆಗಟ್ಟಲು ಸಾಧ್ಯವೆನ್ನುವುದೂ ಒಂದು ಕುರುಡು ನಂಬಿಕೆ' ಎಂದು ಹೇಳಿತ್ತು.

ನಂಜನಗೂಡು ತಾಲ್ಲೂಕಿನ ತಗಡೂರು ಗ್ರಾಮದ ದಲಿತರು ನಿವೇಶನದ ಜಾಗಕ್ಕಾಗಿ 1940ರ ಮೇ 25ರಂದು ಅಂದಿನ ದಿವಾನ ಮಿರ್ಜಾ ಇಸ್ಮಾಯಿಲ್ ಅವರಿಗೆ ಅರ್ಜಿ ಕೊಟ್ಟಿದ್ದರು. ನಲವತ್ತು ವರ್ಷಗಳಾದರೂ ನಿವೇಶನ ದೊರೆಯದೆ ಹೋದಾಗ, ಕಚೇರಿಗಳನ್ನು ಎಡತಾಕಿದ್ದು ಫಲ ಕೊಡದೆ ಹೋದಾಗ, 1979ರ ಅಕ್ಟೋಬರ್ 17ರಂದು ಸತ್ಯಾಗ್ರಹ ಆರಂಭಿಸಿದರು. ದಲಿತರ ವಸತಿ ಸಮಸ್ಯೆ ಕುರಿತಂತೆ, 'ನಲವತ್ತು ವರ್ಷಗಳಾದರೂ ನೆಲಕಾಣದ ತಗಡೂರು ದಲಿತರು' ಶೀರ್ಷಿಕೆಯ ದೇವನೂರ ಮಹಾದೇವರ ಬರಹ 'ಸಾಪ್ತಾಹಿಕ ಪುರವಣಿ'ಯ ಡಿ. 9, 1979ರ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. ಇದೇ ದೇವನೂರರು ಅತಿಥಿ ಸಂಪಾದಕರಾಗಿ ರೂಪಿಸಿದ 2012ರ ಏಪ್ರಿಲ್ 14ರ ಸಂಚಿಕೆ 'ಪ್ರಜಾವಾಣಿ' ಇತಿಹಾಸದಲ್ಲಿ ಮಾತ್ರವಲ್ಲ, ಭಾರತೀಯ ಪತ್ರಿಕೋದ್ಯಮದಲ್ಲೇ ಒಂದು ವಿಶಿಷ್ಟ ಪ್ರಯೋಗ. 'ಸಮಾನತೆ ಕನಸನ್ನು ಮತ್ತೆ ಕಾಣುತ್ತ...' ಶೀರ್ಷಿಕೆಯ ಸಂಪಾದಕೀಯದಲ್ಲಿ ದೇವನೂರರು, ಜಾತೀಯತೆಯಿಂದ ಮತ್ತೆ ಮತ್ತೆ ಗಾಯಗೊಳ್ಳುತ್ತಿದ್ದರೂ ದಲಿತರು ಸಹನೆ ಕಳೆದುಕೊಳ್ಳದಿರುವುದನ್ನು ಬಹು ಅರ್ಥಪೂರ್ಣವಾಗಿ ದಾಖಲಿಸಿದ್ದರು. ದೇವನೂರರ ಸಂಪಾದಕೀಯ ಶೀರ್ಷಿಕೆಯನ್ನೇ ತಲೆಬರಹವನ್ನಾಗಿಸಿಕೊಂಡು, 'ದಲಿತ ಸಂಚಿಕೆ'ಯ ಎಲ್ಲ ಬರಹಗಳು ಪುಸ್ತಕ ರೂಪದಲ್ಲಿ 'ಪ್ರಜಾವಾಣಿ ಪ್ರಕಾಶನ'ದಿಂದ ಪ್ರಕಟಗೊಂಡಿವೆ. ಈ ಪ್ರಯೋಗಶೀಲತೆಯ ಮುಂದುವರಿದ ಭಾಗವಾಗಿ, 2015ರ ಏಪ್ರಿಲ್ 12ರ 6 ಪುಟಗಳ 'ಮುಕ್ತಛಂದ' ಪುರವಣಿ 'ಅಂಬೇಡ್ಕರ್ ವಿಶೇಷ ಸಂಚಿಕೆ'ಯಾಗಿ ಪ್ರಕಟಗೊಂಡಿದ್ದನ್ನು ಗಮನಿಸಬಹುದು.


ದಲಿತ ವಿಶೇಷ ಸಂಚಿಕೆ

'ಇಂಥ ವಿಶೇಷ ಸಂಚಿಕೆಯನ್ನು 'ಪ್ರಜಾವಾಣಿ' ಮಾತ್ರ ಮಾಡಲು ಸಾಧ್ಯ. ಇದರಿಂದ ನಮ್ಮನ್ನು ಯಾರೂ ಕರೆದುಕೊಂಡು ಹೋಗದ ದಾರಿಯಲ್ಲಿ ಕರೆದುಕೊಂಡು ಹೋಗಿದ್ದೀರಿ. ಈ ದಾರಿಯ ಪರಿಚಯ ನಮಗೆ ಈಗಾಗಲೇ ಆಗಬೇಕಿತ್ತು. ದುರ್ದೈವದಿಂದ ಇದುವರೆಗೂ ಯಾರೂ ಮಾಡಿಲ್ಲ.

ಡಾ. ಪಾಟೀಲ ಪುಟ್ಟಪ್ಪ, ಹುಬ್ಬಳ್ಳಿ
ಏಪ್ರಿಲ್ 15, 2012

ಸಾಹಿತ್ಯ–ಸಂಘಟನೆಗೆ ಒತ್ತು

'ಪ್ರಜಾವಾಣಿ'ಯ ದೀಪಾವಳಿ ಕಥಾಸ್ಪರ್ಧೆ ಕನ್ನಡ ಕಥಾಲೋಕಕ್ಕೆ ಹೊಸ ಕ್ಷಿತಿಜವನ್ನು ರೂಪಿಸುವುದರ ಜೊತೆಗೆ, ದಲಿತಕೇರಿಗಳ ಧ್ವನಿಗಳಿಗೂ ಗಾಳಿ–ಬೆಳಕಾಗಿ ಪರಿಣಮಿಸಿತು. ಮೊಗಳ್ಳಿ ಗಣೇಶ್‌ರ 'ಒಂದು ಹಳೆಯ ಚಡ್ಡಿ', 'ಬುಗುರಿ', 'ಬತ್ತ'ದಂಥ ಅತ್ಯುತ್ತಮ ಕಥೆಗಳು, ಅಮರೇಶ ನುಗಡೋಣಿಯವರ 'ಹೊತ್ತು ಮೂಡುವ ಸಮಯ', 'ತಮಂಧದ ಕೇಡು', 'ಧರೆ ಉರಿದರೆ', 'ನೀರು ತಂದವರು' ರೀತಿಯ ಅನನ್ಯ ಕಥೆಗಳು ಬೆಳಕು ಕಂಡಿದ್ದು 'ಪ್ರಜಾವಾಣಿ' ದೀಪಾವಳಿ ಸಂಚಿಕೆಗಳಲ್ಲಿಯೇ. ಬೊಳುವಾರು, ಅಬ್ದುಲ್ ರಶೀದ್, ಬಿ.ಎಲ್. ವೇಣು, ಮಂಜುನಾಥ್ ಲತಾ, ಹನೂರು ಚನ್ನಪ್ಪರಂಥ ಅಲ್ಪಸಂಖ್ಯಾತ–ದಲಿತ ಸಮುದಾಯಗಳ ಕಥನಕಾರರ ಪ್ರಯೋಗಗಳಿಗೂ ದೀಪಾವಳಿ ಸಂಚಿಕೆಗಳು ವೇದಿಕೆಯಾದವು. ದೇವನೂರರ 'ಒಡಲಾಳ' ಕಥೆ ಪ್ರಕಟಗೊಂಡಿರುವುದೂ 'ಪ್ರಜಾವಾಣಿ'ಯ ದೀಪಾವಳಿ ವಿಶೇಷಾಂಕದಲ್ಲೇ. ಕನ್ನಡದ ಅತ್ಯುತ್ತಮ ಕಥೆಗಳ ಸಾಲಿಗೆ ಸೇರುವ 'ಬುಗುರಿ' (1990), 'ತಮಂಧದ ಕೇಡು' (1994), 'ಒಡಲಾಳ' (1978) ರೀತಿಯ ಕಥೆಗಳು ಪ್ರಕಟಗೊಂಡ ಸಂದರ್ಭದಲ್ಲಿ, ಅವು ಭಾಷೆ ಹಾಗೂ ಸಂವೇದನೆಗಳ ದೃಷ್ಟಿಯಿಂದ ಹೊಚ್ಚ ಹೊಸದಾಗಿದ್ದವು. ಈ ಕಥೆಗಳ ಕಾವು–ಬೆಳಕಿನಲ್ಲಿ ನೂರಾರು ಕಥೆಗಳು ನಂತರದ ವರ್ಷಗಳಲ್ಲಿ ರೂಪುಗೊಂಡು ಕನ್ನಡ ಕಥನ ಪರಂಪರೆಗೆ ಹೊಸ ಕಸುವು ದೊರೆಯಿತು. ಕನ್ನಡ ಕಥಾಪರಂಪರೆ ಸಮೃದ್ಧಗೊಳ್ಳುವಲ್ಲಿ ಹಾಗೂ ಹೊಸ ಪ್ರಯೋಗಗಳನ್ನು ಗುರ್ತಿಸುವಲ್ಲಿ 'ಪ್ರಜಾವಾಣಿ'ಯ ದೀಪಾವಳಿ ಸಂಚಿಕೆಗಳು ಹಾಗೂ 'ಸಾಪ್ತಾಹಿಕ ಪುರವಣಿ' ಮಹತ್ವದ ಪಾತ್ರ ವಹಿಸಿರುವುದನ್ನು ಯಾರೂ ಅಲ್ಲಗಳೆಯಲಾಗದು. 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆ, ಬರಹಗಾರರಾಗಿ ತಮಗೆ ತಂದುಕೊಟ್ಟ ಆತ್ಮವಿಶ್ವಾಸ ಹಾಗೂ ಐಡೆಂಟಿಟಿಯ ಕುರಿತು ಮೊಗಳ್ಳಿ, ಅಮರೇಶ್, ಬೆಸಗರಹಳ್ಳಿ ರಾಮಣ್ಣ ಸೇರಿದಂತೆ ಅನೇಕರು ಬಹಿರಂಗವಾಗಿಯೇ ಆಡಿರುವ ಮಾತುಗಳು, ಹಿಂದುಳಿದ ವರ್ಗಗಳ ಬರಹಗಾರರಿಗೆ 'ಪ್ರಜಾವಾಣಿ' ಆತ್ಮವಿಶ್ವಾಸ ತುಂಬುವ ಕೆಲಸವನ್ನು ಮಾಡುತ್ತಾ ಬಂದಿರುವುದಕ್ಕೆ ಉದಾಹರಣೆಯಂತಿವೆ.



ಸಾಹಿತ್ಯದ ಜೊತೆಗೆ ಸಂಘಟನೆಯ ನೆಲೆಗಟ್ಟಿನಲ್ಲೂ 'ಪ್ರಜಾವಾಣಿ' ದಲಿತರ ಪಾಲಿಗೆ ಆಪ್ತಮಿತ್ರನಂತಿದೆ. 'ದಲಿತ ಸಂಘರ್ಷ ಸಮಿತಿ' ಹಾಗೂ 'ಬಂಡಾಯ ಸಂಘಟನೆ–ಚಳವಳಿ'ಯ ಏಳುಬೀಳುಗಳಿಗೆ ಪತ್ರಿಕೆ ಸಾಕ್ಷಿಪ್ರಜ್ಞೆಯ ರೂಪದಲ್ಲಿ ಸ್ಪಂದಿಸಿದೆ. 'ದಲಿತ ಸಂಘರ್ಷ ಸಮಿತಿ'ಯಲ್ಲಿ ಒಡಕುಂಟಾದಾಗ, ಜಿಲ್ಲಾ ಮಟ್ಟದಲ್ಲಿ ಸಂಘಟನೆಯ ಸ್ಥಿತಿಗತಿ ಕುರಿತ ಸಮೀಕ್ಷೆ ರೂಪದ ವಿಶ್ಲೇಷಣೆಗಳ ಸರಣಿ 1997ರಲ್ಲಿ ಪ್ರಕಟಗೊಂಡಿತ್ತು. ಆ ಬರಹಗಳಲ್ಲಿ, ಸಮಿತಿಯ ಶಕ್ತಿ ಹಾಗೂ ದೌರ್ಬಲ್ಯಗಳ ವಿಶ್ಲೇಷಣೆಯೊಂದಿಗೆ, ಈ ಸಂಘಟನೆಯ ಅಗತ್ಯದ ಕುರಿತ ಕಾಳಜಿಯೂ ಇತ್ತು.


1957, ಅ.13ರ ಸಂಚಿಕೆಯಲ್ಲಿ ಪ್ರಕಟಗೊಂಡ ಪುಟ್ಟ ಸುದ್ದಿ ಹೀಗಿದೆ: 'ಬೆಂಗಳೂರು, ಅ. 12: ಮೈಸೂರು ರಾಜಕೀಯ ಪರಿಸ್ಥಿತಿಯ ಬಗ್ಗೆ ನಿನ್ನೆ ಬಿಡದಿಯಲ್ಲಿ ಆಚಾರ್ಯ ವಿನೋಬಾ ಭಾವೆಯವರು ಪ್ರಾರ್ಥನಾ ಸಭೆಯಲ್ಲಿ ಮಾಡಿದ ಭಾಷಣದ ವರದಿಯನ್ನು 'ಪ್ರಜಾವಾಣಿ'ಯಲ್ಲಿ ನೋಡಿದ ವಿನೋಬಾರವರು, 'ಇದು ಪ್ರಜಾವಾಣಿಯಲ್ಲ, ಪ್ರಜಾಶಕ್ತಿ' ಎಂದು ತಿಳಿಸಿದರೆಂದು 'ಪ್ರಜಾವಾಣಿ' ಕಾರ್ಯಾಲಯಕ್ಕೆ ಇಂದು ಭೇಟಿಯಿತ್ತ ಭೂದಾನ ಕಾರ್ಯಕರ್ತರು ತಿಳಿಸಿದರು'.

ಕಳೆದ ಏಳೂವರೆ ದಶಕಗಳ ಅವಧಿಯಲ್ಲಿ 'ಪ್ರಜಾವಾಣಿ' ಸಾಗಿಬಂದ ಹಾದಿಯನ್ನು ಸೂಚಿಸುವಂತಿರುವ ಮೇಲಿನ ಟಿಪ್ಪಣಿಗಳೇ, ವಿನೋಬಾ ಅವರು ಹೇಳಿದ 'ಪ್ರಜಾಶಕ್ತಿ' ಎನ್ನುವ ಮಾತು ಉತ್ಪ್ರೇಕ್ಷೆಯದಲ್ಲ ಎನ್ನುವುದನ್ನು ಮನದಟ್ಟು ಮಾಡುವಂತಿವೆ.

ಸಂಪಾದಕೀಯಗಳೆಂಬ ಸಾಲುದೀಪಗಳು

ಜಾತಿ–ಧರ್ಮದ ಹೆಸರಿನಲ್ಲಿ ಅಮಾನವೀಯ ಘಟನೆಗಳು ವರದಿಯಾದಾಗಲೆಲ್ಲ 'ಪ್ರಜಾವಾಣಿ' ಸಂಪಾದಕೀಯ ಬರೆದಿದೆ, ಶಾಂತಿ–ಸೌಹಾರ್ದ ಈ ಮಣ್ಣಿನ ಮೂಲಗುಣ ಎನ್ನುವುದನ್ನು ನೆನಪಿಸುವ ಕೆಲಸ ಮಾಡಿದೆ. ದಶಕಗಳ ಹಿಂದಿನ ಬದನವಾಳು, ಬೆಂಡಿಗೇರಿ, ತತ್ತೂರು ಘಟನೆಗಳು ಮಾತ್ರವಲ್ಲ – ಭಾರತ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಆಸುಪಾಸಿನಲ್ಲಿ ನಡೆದ ಜಾತಿವಿಷದ ವಿದ್ಯಮಾನಗಳ ಬಗ್ಗೆಯೂ 'ಪ್ರಜಾವಾಣಿ' ಬಿಡುಗಣ್ಣಾಗಿದೆ. ದಲಿತ ಮಹಿಳೆ ನೀರು ಕುಡಿದ ಕಾರಣಕ್ಕಾಗಿ ಚಾಮರಾಜನಗರ ಜಿಲ್ಲೆಯ ಹೆಗ್ಗೋಠಾರ ಗ್ರಾಮದಲ್ಲಿ, ಬೀದಿ ಟ್ಯಾಂಕ್‌ನಲ್ಲಿನ ನೀರನ್ನು ಖಾಲಿ ಮಾಡಿ ಶುದ್ಧೀಕರಿಸಲಾಗಿತ್ತು. ಆ ಘಟನೆಗೆ ಸ್ಪಂದಿಸಿದ್ದ ಪತ್ರಿಕೆ, 'ತೊಳೆಯಬೇಕಾದುದು ನೀರಿನ ಮೂಲಗಳನ್ನಲ್ಲ, ಮಲಿನಗೊಂಡಿರುವ ಜಾತೀಯ ಮನಸ್ಸುಗಳನ್ನು' ಎಂದು ಸಂಪಾದಕೀಯದಲ್ಲಿ (ನ. 22, 2022) ಹೇಳಿತ್ತು. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯಲ್ಲಿ, ದೇವರ ಕೋಲು ಮುಟ್ಟಿದ ಪರಿಶಿಷ್ಟ ಜಾತಿಯ ಬಾಲಕನ ಮೇಲೆ ನಡೆದ ಹಲ್ಲೆ ಮತ್ತು ಸಂತ್ರಸ್ತನ ಕುಟುಂಬಕ್ಕೆ ಒಡ್ಡಲಾದ ಸಾಮಾಜಿಕ ಬಹಿಷ್ಕಾರದ ಬೆದರಿಕೆಯ ಸಂದರ್ಭದಲ್ಲಿ ಪತ್ರಿಕೆಯ ಸಂಪಾದಕೀಯ (2022ರ ಸೆ. 22), 'ಜಾತೀಯತೆಯನ್ನು ತೊಡೆದುಹಾಕುವುದು ಸ್ವಾತಂತ್ರ್ಯಾನಂತರದ ಎಪ್ಪತ್ತೈದು ವರ್ಷಗಳ ನಂತರವೂ ಸಾಧ್ಯವಾಗದಿರುವುದು ದುರದೃಷ್ಟಕರ. ಜಾತಿರೋಗದಿಂದ ನರಳುವ ಮನಸ್ಸುಗಳು ಸಮಾಜವನ್ನು ಮತ್ತೆ ಮತ್ತೆ ಗಾಯಗೊಳಿಸುತ್ತಿವೆ. ಇಂಥ ಪ್ರಯತ್ನಗಳು ಸಾಮಾಜಿಕ ಆರೋಗ್ಯಕ್ಕೆ ಧಕ್ಕೆ ತರುವುದು ಮಾತ್ರವಲ್ಲ, ದೇಶದ ಅಭಿವೃದ್ಧಿಗೂ ಮಾರಕ' ಎಂದು ಕಳವಳ ವ್ಯಕ್ತಪಡಿಸಿತ್ತು.

ಶಿವಮೊಗ್ಗದ ಮಾರಿಕಾಂಬಾ ಜಾತ್ರೆ ಹಾಗೂ ಉಡುಪಿ ಜಿಲ್ಲೆಯ ಕಾಪುವಿನ ಮಾರಿ ಪೂಜೆ ಸಂದರ್ಭದಲ್ಲಿ ಮುಸ್ಲಿಂ ವ್ಯಾಪಾರಿಗಳ ವಹಿವಾಟಿಗೆ ವಿರೋಧ ವ್ಯಕ್ತವಾದಾಗ, 'ದೇಶದ ಯಾವುದೇ ಭಾಗದಲ್ಲಿ ಹಿಂದೂಗಳಿಗೆ ವ್ಯಾಪಾರ ಮಾಡಲು ಅವಕಾಶವಿರುವಂತೆಯೇ ಮುಸ್ಲಿಂ ಸೇರಿದಂತೆ ಎಲ್ಲ ಧರ್ಮದವರಿಗೂ ಅವಕಾಶವಿದೆ. ಸಂವಿಧಾನ ಕಲ್ಪಿಸಿರುವ ಈ ವ್ಯವಸ್ಥೆಗೆ ಯಾರಿಂದಲಾದರೂ ಅಡ್ಡಿಯುಂಟಾದರೆ ಅಂಥವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಸಂಪಾದಕೀಯ (ಮಾರ್ಚ್ 22, 2022) ಬರೆದಿದ್ದ ಪತ್ರಿಕೆ, 'ನಾಡಿನ ಅನೇಕ ಜಾತ್ರೆಗಳು ಧಾರ್ಮಿಕ ಸಾಮರಸ್ಯದ ಪ್ರಯೋಗಶಾಲೆಗಳಾಗಿವೆ. ಹಿಂದೂ ಮತ್ತು ಮುಸ್ಲಿಂ ಎರಡೂ ಸಮುದಾಯಗಳು ಬೆರೆತು ಜಾತ್ರೆಗಳ, ಧಾರ್ಮಿಕ ಆಚರಣೆಗಳ ಶೋಭೆ ಹೆಚ್ಚಿಸುವ ಹಲವು ಜೀವಂತ ಉದಾಹರಣೆಗಳು ಕರ್ನಾಟಕದಲ್ಲಿವೆ. ಅಂಥ ಸಾಮರಸ್ಯವನ್ನು ಕದಡುವ ಹಾಗೂ ಧರ್ಮದ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಪ್ರವೃತ್ತಿ ಖಂಡನೀಯ' ಎಂದು ಅಭಿಪ್ರಾಯಪಟ್ಟಿತ್ತು.


ಸುಭಾಷಿತ
ಪ್ರಜಾವಾಣಿ
ಅಂಧಶ್ರದ್ಧೆಗೆ ಮದ್ದು

ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆಸೇವೆ ವಿರೋಧಿಸಿ 1986ರ ಮಾರ್ಚ್ 22ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಸಂಪಾದಕೀಯ

ಪದಬಂಧ 5352


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪ್ರಭಾವ ಬೀರುವ ಸಂವತ್ಸರ! (3)
3.ಇಂಪಾದ ಧ್ವನಿ (3)
5.ಜನಪ್ರಿಯನಾದವ ಕೊನೆಗೆ ರಾಗಿ ಹಿಡಿದಿದ್ದಾನಲ್ಲಾ? (5)
6.ಕಡಿವಾಣ ನೋಡುತ್ತಲೇ ಕಚ್ಚು! (2)
8.ನೆನಪಿನಿಂದ ಮಾಸದ ತಿಂಗಳು! (2)
9.ಹಾವುಗೆ ಹತ್ತಿರವಿರುವ ಉರಗ (2)
10.ಕನಸು ಕಾಣುತ್ತಲೇ ತೋರಿದ ಬಲ (2)
14.ಇದು ಅಂತರಂಗಸ್ಪರ್ಶಿಯಾದುದು (5)
15.ಅಡುಗೆ ಮಾಡುವ ಪಾತ್ರೆ (3)
16.ವರನಲ್ಲಿ ಕಾಣಿಸುತ್ತಿರುವ ವಾಗ್ಮಿ (3)

ಮೇಲಿಂದ ಕೆಳಕ್ಕೆ

1.ಉತ್ತೇಜನ ನೀಡುವ ವರ್ತಕ! (4)
2.ವಜೀರನು ಹೊತ್ತಿರುವ ತೂಕ ! (3)
3.ತಂಗಿ ವ್ಯಕ್ತಪಡಿಸಿರುವ ಅಭಿಪ್ರಾಯ! (3)
4.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
7.ಕಾವು ಇರುವ ಬಾಹ್ಯ ಸೌಂದರ್ಯ (3)
8.ಅಳೆಯುವ ಸಾಧನ (3)
9.ಹೊಳೆ ದಾಟುವ ಸ್ಥಳ (4)
11.ಕೋಮಲವಾದ ಶರೀರವುಳ್ಳವನು (4)
12.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
13.ಪೆದ್ದ ಇಲ್ಲಿದ್ದಾನಲ್ಲಾ? (3)



5351ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಸರ್ವನಾಶ 5.ಸಹಾಯ 6.ವರ್ತಮಾನ 8.ಯಮಭಾರ 12.ಅಂತರಂಗ 14.ಅನುರಾಗ 15.ಬಿಕರಿ 16.ಸಭಾತ್ಯಾಗ

ಮೇಲಿಂದ ಕೆಳಕ್ಕೆ: 1.ಅಸಭ್ಯತನ 2.ಆಯವ್ಯಯ 3.ಸರೋವರ 4.ಶಮನ 7.ಮಾಫಿ 9.ಭಾರತ 10.ಉದಾಹರಿಸು 11.ಹೇನು 12.ಅಂಗರಾಗ 13.ಗಡಿಬಿಡಿ 14.ಅಗಸ

ಸುಡೊಕು 5738

8		2		4		1		5
			8		9		6	
9		6			7	2		4
			1	6				
	2			7	3	8		6
				8				
		8		9	2	5		1
1	9	5	7				4	
2		3		5	1	9		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5737ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜೂನ್ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಚತುರ್ದಶಿ ಗಂ. 09-12, ನಕ್ಷತ್ರ: ರೋಹಿಣಿ ಗಂ. 16-25 ಯೋಗ: ಶೂಲ 25-01 ಕರಣ: ಶಕುನಿ ಗಂ. 09-12, ಮಿಥುನ ಮಾಸದ 02 ನೇ ದಿನ, ಮಳೆನಕ್ಷತ್ರ: ಮೃಗಶಿರ 3. ರಾಹುಕಾಲ : ಬೆಳಿಗ್ಗೆ 09-00 – 10-30 ಸೂರ್ಯೋದಯ : 06-08 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 28 ಜುಲ್ಹಾಯದ್
ಅದೃಷ್ಟ ಸಂಖ್ಯೆ : 5, 8

ಮೇಷ: ಮಗಳಿಗೆ ಆತ್ಮೀಯರೊಬ್ಬರ ಸಹಾಯದಿಂದ ಉದ್ಯೋಗ ದೊರೆಯಲಿದೆ. ಅನಿರೀಕ್ಷಿತ ಪ್ರಯಾಣದಿಂದ ಖರ್ಚು- ವೆಚ್ಚಗಳು ಅಧಿಕವಾಗಲಿದೆ. ಸರ್ಕಾರಿ ಉದ್ಯೋಗಸ್ಥರು ಮುಂಬಡ್ತಿ ಹೊಂದಲು ಬೇಕಾದ ತಯಾರಿ ಮಾಡಿ.

ವೃಷಭ: ಶೀಘ್ರ ನಿರ್ದಿಷ್ಟ ಕಾರ್ಯ ಪೂರೈಸಲೇಬೇಕೆಂಬ ಯೋಚನೆಯು ಕನಸಾಗಿಯೇ ಉಳಿಯುವುದು. ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಉಂಟಾಗುವುದು.

ಮಿಥುನ: ರಾಜಕೀಯ ವ್ಯಕ್ತಿಗಳಿಗೆ ಈ ದಿನವಿಡೀ ಗೊಂದಲದ ವಾತಾವರಣ ಇರುವುದು. ಆಸ್ತಿ ವ್ಯವಹಾರಗಳನ್ನು ನೋಡಿಕೊಳ್ಳಲು ಸಹೋದರರ ಉತ್ತಮ ಸಹಕಾರ ದೊರೆಯುವುದು. ಆದಾಯದ ಮೂಲಗಳು ಗೋಚರಿಸಲಿದೆ.

ಕರ್ಕಾಟಕ: ನೀವು ಸೇವಿಸುವ ಆಹಾರದಿಂದ ಆರೋಗ್ಯ ಹದಗೆಡುವಂತಾಗಬಹುದು. ಮನರಂಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಮನಸ್ಸಿಗೆ ಸಂತೋಷ ಉಂಟಾಗುವುದು. ಜನರೊಂದಿಗೆ ಬೆರೆಯುವ ಅಭ್ಯಾಸ ಮಾಡಿಕೊಳ್ಳಿ.

ಸಿಂಹ: ಭೂಮಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸುವವರಿಗೆ ಶುಭ ದಿನವಾಗಲಿದೆ. ಸಹೋದ್ಯೋಗಿಗಳಿಂದ ಮಾರ್ಗದರ್ಶನ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಗೋ ಸೇವೆಯಿಂದ ಶುಭವಾಗುವುದು.

ಕನ್ಯಾ: ಮನೆಯವರೊಂದಿಗೆ ತೀರ್ಥಯಾತ್ರೆಗೆ ತೆರಳುವ ಬಗ್ಗೆ ಚರ್ಚೆ ನಡೆಸುವಿರಿ. ತಂದೆ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡಬೇಕಾಗಬಹುದು. ತಾಳ್ಮೆಯಿಂದ ಕೆಲಸನಿರ್ವಹಿಸಬೇಕಾಗುವುದು.

ತುಲಾ: ವೃತ್ತಿ ಕ್ಷೇತ್ರದಲ್ಲಿ ನಿಮ್ಮ ನಿಷ್ಠೆ, ಪ್ರಾಮಾಣಿಕತೆಗೆ ಗೌರವ ಆದರಗಳು ಸಿಗುವುದು. ಪಾಲುದಾರರೊಂದಿಗೆ ಮಾತುಕತೆ ನಡೆಸುವ ಅನಿವಾರ್ಯತೆ ಎದುರಾಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಚತುರ ನಡೆ ಇರಲಿ.

ವೃಶ್ಚಿಕ: ಈ ದಿನ ಉದ್ಯೋಗರಂಗದಲ್ಲಿ ಮೇಲಧಿಕಾರಿ ವರ್ಗದವರ ಕಿರಿಕಿರಿ ಇದ್ದರೂ ಪ್ರಯತ್ನಬಲಕ್ಕೆ ಯಶಸ್ಸು ಖಚಿತವಾಗಿ ದೊರಕಲಿದೆ. ಅಂತಿಮ ಕ್ಷಣಗಳಲ್ಲಿ ಪಶ್ಚಾತಾಪಪಡುವ ಬದಲು ಈಗಲೇ ಮುಂಜಾಗ್ರತೆ ಕ್ರಮ ಕೈಗೊಳ್ಳಿ.

ಧನು: ಶ್ರಮಜೀವಿಗಳಿಗೆ ಶ್ರಮಕ್ಕೆ ಮೀರಿದ ಪ್ರತಿಫಲ ಅನುಭವಕ್ಕೆ ಬರಲಿದೆ. ಸ್ವಾಮಿ ವೆಂಕಟೇಶನ ಒಲುಮೆಯಿಂದ ಕಷ್ಟಗಳು ಪರಿಹಾರವಾಗುವುದು. ಸಹೋದ್ಯೋಗಿಗಳೊಡನೆ ವಾದ- ವಿವಾದಗಳು ನಡೆಯದಂತೆ ವರ್ತಿಸಿ.

ಮಕರ: ಸಕ್ರಿಯ ಹಾಗೂ ಕಾರ್ಯಮಗ್ನತೆಯಿಂದ ಯೋಜನೆಗಳು ಮುಕ್ತಾಯ ಹಂತಕ್ಕೆ ತಲುಪುವುವು. ಕುಟುಂಬದಲ್ಲಿ ಅಥವಾ ಅಕ್ಕ ಪಕ್ಕದ ವ್ಯಕ್ತಿಗಳಲ್ಲಿ ಬಾಂಧವ್ಯ ವೃದ್ಧಿ. ತಂದೆ ತಾಯಿಯು ಕಷ್ಟಕಾರ್ಪಣ್ಯಗಳಿಗೆ ನೆರವಾಗಲಿದ್ದಾರೆ.

ಕುಂಭ: ಸರ್ಕಾರಿ ನೌಕರರಿಗೆ ಉದ್ಯೋಗದಲ್ಲಿ ಜುಗುಪ್ಸೆ ಬರುವಂತೆ ಆಗುವುದು. ಆಸ್ತಿ ಕೊಳ್ಳುವುದರಲ್ಲಾಗಲೀ ಮನೆ ಕಟ್ಟುವ ವಿಚಾರದಲ್ಲಾಗಲೀ ಅದೃಷ್ಟ ಪಾಲಿಗಿರುವುದು. ವಿಶೇಷ ಪೂಜೆ ನಡೆಸಲು ತಯಾರಿ ಮಾಡುವಿರಿ.

ಮೀನ: ಮನೆಯಲ್ಲಿ ನವ ಶಿಶುವಿನ ಆಗಮನದಿಂದ ಸಂಭ್ರಮ ಉಂಟಾಗುವುದು. ದೇಹದಲ್ಲಿ ವಾಯುಪೀಡೆಯು ಕಿರಿಕಿರಿ ಎನಿಸಲಿದೆ. ಬಿಡುವಿನೊಂದಿಗೆ ಮಡದಿ, ಮಕ್ಕಳೊಂದಿಗಿನ ಸಂತಸ ನಿಮ್ಮದಾಗಲಿದೆ.

ಫ್ಲಿಪ್‌ಕಾರ್ಟ್‌ನಿಂದ ಗ್ರಿಡ್ 5.0 ಸ್ಪರ್ಧೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಫ್ಲಿಪ್‌ಕಾರ್ಟ್ ಕಂಪನಿಯು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿ 'ಗ್ರಿಡ್ 5.0' ಸ್ಪರ್ಧೆಯನ್ನು ಆಯೋಜಿಸುತ್ತಿದ್ದು, ಇದರಲ್ಲಿ ಭಾಗವಹಿಸಿ ಜಯಗಳಿಸುವವರಿಗೆ ಫ್ಲಿಪ್‌ಕಾರ್ಟ್‌ನಲ್ಲಿ ತರಬೇತಿ ಪಡೆಯುವ, ಕಂಪನಿಯಲ್ಲಿ ಕೆಲಸ ಮಾಡುವ ಅವಕಾಶ ಸಿಗುವ ಸಾಧ್ಯತೆ ಇರುತ್ತದೆ.

2024, 2025, 2026 ಮತ್ತು 2027ನೆಯ ಬ್ಯಾಚ್‌ನ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಬಹುದು.

ಸಾಫ್ಟ್‌ವೇರ್ ಅಭಿವೃದ್ಧಿ, ಮಾಹಿತಿ ಭದ್ರತೆ, ರೊಬಿಟಿಕ್ಸ್ ಮತ್ತು ಹೆಲ್ತ್+ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ಇದರಲ್ಲಿ ಪಾಲ್ಗೊಳ್ಳುವವರು ಇ-ವಾಣಿಜ್ಯ ಉದ್ಯಮದ ಸಮಸ್ಯೆಗಳನ್ನು ಪರಿಹರಿಸುವ ಮಾದರಿಗಳನ್ನು ಪ್ರಸ್ತುತಪಡಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು https://unstop.com ವೆಬ್‌ಸೈಟ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು.

ಷೇರುಪೇಟೆ ವಹಿವಾಟು ▲ 467



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	18,688
ಇಂದಿನ ಅಂತ್ಯ	18,826
▲	138
ದಿನದ ಗರಿಷ್ಠ	18,864

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹326-505
ದ್ವಿತಳಿ (ಬಿ.ವಿ)	₹300-622

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹580
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹585

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1640)
ಸೋಯಾ (ರಿಫೈನ್ಡ್)	₹945 (915)
ಸೂರ್ಯಕಾಂತಿ (ರಿಫೈನ್ಡ್)	₹940 (915)
ಪಾಮೋಲಿನ್	₹860 (843)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)


ಅರಸೀಕೆರೆ	₹8300-8310
ಪುತ್ತೂರು	₹4500-7300
ತುರುವೇಕೆರೆ	₹8300-8800

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹128

₹1 ಲಕ್ಷ ಕೋಟಿ ವಹಿವಾಟು ಗುರಿ: ಬಾಬಾ ರಾಮದೇವ್


ಬಾಬಾ ರಾಮದೇವ್ (ಪಿಟಿಐ ಚಿತ್ರ)

ನವದೆಹಲಿ (ಪಿಟಿಐ): ಪತಂಜಲಿ ಸಮೂಹವು ಮುಂದಿನ ಐದು ವರ್ಷಗಳಲ್ಲಿ ₹1 ಲಕ್ಷ ಕೋಟಿ ವಹಿವಾಟು ನಡೆಸುವ ಗುರಿ ಹೊಂದಿದೆ ಎಂದು ಸಮೂಹದ ನೇತೃತ್ವ ವಹಿಸಿರುವ ಬಾಬಾ ರಾಮದೇವ್ ಶುಕ್ರವಾರ ಹೇಳಿದ್ದಾರೆ.

ಸಮೂಹಕ್ಕೆ ಸೇರಿದ ಪತಂಜಲಿ ಫುಡ್ಸ್ ಮುಂದಿನ ಐದು ವರ್ಷಗಳಲ್ಲಿ ₹45 ಸಾವಿರ ಕೋಟಿಯಿಂದ ₹50 ಸಾವಿರ ಕೋಟಿಯಷ್ಟು ವಹಿವಾಟು ನಡೆಸುವ ಗುರಿಯನ್ನು ಹೊಂದಿದೆ ಎಂದು ಅವರು ತಿಳಿಸಿದ್ದಾರೆ.

ನ್ಯೂಟ್ರಾಸ್ಯುಟಿಕಲ್ಸ್, ಆರೋಗ್ಯವರ್ಧಕ ಬಿಸ್ಕತ್ತುಗಳು, ಸಿರಿಧಾನ್ಯಗಳು ಹಾಗೂ ಡ್ರೈಫ್ರುಟ್ಸ್ ವಿಭಾಗದಲ್ಲಿ ಪತಂಜಲಿ ಫುಡ್ಸ್ ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ. 'ಪತಂಜಲಿ ಸಮೂಹವು ದೇಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಸವಾಲು ಒಡ್ಡುತ್ತಿದೆ. ನಾವು ಇಂದು ಯೂನಿಲಿವರ್ ಹೊರತುಪಡಿಸಿದರೆ ಇತರ ಎಲ್ಲ ಕಂಪನಿಗಳಿಗಿಂತ ಮುಂದಿದ್ದೇವೆ' ಎಂದು ಅವರು ಹೇಳಿದ್ದಾರೆ.

ಪ್ರವರ್ಧಮಾನಕ್ಕೆ ಬರುತ್ತಿರುವ ಮೇಲ್ಮಧ್ಯಮ ವರ್ಗದ ಗ್ರಾಹಕರನ್ನು ಪತಂಜಲಿ ಫುಡ್ಸ್ ಕಂಪನಿಯ ಪ್ರೀಮಿಯಂ ಉತ್ಪನ್ನಗಳ ಮೂಲಕ ತಲುಪಲು ಸಮೂಹವು ಯತ್ನಿಸುತ್ತಿದೆ. ಜಾಗತಿಕ ಮಟ್ಟದಲ್ಲಿಯೂ ಎಫ್‌ಎಂಸಿಜಿ ವಲಯದಲ್ಲಿ ಪ್ರಮುಖ ಕಂಪನಿಯಾಗುವ ದಿಕ್ಕಿನಲ್ಲಿ ಸಾಗಿದೆ. ಕಂಪನಿಯು ವಿವಿಧ ದೇಶಗಳ 200 ಕೋಟಿ ಜನರನ್ನು ತಲುಪುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಪತಂಜಲಿ ಫುಡ್ಸ್‌ನ ಈಗಿನ ವಹಿವಾಟು ಮೊತ್ತ ₹31 ಸಾವಿರ ಕೋಟಿ ಎಂದು ಕಂಪನಿಯ ಸಿಇಒ ಸಂಜೀವ್ ಆಸ್ಥಾನಾ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಗಳ ಗಳಿಕೆ, ವಿದೇಶಿ ಹೂಡಿಕೆ ಪ್ರಭಾವ

ಹೊಸ ಎತ್ತರಕ್ಕೆ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಪ್ರಮುಖ ಷೇರುಪೇಟೆಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಶುಕ್ರವಾರ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ. ಬ್ಯಾಂಕಿಂಗ್, ಹಣಕಾಸು ಮತ್ತು ಬಂಡವಾಳ ಸರಕುಗಳ ವಲಯದ ಷೇರುಗಳು ಉತ್ತಮ ಗಳಿಕೆ ಕಂಡುಕೊಂಡಿದ್ದು ಸಕಾರಾತ್ಮಕ ವಹಿವಾಟಿಗೆ ಉತ್ತೇಜನ ನೀಡಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಹೆಚ್ಚಳ ಮತ್ತು ವಿದೇಶಿ ಬಂಡವಾಳ ಒಳಹರಿವು ಮುಂದುವರಿದಿರುವುದು ಸಹ ವಹಿವಾಟಿನ ಮೇಲೆ ಪ್ರಭಾವ ಬೀರಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 467 ಅಂಶ ಏರಿಕೆ ಕಂಡು 63,384 ಅಂಶಗಳಿಗೆ ತಲುಪುವ ಮೂಲಕ ದಾಖಲೆಯ ಮಟ್ಟದಲ್ಲಿ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ಒಂದು ಹಂತದಲ್ಲಿ 602 ಅಂಶ ಹೆಚ್ಚಾಗಿ 63,520 ಅಂಶಗಳಿಗೂ ಏರಿತ್ತು. ಈ ಹಿಂದೆ 2022ರ ಡಿಸೆಂಬರ್ 1ರಂದು ಸೆನ್ಸೆಕ್ಸ್ 63,284 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿದ್ದು, ಇದುವರೆಗಿನ ಗರಿಷ್ಠ ಮಟ್ಟವಾಗಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 138 ಅಂಶ ಹೆಚ್ಚಾಗಿ ದಾಖಲೆಯ 18,826 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ಈ ಹಿಂದಿನ ಗರಿಷ್ಠ ಮಟ್ಟ 18,812 ಅಂಶ.

ಬ್ಯಾಂಕಿಂಗ್, ಹಣಕಾಸು ವಲಯದ ಚೇತರಿಕೆಯ ಜೊತೆಗೆ ಎಫ್‌ಎಂಸಿಜಿ, ಔಷಧ ಮತ್ತು ಇಂಧನ ವಲಯದ ಕಂಪನಿಗಳ ಷೇರುಗಳು ಉತ್ತಮ ಖರೀದಿ ವಹಿವಾಟಿಗೆ ಒಳಗಾದವು. ಮಿಡ್ ಮತ್ತು ಸ್ಮಾಲ್ ಕ್ಯಾಪ್‌ನಲ್ಲಿ ಮುಂದುವರಿದ ಖರೀದಿಯು ಸಹ ಸಕಾರಾತ್ಮಕ ವಹಿವಾಟಿಗೆ ಉತ್ತೇಜನ ನೀಡಿತು ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಡಿಎಫ್‌ಸಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳನ್ನು ಹೂಡಿಕೆದಾರರು ಖರೀದಿಸಿದ್ದು ಸಹ ಪ್ರಭಾವ ಬೀರಿತು.

ವಲಯವಾರು ಗಳಿಕೆ: ಹಣಕಾಸು ಸೇವೆಗಳು (ಶೇ 1.21), ಬ್ಯಾಂಕಿಂಗ್ (ಶೇ 1.03), ಬಂಡವಾಳ ಸರಕುಗಳು (ಶೇ 1.02), ಇಂಡಸ್ಟ್ರೀಸ್ (ಶೇ 0.91), ಎಫ್‌ಎಂಸಿಜಿ (ಶೇ 0.80) ಏರಿಕೆ ಕಂಡಿದೆ.

ಬ್ರೆಂಟ್ ತೈಲ ದರ ಶೇ 0.62ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 75.20 ಡಾಲರ್‌ಗೆ ತಲುಪಿತು.

ಜಾಗತಿಕ ಮಟ್ಟದಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಕಾಂಗ್ ಷೇರುಪೇಟೆಗಳು ಗಳಿಕೆ ಕಂಡುಕೊಂಡಿವೆ. ಯುರೋಪಿನ ಮಾರುಕಟ್ಟೆಗಳಲ್ಲಿಯೂ ವಹಿವಾಟು ಏರುಮುಖವಾಗಿದೆ.

ಚೇತರಿಕೆಗೆ ಕಾರಣ ಹಲವು: ಬ್ಯಾಂಕಿಂಗ್, ಔಷಧ ಮತ್ತು ಗ್ರಾಹಕ ಬಳಕೆ ವಸ್ತುಗಳಿಗೆ ಸಂಬಂಧಿಸಿದ ಷೇರುಗಳನ್ನು ಹೂಡಿಕೆದಾರರು ಹೆಚ್ಚಾಗಿ ಖರೀದಿಸಿದ್ದರಿಂದ ದೇಶಿ ಷೇರುಪೇಟೆಯು ಚೇತರಿಸಿಕೊಂಡಿತು. ಅಮೆರಿಕದಲ್ಲಿ ರಿಟೇಲ್ ಮಾರಾಟವು ನಿರೀಕ್ಷೆಗಿಂತಲೂ ಉತ್ತಮ ಆಗಿರುವುದು ಅಮೆರಿಕದ ಮಾರುಕಟ್ಟೆಯಲ್ಲಿ ಆಶಾವಾದ ಮೂಡಿಸಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹೂಡಿಕೆದಾರರಿಗೆ ಸಂತೋಷ ಆಗಿರುವುದರಿಂದ ಸೆನ್ಸೆಕ್ಸ್‌ನಲ್ಲಿ 'ಗೂಳಿ'ಯು ಸಂಭ್ರಮದ ಸ್ಥಿತಿಯಲ್ಲಿ ಇದೆ. ಅಮೆರಿಕದ ಫೆಡರಲ್ ರಿಸರ್ವ್, ಬಡ್ಡಿದರ ಹೆಚ್ಚಳ ಮಾಡದೇ ಇರುವುದರ ಜೊತೆಗೆ ಜಾಗತಿಕ ಷೇರುಪೇಟೆಗಳಲ್ಲಿ ನಡೆದ ಸಕಾರಾತ್ಮಕ ವಹಿವಾಟು ಸಹ ಸೂಚ್ಯಂಕಗಳ ಏರಿಕೆಗೆ ಕಾರಣವಾಯಿತು ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಹೆಚ್ಚಿನ ಪ್ರಮಾಣದಲ್ಲಿ ಷೇರುಗಳನ್ನು ಖರೀದಿಸಿದ್ದು ಹಾಗೂ ಎಸ್ ಆ್ಯಂಡ್ ಪಿ 500 ಇಂಡೆಕ್ಸ್ ಮತ್ತು ನಾಸ್ಡಾಕ್ ಕಂಪೋಸಿಟ್ 14 ತಿಂಗಳ ಗರಿಷ್ಠ ಮಟ್ಟದತ್ತ ಸಾಗಿದ್ದು ಸಹ ವಹಿವಾಟಿನ ಏರಿಕೆಗೆ ಪೂರಕವಾಗಿತ್ತು ಎಂದು ಅವರು ತಿಳಿಸಿದ್ದಾರೆ.

ವಾರದ ವಹಿವಾಟು

759 ಅಂಶ ಸೆನ್ಸೆಕ್ಸ್ ಏರಿಕೆ

263 ಅಂಶ ನಿಫ್ಟಿ ಏರಿಕೆ



ಮುಖ್ಯಾಂಶಗಳು

- ಶೇ 2.21ರಷ್ಟು ಗಳಿಕೆ ಕಂಡ ಬಜಾಜ್ ಫಿನ್ ಸರ್ವ್ ಷೇರು
- ಐ.ಟಿ., ರಿಯಾಲ್ಟಿ, ಟೆಕ್ ಕಂಪನಿಗಳಿಗೆ ನಷ್ಟ

ದಾಖಲೆ ಮಟ್ಟಕ್ಕೆ ಬಿಎಸ್‌ಇ ಮೌಲ್ಯ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯ ಮಾರುಕಟ್ಟೆ ಬಂಡವಾಳ ಮೌಲ್ಯವು ಶುಕ್ರವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ.

ಷೇರುಪೇಟೆಯಲ್ಲಿ ನಡೆದ ಸಕಾರಾತ್ಮಕ ವಹಿವಾಟಿನಿಂದ ಹೂಡಿಕೆದಾರರ ಸಂಪತ್ತು ಮೌಲ್ಯ ಶುಕ್ರವಾರ ₹2 ಲಕ್ಷ ಕೋಟಿಯಷ್ಟು ಏರಿಕೆ ಕಂಡಿತು. ಇದರೊಂದಿಗೆ ಮಾರುಕಟ್ಟೆ ಮೌಲ್ಯವು ₹292 ಲಕ್ಷ ಕೋಟಿಗೆ ತಲುಪಿತು. ಇದು ಮುಂಬೈ ಷೇರುಪೇಟೆಯ ಸಾರ್ವಕಾಲಿಕ ಗರಿಷ್ಠ ಮಟ್ಟ.

ಈ ಹಿಂದೆ, 2022ರ ಡಿಸೆಂಬರ್ 14ರಂದು ಮಾರುಕಟ್ಟೆ ಮೌಲ್ಯವು ₹291.25 ಲಕ್ಷ ಕೋಟಿಗೆ ತಲುಪಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	480
ಏಲಕ್ಕಿ ಧಾರಣೆ ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40500
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಕುಮಟಾ	
ಚಿಪ್ಪು	29899-33009
ಕೋಕ	21509-32899
ಹಳೆಚಾಲಿ	36899-39409
ಹೊಸಚಾಲಿ	36599-39039
ಪುತ್ತೂರು	
ಕೋಕ	11000-25000
ಹೊಸತು	33500-40500
ಶಿವಮೊಗ್ಗ	
ಬೆಟ್ಟೆ	46100-54599
ಗೊರಬಲು	30469-39600
ರಾಶಿ	40009-52851
ಸರಕು	54119-79009
ಸಿದ್ದಾಪುರ	
ಬಿಳಿಗೋಟು	30889-33699
ಚಾಲಿ	36529-39377
ಕೋಕ	28399-32899
ಕೆಂಪುಗೋಟು	30869-33889
ರಾಶಿ	45849-50223
ತಟ್ಟಿಬೆಟ್ಟೆ	39869-49009
ಶಿರಸಿ	
ಬೆಟ್ಟೆ	41809-48899
ಬಿಳಿಗೋಟು	25666-33401
ಚಾಲಿ	36309-40168
ಕೆಂಪುಗೋಟು	26099-36769
ರಾಶಿ	46160-50509
ಯಲ್ಲಾಪುರ	
ಬಿಳಿಗೋಟು	26899-35419
ಚಾಲಿ	35499-39390
ಕೋಕ	18019-33012
ಕೆಂಪುಗೋಟು	28899-35300
ರಾಶಿ	42179-53800
ತಟ್ಟಿಬೆಟ್ಟೆ	38370-47869

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15300	15350	15325	187 ಸೆಂಟ್ಸ್
ಎಸಿ	7980	8100	7700	
ಆರ್‌ಪಿ	10800	10900	10850	ಲಂಡನ್
ಆರ್‌ಸಿ	6360	252on OT	6225	2804ಡಾಲರ್ಸ್

ಮೂಡಿಸ್ ರೇಟಿಂಗ್ ಮೇಲ್ದರ್ಜೆಗೆ ಕೇಂದ್ರ ಯತ್ನ

ನವದೆಹಲಿ (ಪಿಟಿಐ): ಮೂಡಿಸ್ ಇನ್ವೆಸ್ಟರ್ಸ್ ಸರ್ವಿಸಸ್ ಸಂಸ್ಥೆಯು ಭಾರತಕ್ಕೆ ನೀಡಿರುವ ರೇಟಿಂಗ್‌ಅನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ಕೇಂದ್ರ ಸರ್ಕಾರವು ಸಂಸ್ಥೆಯ ಅಧಿಕಾರಿಗಳ ಮನವೊಲಿಸುವ ಯತ್ನ ನಡೆಸಿದೆ ಎಂದು ಮೂಲಗಳು ಹೇಳಿವೆ.

ಮೂಡಿಸ್ ರೇಟಿಂಗ್‌ನ ವಾರ್ಷಿಕ ಪರಿಶೀಲನೆ ಶೀಘ್ರವೇ ನಡೆಯಲಿದೆ. ಇದಕ್ಕೆ ಮೊದಲು ಮೂಡಿಸ್ ಪ್ರತಿನಿಧಿಗಳು ಕೇಂದ್ರ ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ. ದೇಶದ ರೇಟಿಂಗ್ ಮೇಲ್ದರ್ಜೆಗೆ ಬಂದರೆ, ದೇಶಕ್ಕೆ ಕಡಿಮೆ ಬಡ್ಡಿ ದರಕ್ಕೆ ಸಾಲ ಸಿಗುತ್ತದೆ.

'ದೇಶದ ಅರ್ಥ ವ್ಯವಸ್ಥೆಯ ಶಕ್ತಿಯನ್ನು ಮೂಡಿಸ್ ಪ್ರತಿನಿಧಿಗಳು ಒಪ್ಪಿಕೊಂಡಿದ್ದಾರೆ. ನಮ್ಮ ರೇಟಿಂಗ್ ಮೇಲ್ದರ್ಜೆಗೆ ಏರಿಕೆ ಆಗುತ್ತದೆ ಎಂಬ ನಿರೀಕ್ಷೆ ಇದೆ' ಎಂದು ಅಧಿಕಾರಿಯೊಬ್ಬರು ಭೇಟಿಯ ನಂತರ ತಿಳಿಸಿದ್ದಾರೆ. ಮೂಡಿಸ್ ಸಂಸ್ಥೆಯು ಭಾರತಕ್ಕೆ 'ಬಿಎಎ3' ರೇಟಿಂಗ್ ನೀಡಿದೆ. ಇದು ಹೂಡಿಕೆ ದರ್ಜೆಯಲ್ಲಿ ಅತ್ಯಂತ ಕಡಿಮೆ ಮಟ್ಟದ ರೇಟಿಂಗ್.

ಮುಂಬೈ ಧಾರಣೆ

ಶೇಂಗಾ

16-6-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690(1650)
ಒಂದು ವಾರದ ಡೆಲಿವರಿ	1685(1645)
ಸೋಯಾ ಕಚ್ಚಾ	900(870)
ಪಾಮ್ ವಾರದ ಡೆಲಿವರಿ	858(841)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(820)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59,250 (58,850)

ಬೆಳ್ಳಿ ಕೆ.ಜಿ 72,350 (71,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

₹150 ಕೋಟಿ ಅಕ್ರಮ!

ಒಂದನೇ ಪುಟದಿಂದ...

ಈ ವ್ಯಾಪ್ತಿಯಲ್ಲಿ 2014-15, 2015-16, 2016-17 ಮತ್ತು 2017-18ನೇ ಸಾಲಿನ 45 ತಿಂಗಳಲ್ಲಿ ₹196,71,58,052 ಮೊತ್ತದ ಡಿ.ಸಿ. ಬಿಲ್‌ಗಳನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಶೇ 80ರಷ್ಟು ಹಣವನ್ನು ತುರ್ತು ಕಾಮಗಾರಿಗಳಿಗೆ ವೆಚ್ಚ ಮಾಡಲಾಗಿದ್ದು, ಇದರಲ್ಲಿ ಕಾಮಗಾರಿ ನಡೆಸದೇ ಬಿಲ್ ಪಾವತಿಸಿರುವ ಸಾಧ್ಯತೆ ಇದೆ ಎಂಬ ಅನುಮಾನ ವ್ಯಕ್ತವಾಗಿದೆ.

ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಡಿ.ಸಿ. ಬಿಲ್‌ಗಳ ಹೆಸರಿನಲ್ಲಿ ನೂರಾರು ಕೋಟಿ ರೂಪಾಯಿಗಳಷ್ಟು ಸಾರ್ವಜನಿಕ ಹಣವನ್ನು ಲೂಟಿ ಮಾಡುವ ಮೂಲಕ ಬಿಬಿಎಂಪಿಗೆ ವಂಚನೆ, ನಕಲಿ ದಾಖಲೆ ತಯಾರಿಕೆ, ನಂಬಿಕೆ ದ್ರೋಹ, ಅಧಿಕಾರ ದುರುಪಯೋಗ, ಭ್ರಷ್ಟಾಚಾರದ ಪ್ರಕರಣಗಳು 16 ಎಂಜಿನಿಯರ್‌ಗಳ ಮೇಲೆ ದಾಖಲಿಸಬೇಕೆಂದು ಅರ್ಜಿದಾರರು ಕೋರಿದ್ದರು.

ನಗರಾಭಿವೃದ್ಧಿ ಉಪ ಕಾರ್ಯದರ್ಶಿ-3 ಹಾಗೂ ಮುಖ್ಯ ಜಾಗೃತ ಅಧಿಕಾರಿಗಳು ಪ್ರಾಥಮಿಕ ವಿಚಾರಣೆ ನಡೆಸಿದಾಗ 2014ರಿಂದ 2018ರವರೆಗೆ ಆರ್.ಆರ್. ನಗರ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳು ಕಂಟಿಂಜೆನ್ಸಿ ವೆಚ್ಚಗಳಿಗೆ ನಿಗದಿಯಾಗಿರುವ ₹7.77 ಕೋಟಿಯನ್ನು ಡಿ.ಸಿ. ಬಿಲ್‌ಗಳ ಮೂಲಕ ಆಯುಕ್ತರ ಅನುಮತಿ ಇಲ್ಲದೆ ಪಾವತಿಸಿರುವುದು ಕಂಡುಬಂದಿದೆ. ಹೀಗಾಗಿ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ದೃಢೀಕರಿಸಿ ವಿಚಾರಣೆಗೆ ನೀಡಬೇಕು ಎಂದು ಮೇ 17ರಂದು ಜಂಟಿ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಈ ಪತ್ರವನ್ನು ಉಲ್ಲೇಖಿಸಿ, ರಾಜರಾಜೇಶ್ವರಿ ನಗರ ವಲಯದ ಮುಖ್ಯ ಎಂಜಿನಿಯರ್ ಅವರು ಕೆಂಗೇರಿ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರಿಗೆ ಜೂನ್ 9ರಂದು ಟಿಪ್ಪಣಿ ಬರೆದು, ದೃಢೀಕೃತ ದಾಖಲೆ ಸಲ್ಲಿಸಲು ಸೂಚಿಸಿದ್ದಾರೆ.

ಯಾವ ಕಾಮಗಾರಿಗಳಿಗೆ ಡಿ.ಸಿ. ಬಿಲ್?

- ಟ್ಯಾಂಕರ್ ಮೂಲಕ ನೀರು ಸರಬರಾಜು
- ರಸ್ತೆ ವಿಭಜಕಗಳಿಗೆ ಬಣ್ಣ ಬಳಿಯುವುದು
- ರಸ್ತೆ ಬದಿಯ ಮಣ್ಣು ತೆಗೆಯುವುದು
- ಚರಂಡಿಗಳಲ್ಲಿ ಹೂಳು ತೆಗೆಯುವುದು
- ಮರಗಳನ್ನು ತೆರವುಗೊಳಿಸುವುದು
- ದೂರವಾಣಿ ಬಿಲ್ಲುಗಳು
- ಸಸಿಗಳನ್ನು ನೆಡುವುದು
- ಉದ್ಯಾನಗಳನ್ನು ಅಭಿವೃದ್ಧಿಪಡಿಸುವುದು ಇತ್ಯಾದಿ...

'ಉತ್ತಮ ಭಾರತಕ್ಕಾಗಿ ಬುನಾದಿ' ಅಭಿಯಾನ

ನವದೆಹಲಿ (ಪಿಟಿಐ): 'ಬೆಂಗಳೂರಿನಲ್ಲಿ ಜುಲೈ 10ರಿಂದ 12ರವರೆಗೆ ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಶುಕ್ರವಾರ ಇಲ್ಲಿ ತಿಳಿಸಿದರು.

'ದೇಶದ ವಿವಿಧೆಡೆಯಿಂದ ಸಂಘಟನೆಯ 3 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ' ಎಂದು ಅವರು ಇಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಮೋದಿ ನೇತೃತ್ವದ ಸರ್ಕಾರ ದೇಶದ ಜನರಿಗೆ ಹಲವು ಭರವಸೆ ನೀಡಿದೆ. ಆದರೂ ಜನರು ತೊಂದರೆಯಲ್ಲಿದ್ದಾರೆ. ಆದ್ದರಿಂದ ಯುವ ಕಾಂಗ್ರೆಸ್ ದೇಶದಾದ್ಯಂತ 'ಉತ್ತಮ ಭಾರತಕ್ಕಾಗಿ ಬುನಾದಿ' ಅಭಿಯಾನವನ್ನು ದೊಡ್ಡ ಪ್ರಮಾಣದಲ್ಲಿ ನಡೆಸಲಿದೆ' ಎಂದರು.

ಯುವ ಕಾಂಗ್ರೆಸ್ ಉಸ್ತುವಾರಿ ಕೃಷ್ಣ ಅಲ್ಲವರು ಮಾತನಾಡಿ 'ಅಭಿಯಾನದ ಮೂಲಕ ನಾವು ದೇಶದ ಯುವಕರ ಮನದ ಮಾತು ಆಲಿಸುತ್ತೇವೆ. ಅವರನ್ನು ಅರ್ಥೈಸಿಕೊಂಡು ಉತ್ತಮ ಭಾರತದ ಬುನಾದಿಗಾಗಿ ಕೆಲಸ ಮಾಡುತ್ತೇವೆ. ಕಾಂಗ್ರೆಸ್‌ನ ವರಿಷ್ಠರು ಇದರಲ್ಲಿ ಭಾಗಿಯಾಗುತ್ತಾರೆ' ಎಂದರು.

ಸದ್ಭಾವನಾ ರಾಯಭಾರಿಯಾಗಿ ಡಾ.ರಿಕಿಕೇಜ್



ಬೆಂಗಳೂರು: ವಿಶ್ವಸಂಸ್ಥೆಯ ಕಾಂಬ್ಯಾಟ್ ಡಿಸರ್ಟಿಫಿಕೇಷನ್ ಸಮಾವೇಶದ (ಯುಎನ್‌ಸಿಸಿಡಿ) ಜಾಗತಿಕ ಸದ್ಭಾವನಾ ರಾಯಭಾರಿಯಾಗಿ ಡಾ.ರಿಕಿ ಕೇಜ್ ನೇಮಕಗೊಂಡಿದ್ದಾರೆ.

ಯುಎನ್‌ಸಿಸಿಡಿಯ ಮುಖ್ಯಸ್ಥ ಇಬ್ರಾಹಿಂ ಥಿಯಾವ್ ಅವರು ಇತ್ತೀಚೆಗೆ ನ್ಯೂಯಾರ್ಕ್‌ನಲ್ಲಿ ಇವರ ನೇಮಕವನ್ನು ಪ್ರಕಟಿಸಿದರು. ಪರಿಸರ ರಕ್ಷಣೆ, ಸಂಗೀತ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾರೆ. 4 ವರ್ಷಗಳಿಂದ ಯುಎನ್‌ಸಿಸಿಡಿ ಜೊತೆ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ #HerLand campaign ಅಭಿಯಾನ ಆರಂಭಿಸಿದ್ದಾರೆ.

'ಯುರೋಪಿಯನ್ ಎಸ್ಸೇ' ಪ್ರಶಸ್ತಿಗೆ ಅರುಂಧತಿ ರಾಯ್



ನವದೆಹಲಿ (ಪಿಟಿಐ): ಬೂಕರ್ ಪ್ರಶಸ್ತಿ ವಿಜೇತರಾದ ಲೇಖಕಿ ಅರುಂಧತಿ ರಾಯ್ ಅವರಿಗೆ ಜೀವಮಾನ ಶ್ರೇಷ್ಠ ಸಾಧನೆಗಾಗಿ 45ನೇ 'ಯುರೋಪಿಯನ್ ಎಸ್ಸೇ ಪ್ರೈಜ್' ನೀಡಲಾಗುತ್ತದೆ ಎಂದು ಚಾರ್ಲ್ಸ್ ವೈಲನ್ ಫೌಂಡೇಷನ್ ಪ್ರಕಟಿಸಿದೆ. 'ಆಜಾದಿ' (2021) ಎಂಬ ಶೀರ್ಷಿಕೆಯ ಪ್ರಬಂಧಗಳ ಸಂಕಲನದ ಫ್ರೆಂಚ್ ಅನುವಾದಕ್ಕಾಗಿ ರಾಯ್ ಅವರಿಗೆ ಈ ಪ್ರಶಸ್ತಿ ನೀಡಲಾಗುವುದು ಎಂದು ಫೌಂಡೇಷನ್ ತಿಳಿಸಿದೆ.

2.58 ಲಕ್ಷ ಹುದ್ದೆ ಖಾಲಿ

ಒಂದನೇ ಪುಟದಿಂದ...

'ಸಿಬ್ಬಂದಿ ಕೊರತೆಯ ಕಾರಣ ಬಹುತೇಕ ಇಲಾಖೆಗಳಲ್ಲಿ ಕೆಲಸದ ಕಾರ್ಯಕ್ಷಮತೆ, ದಕ್ಷತೆ ಕ್ಷೀಣಿಸಿದೆ. ಸಕಾಲದಲ್ಲಿ ಸಾರ್ವಜನಿಕರಿಗೆ ಸೇವೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಶಿಕ್ಷಣ, ಆರೋಗ್ಯದಂತಹ ಸೇವಾ ಆಧಾರಿತ ವಲಯದಲ್ಲಿ ಈ ಕೊರತೆ ಗಣನೀಯ ಸಮಸ್ಯೆಗಳನ್ನು ಸೃಷ್ಟಿಸಿದೆ' ಎಂಬ ವಿಶ್ಲೇಷಣೆಯನ್ನು ಆಡಳಿತ ತಜ್ಞರು ಮಾಡಿದ್ದಾರೆ.

'2006ರ ನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ಜಾರಿಗೊಳಿಸಿದ ಜನಪ್ರಿಯ ಯೋಜನೆಗಳಿಗಾಗಿಯೇ ಸರ್ಕಾರಗಳು ಸಾಕಷ್ಟು ಹಣ ಖರ್ಚು ಮಾಡುತ್ತಿವೆ. ಅದಕ್ಕಾಗಿ ಸರಿ ಸುಮಾರು ₹ 1 ಲಕ್ಷ ಕೋಟಿ ಖರ್ಚಾಗುತ್ತಿದೆ. ಇದರ ಜತೆಗೆ ಸಾಮಾನ್ಯ ಮತ್ತು ಆರ್ಥಿಕ ಸೇವೆಗಳ ವೆಚ್ಚವೂ ಹೆಚ್ಚಾಗುತ್ತಿದೆ. ಹೀಗೆ, ರಾಜ್ಯ ಸರ್ಕಾರ 2022-23ನೇ ಸಾಲಿನಲ್ಲಿ ಮಾಡಿರುವ ಒಟ್ಟು ವೆಚ್ಚ ₹ 2.67 ಲಕ್ಷ ಕೋಟಿಯಾಗಿತ್ತು. 2023-24ನೇ ಸಾಲಿನ ವೆಚ್ಚವನ್ನು ₹ 2.79 ಲಕ್ಷ ಕೋಟಿ ಎಂದು ಅಂದಾಜಿಸಲಾಗಿದೆ. 'ಗ್ಯಾರಂಟಿ' ಯೋಜನೆಗಳ ಅನುಷ್ಠಾನದಿಂದ ಈ ಮೊತ್ತ ಇನ್ನೂ ₹ 50 ಸಾವಿರ ಕೋಟಿ ಹೆಚ್ಚಳವಾಗುವ ಸಾಧ್ಯತೆ ಇದೆ' ಎನ್ನುವುದು ರಾಜ್ಯ ಹಣಕಾಸು ತಜ್ಞರ ವಿಶ್ಲೇಷಣೆ.

'ವೆಚ್ಚದಾಯಕ ಆರ್ಥಿಕ ಸವಾಲುಗಳ ಮಧ್ಯೆಯೂ ಸೇವಾಧಾರಿತ ಕಾರ್ಯಗಳು, ಆದಾಯ ಸಂಗ್ರಹದಂತಹ ಸರ್ಕಾರಿ ಕಾರ್ಯಗಳಿಗೆ ಅಗತ್ಯ ಸಿಬ್ಬಂದಿ ನಿಯೋಜನೆಯೂ ಅನಿವಾರ್ಯ. ನೇಮಕಾತಿಗಳ ವಿಳಂಬದ ಕಾರಣ ಬಹಳಷ್ಟು ಪ್ರತಿಭಾವಂತರು ಖಾಸಗಿ ಕ್ಷೇತ್ರಗಳತ್ತ ಸಾಗಿದ್ದಾರೆ. ಸರ್ಕಾರಿ ಹುದ್ದೆಗಳಿಗೆ ಪ್ರತಿಭಾವಂತರನ್ನು ಆಕರ್ಷಿಸಲು, ನಿರುದ್ಯೋಗ ಸಮಸ್ಯೆ ನಿವಾರಿಸಲು, ವಯೋಮಿತಿ ಮೀರುವ ವಿದ್ಯಾವಂತರಿಗೆ ಸೂಕ್ತ ನ್ಯಾಯ ಒದಗಿಸಲು ಸರ್ಕಾರ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಕಾಲಮಿತಿಯ ಒಳಗೆ ನೇಮಕಾತಿ ಪ್ರಕ್ರಿಯೆಗಳನ್ನು ಆರಂಭಿಸಬೇಕು' ಎನ್ನುತ್ತಾರೆ ಸ್ಪರ್ಧಾ ಪರೀಕ್ಷೆಗಳಿಗಾಗಿ ಸಿದ್ಧತೆ ನಡೆಸಿರುವ ಉದ್ಯೋಗಾಕಾಂಕ್ಷಿ ಸೋಮನಾಥ್.



ಕಡತಗಳ ವಿಲೇವಾರಿಗೆ ಹಲವು ಹಂತಗಳಿವೆ. 3 ಅಥವಾ 4ಕ್ಕೆ ಮಿತಿಗೊಳಿಸಬೇಕು. ಮರು ಹೊಂದಾಣಿಕೆಯ ನಂತರ ಅಗತ್ಯ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು

ಟಿ.ಎಂ.ವಿಜಯಭಾಸ್ಕರ್, ಅಧ್ಯಕ್ಷ, ರಾಜ್ಯದ ಎರಡನೇ ಆಡಳಿತ ಸುಧಾರಣಾ ಆಯೋಗ



ಸಿಬ್ಬಂದಿ ಕೊರತೆಯ ಮಧ್ಯೆಯೂ ಅಭಿವೃದ್ಧಿಯಲ್ಲಿ ರಾಜ್ಯ 6ನೇ ಸ್ಥಾನದಲ್ಲಿದೆ. ಎಲ್ಲ ಹುದ್ದೆಗಳನ್ನು ಭರ್ತಿ ಮಾಡಿದರೆ ಸದಾ ಮೊದಲ ಸ್ಥಾನದಲ್ಲಿರಲಿದೆ

ಸಿ.ಎಸ್.ಷಡಾಕ್ಷರಿ, ಅಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ.

ಅನಗತ್ಯ ಹುದ್ದೆಗಳ ಮರು ಹೊಂದಾಣಿಕೆ

ಕೆಲ ಇಲಾಖೆಗಳಲ್ಲಿ ಕೆಲಸ ಇಲ್ಲದಿದ್ದರೂ ಅನಗತ್ಯ ಹುದ್ದೆಗಳಿವೆ. ಅಧಿಕಾರಿ, ಸಿಬ್ಬಂದಿ ಇದ್ದಾರೆ. ಅಂತಹ ಇಲಾಖೆಗಳಿಂದ ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ಕಂದಾಯದಂತಹ ಸೇವಾ ಇಲಾಖೆಗಳಿಗೆ ಸ್ಥಳಾಂತರಿಸಬೇಕು. ಕೆಲ ಇಲಾಖೆಗಳನ್ನು ವಿಲೀನಗೊಳಿಸಬೇಕು. ಹಾಗೆ ಮಾಡಿದಾಗ ಮಾತ್ರ ಆಡಳಿತಾತ್ಮಕವಾಗಿ ಜನರು ಅನುಭವಿಸುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ. ಅನಗತ್ಯ ಆರ್ಥಿಕ ಹೊರೆಯೂ ಕಡಿಮೆಯಾಗುತ್ತದೆ. ಇದರಿಂದ ಅಧಿಕ ಹಣದ ಉಳಿತಾಯವಾಗುತ್ತದೆ ಎಂದು ಡಾ.ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯ 2ನೇ ರಾಜ್ಯ ಆಡಳಿತ ಸುಧಾರಣಾ ಆಯೋಗ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಇಲಾಖೆಗಳು, ನಿಗಮ, ಮಂಡಳಿಗಳಲ್ಲೂ ಅನುಪಯುಕ್ತ ಹುದ್ದೆಗಳು, ವೆಚ್ಚಗಳಿಗೆ ಕಡಿವಾಣಹಾಕಬೇಕು. ಅದಕ್ಕಾಗಿ ಕಾರ್ಯಪಡೆ ರಚಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

62ನೇ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್; ರಿಲೇಯಲ್ಲಿ ಕರ್ನಾಟಕ ತಂಡಕ್ಕೆ ಕಂಚು

ಗಮನ ಸೆಳೆದ ಅಂಜಲಿ ಸಾಧನೆ

ಭುವನೇಶ್ವರ (ಪಿಟಿಐ): ಗಾಯಕ್ಕಾಗಿ ಸುಮಾರು ನಾಲ್ಕು ವರ್ಷ ಟ್ರ್ಯಾಕ್‌ನಿಂದ ದೂರವಿದ್ದ ಹರಿಯಾಣದ ಅಂಜಲಿ ದೇವಿ, ಪುನರಾಗಮನದ ಕೂಟದಲ್ಲೇ ಶ್ರೇಷ್ಠ ಸಾಧನೆ ಮೆರೆದರು. ಕಳಿಂಗ ಕ್ರೀಡಾಂಗಣದಲ್ಲಿ 62ನೇ ಅಂತರ ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಶುಕ್ರವಾರ 400 ಮೀ. ಚಿನ್ನ ಗೆಲ್ಲುವ ಹಾದಿಯಲ್ಲಿ ವೈಯಕ್ತಿಕ ಶ್ರೇಷ್ಠ ಕಾಲಾವಧಿ ದಾಖಲಿಸಿ, ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದರು.

24 ವರ್ಷದ ಅಂಜಲಿ ಫೈನಲ್‌ನಲ್ಲಿ ಈ ಓಟವನ್ನು 51.48 ಸೆಕೆಂಡುಗಳಲ್ಲಿ ಪೂರೈಸಿ, ತಮ್ಮದೇ ರಾಜ್ಯದ ಉದಯೋನ್ಮುಖ ಓಟಗಾರ್ತಿ ಹಿಮಾನ್ಶಿ ಮಲಿಕ್ ಅವರನ್ನು (51.76 ಸೆ.) ಹಿಂದಿಕ್ಕಿ ಹಾಕಿ ಚಿನ್ನದ ಪದಕಕ್ಕೆ ಒಡೆಯರಾದರು. ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆಯಲು ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿ ಮಾಡಿದ್ದ ಕಾಲ 52.96 ಸೆ.ಗಳಾಗಿತ್ತು.

21 ವರ್ಷದ ಹಿಮಾನ್ಶಿ ಮತ್ತು ಕಂಚಿನ ಪದಕ ಪಡೆದ ತಮಿಳುನಾಡಿನ ಆರ್.ವಿದ್ಯಾ ರಾಮರಾಜ್ (52.49 ಸೆ) ಮತ್ತು ನಾಲ್ಕನೇ ಸ್ಥಾನ ಪಡೆದ ಮಹಾರಾಷ್ಟ್ರದ ಐಶ್ವರ್ಯ ಕೈಲಾಶ್ ಮಿಶ್ರಾ (52.79) ಕೂಡ ಏಷ್ಯನ್ ಗೇಮ್ಸ್ ಅರ್ಹತಾ ಅವಧಿಯೊಳಗೇ ಗುರಿಮುಟ್ಟಿದ್ದು ಕಡಿಮೆ ಸಾಧನೆಯೇನೂ ಆಗಿರಲಿಲ್ಲ. ಆದರೆ ನಿಯಮದಂತೆ ಒಂದು ಸ್ಪರ್ಧೆಗೆ ದೇಶದಿಂದ ಇಬ್ಬರನ್ನು ಮಾತ್ರ ಆಯ್ಕೆ ಮಾಡಬೇಕಾಗುತ್ತದೆ.

2019ರ ಅಕ್ಟೋಬರ್‌ನಲ್ಲಿ ರಾಂಚಿಯಲ್ಲಿ ನಡೆದ ಇಂಡಿಯನ್ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಅಂಜಲಿ ಕೊನೆಯ ಸಲ ಈ ಓಟದಲ್ಲಿ ಭಾಗವಹಿಸಿದ್ದರು. ಅವರ ಈ ಹಿಂದಿನ ವೈಯಕ್ತಿಕ ಉತ್ತಮ ಸಾಧನೆ (51.53 ಸೆ.) ಲಖನೌದ ಕೂಟದಲ್ಲಿ ದಾಖಲಾಗಿತ್ತು.

ಗಂಭೀರ ಗಾಯದಿಂದ ಚೇತರಿಸಿ ಈ ಕೂಟದ ಹೀಟ್ (52.89), ಸೆಮಿಫೈನಲ್ (52.03ಸೆ) ಮತ್ತು ಫೈನಲ್‌ನಲ್ಲಿ ಅಂಜಲಿದೇವಿ ಸುಧಾರಿತ ಸಾಧನೆ ತೋರಿದ್ದು ಗಮನಾರ್ಹ.



4x400 ಮೀಟರ್ ಮಿಕ್ಸೆಡ್ ರಿಲೇ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ ಕರ್ನಾಟಕ ತಂಡದ ಸಿಂಚಲ್ ಕಾವೇರಮ್ಮ, ಎನ್‌.ಎಸ್‌. ಇಂಚರಾ, ನಿಹಾಲ್ ಜೋಯೆಲ್, ಮಿಜೊ ಚಾಕೊ ಕುರಿಯನ್

ಮಹಿಳೆಯರ 1,500 ಮೀ. ಓಟದಲ್ಲೂ ಮೊದಲ ನಾಲ್ಕು ಸ್ಥಾನ ಪಡೆದ ದೀಕ್ಷಾ, ಹರ್ಮಿಲನ್ ಬೇನ್ಸ್, ಚಂದಾ ಮತ್ತು ಪೂಜಾ ಅವರು ಏಷ್ಯನ್ ಗೇಮ್ಸ್ ಅರ್ಹತೆ (4ನಿ.15.49 ಸೆ.) ದಾಟಿದರು.

ಪುರುಷರ 400 ಮೀ. ಓಟದಲ್ಲಿ ಶ್ರೀಲಂಕಾ ಕಳಿಂಗ ಕುಮಾರಗೆ (45.64 ಸೆ.) ಚಿನ್ನ ಗೆದ್ದರೆ, ರಾಷ್ಟ್ರೀಯ ದಾಖಲೆ ಹೊಂದಿರುವ ಮುಹಮ್ಮದ್ ಅನಾಸ್ (45.76 ಸೆ.) ಬೆಳ್ಳಿಯ ಪದಕ ಪಡೆದರು. ಮುಹಮ್ಮದ್ ಅಜ್ಮಲ್ (ಕೇರಳ) ಮತ್ತು ಅಮೊಯಿ ಜಾಕೊಬ್ (ದೆಹಲಿ) ಕ್ರಮವಾಗಿ 45.90 ಮತ್ತು 45.91 ಸೆ.ಗಳ ಕಾಲ ತೆಗೆದುಕೊಂಡು ಮೂರು ಮತ್ತು ನಾಲ್ಕನೇ ಸ್ಥಾನ ಪಡೆದರು. ಮೊದಲ ನಾಲ್ಕೂ ಸ್ಥಾನ ಪಡೆದವರು ಏಷ್ಯನ್ ಗೇಮ್ಸ್‌ಗೆ ನಿಗದಿಪಡಿಸಿದ ಅರ್ಹತೆಯೊಳಗಿನ (46.17 ಸೆ.) ದೂರ ಕ್ರಮಿಸಿದ್ದು ವಿಶೇಷ.

ಪುರುಷರ 800 ಮೀ. ಓಟದಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆದ ಕೃಷ್ಣನ್ ಕುಮಾರ್, ಮೊಹಮ್ಮದ್ ಅಫ್ಜಲ್ ಮತ್ತು ಪ್ರದೀಪ್ ಸೆಂಥಿಲ್ ಕುಮಾರ್ ಅವರು ಏಷ್ಯನ್ ಗೇಮ್ಸ್ ಅರ್ಹತೆಯನ್ನು (1 ನಿ. 49.5 ಸೆ.) ದಾಟಿದರು.

ಶಿವಕುಮಾರ್ ವೇಗದ ಓಟಗಾರ: ತಮಿಳುನಾಡಿನ ಬಿ.ಶಿವ ಕುಮಾರ್ 100 ಮೀ. ಓಟವನ್ನು 10.37 ಸೆ.ಗಳಲ್ಲಿ ಪೂರೈಸಿ ಚಾಂಪಿಯನ್‌ಷಿಪ್‌ನ ವೇಗದ ಓಟಗಾರ ಎನಿಸಿದರು. ಪಂಜಾಬ್ ಹರ್ಜಿತ್ ಸಿಂಗ್ (10.45) ಎರಡನೇ ಸ್ಥಾನ ಮತ್ತು ತಮಿಳುನಾಡಿನ ಇಲಾಕ್ಯ ದಾಸನ್ ಕೆ. ಮೂರನೇ ಸ್ಥಾನ ಪಡೆದರು. ಏಷ್ಯನ್ ಗೇಮ್ಸ್‌ಗೆ ನಿಗದಿಯಾಗಿದ್ದ ಅರ್ಹತಾ ಅವಧಿ 10.19 ಸೆ.

ಆಂಧ್ರ ಪ್ರದೇಶದ ಜ್ಯೋತಿ ಯೆರ್ರಾಜಿ ಮಹಿಳೆಯರ ವಿಭಾಗದಲ್ಲಿ ವೇಗದ ರಾಣಿ ಎನಿಸಿದರು. 100 ಮೀ. ಹರ್ಡಲ್ಸ್‌ನಲ್ಲಿ ದಾಖಲೆ ಹೊಂದಿರುವ ಅವರು 100 ಮೀ. ಓಟವನ್ನು 11.46 ಸೆ.ಗಳಲ್ಲಿ ಕ್ರಮಿಸಿದರು. ಏಷ್ಯನ್ ಗೇಮ್ಸ್‌ಗೆ ನಿಗದಿಪಡಿಸಿದ ಕಾಲ: 10.46 ಸೆ.

ಮಹಿಳೆಯರ ಟ್ರಿಪಲ್ ಜಂಪ್‌ನಲ್ಲಿ ಕೇರಳದ ಎನ್.ವಿ.ಶೀನಾ 13.60 ಮೀ. ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದು, ಏಷ್ಯನ್ ಗೇಮ್ಸ್‌ಗೆ (ನಿಗದಿಪಡಿಸಿದ ದೂರ: 13.58 ಮೀ.) ಅರ್ಹತೆ ಗಳಿಸಿದರು.

ಎರಡನೇ ದಿನದ ಫಲಿತಾಂಶಗಳು

ಪುರುಷರು: 100 ಮೀ. ಓಟ: ಶಿವಕುಮಾರ್ ಬಿ. (ತಮಿಳುನಾಡು)–1, ಹರ್ಜಿತ್ ಸಿಂಗ್ (ಪಂಜಾಬ್)–2, ಇಲಾಕ್ಯದಾಸನ್ (ತಮಿಳುನಾಡು)–3, ಕಾಲ: 10.37 ಸೆ.; 800 ಮೀ. ಓಟ: ಕೃಷ್ಣನ್ ಕುಮಾರ್ (ಹರಿಯಾಣ)–1, ಮೊಹಮ್ಮದ್ ಅಫ್ಜಲ್ (ಕೇರಳ)–2, ಪ್ರದೀಪ್ ಸೆಂಥಿಲ್ ಕುಮಾರ್ (ತಮಿಳುನಾಡು)–3, ಕಾಲ: 1ನಿ.46.17 ಸೆ.; 3,000 ಮೀ. ಸ್ಟೀಪಲ್ ಚೇಸ್: ಬಾಲಕಿಶನ್ (ಹರಿಯಾಣ)–1, ಸುಮಿತ್ ಕುಮಾರ್ (ದೆಹಲಿ)–2, ಪ್ರಿನ್ಸ್ ರಾಜ್ ಮಿಶ್ರಾ (ಸಿಕ್ಕಿಂ)–3, ಕಾಲ: 8ನಿ.38.98 ಸೆ.; 4x400 ಮೀ. ಮಿಕ್ಸೆಡ್ ರಿಲೇ: ತಮಿಳುನಾಡು (ಕಾಲ: 3ನಿ.2140ಸೆ)–1, ಮಹಾರಾಷ್ಟ್ರ (ಕಾಲ: 3ನಿ.21.67 ಸೆ.)–2, ಕರ್ನಾಟಕ (ನಿಹಾಲ್ ಜೋಯಲ್, ಇಂಚರಾ, ಸಿಂಚಲ್ ಕಾವೇರಮ್ಮ ಟಿ.ಆರ್., ಮಿಜೊ ಚಾಕೊ ಕುರಿಯನ್, ಕಾಲ: 3ನಿ21.88ಸೆ.) –3

35 ಕಿ.ಮೀ. ರೇಸ್ ವಾಕ್: ಜುನೇದ್ (ಹರಿಯಾಣ, ಕಾಲ: 3ಗಂ.00ನಿ.37 ಸೆ.)–1, ಏಕನಾಥ ಸಂಭಾಜಿ ತುರುಂಬ್ (ಮಹಾರಾಷ್ಟ್ರ, ಕಾಲ: 3ಗಂಟೆ06:06 ಸೆ.)–2, ವಿಕ್ರಮ್ ಕುಮಾರ್ ಯಾದವ್ (ರಾಜಸ್ತಾನ, ಕಾಲ: 3ಗಂ.06ನಿ. 06ಸೆ.)–3, ಸುರಿಂದರ್ ಸಿಂಗ್ (ಪಂಜಾಬ್, ಕಾಲ: 3ಗಂ.08ನಿ.51 ಸೆ.)–4.

ಡಿಸ್ಕಸ್ ಥ್ರೋ: ಕೃಪಾಲ್ ಸಿಂಗ್ (ಪಂಜಾಬ್)–1, ಗಗನ್ ದೀಪ್ ಸಿಂಗ್ (ಪಂಜಾಬ್)–2, ನಿರ್ಭಯ್ ಸಿಂಗ್ (ಹರಿಯಾಣ)–3, ದೂರ: 57.39 ಮೀ.; **ಮಹಿಳೆಯರು:** 100 ಮೀ. ಓಟ: ಜ್ಯೋತಿ ಯೆರ್ರಾಜಿ (ಆಂಧ್ರ ಪ್ರದೇಶ)–1, ಶ್ರವಣಿ ನಂದಾ (ಒಡಿಶಾ)–3, ಹಿಮಶ್ರೀ ರಾಯ್ (ಹರಿಯಾಣ)–3, ಕಾಲ: 11.46 ಸೆ.; 400 ಮೀ. ಓಟ: ಅಂಜಲಿ ದೇವಿ (ಹರಿಯಾಣ)–1, ಹಿಮಾನ್ಶಿ ಮಲಿಕ್ (ಹರಿಯಾಣ)–2, ಆರ್.ವಿದ್ಯಾ ರಾಮರಾಜ್ (ತಮಿಳುನಾಡು)–3, ಕಾಲ: 51.48 ಸೆ.; 1,500 ಮೀ. ಓಟ: ದೀಕ್ಷಾ (ಮಧ್ಯಪ್ರದೇಶ)–1, ಹರ್ಮಿಲನ್ ಬೇನ್ಸ್ (ಪಂಜಾಬ್)–2, ಚಂದಾ (ದೆಹಲಿ)–3, ಕಾಲ: 4ನಿ.06.07 ಸೆ.; 3,000 ಮೀ. ಸ್ಟೀಪಲ್ ಚೇಸ್: ಪಾರುಲ್ ಚೌಧರಿ (ಉತ್ತರ ಪ್ರದೇಶ)–1, ಪ್ರೀತಿ ಲಂಬಾ (ಹರಿಯಾಣ)–2, ಕೋಮಲ್ ಚಂದ್ರಕಾಂತ್ (ಮಹಾರಾಷ್ಟ್ರ)–3, ಕಾಲ: 9ನಿ.34.23 ಸೆ.; ಡಿಸ್ಕಸ್ ಥ್ರೋ: ಸೀಮಾ ಪೂನಿಯಾ (ಉತ್ತರ ಪ್ರದೇಶ)–1, ಶಾಲಿನಿ ಚೌಧರಿ (ಮಧ್ಯಪ್ರದೇಶ)–2, ಕಿರಣ್ (ರಾಜಸ್ತಾನ)–3, ದೂರ: 56.50 ಮೀ.; ಟ್ರಿಪಲ್ ಜಂಪ್: ಶೀನಾ ಎನ್.ವಿ. (ಕೇರಳ)–1, ನಯನಾ ಜೇಮ್ಸ್ (ಕೇರಳ)–2, ಮಲ್ಲಾಳ ಅನುಷಾ (ಆಂಧ್ರ ಪ್ರದೇಶ)–3, ದೂರ: 13.60 ಮೀ.

35 ಕಿ.ಮೀ. ರೇಸ್ ವಾಕ್: ಮಂಜು ರಾಣಿ (ಪಂಜಾಬ್, ಕಾಲ: 3ಗಂ.21 ನಿ.31 ಸೆ.)–1, ಮಮತಾ ಪಾಲ್ (ಉತ್ತರ ಪ್ರದೇಶ, ಕಾಲ: 3ಗಂ.40ನಿ.26 ಸೆ.)–2, ಕೋಮಲ್ (ಹರಿಯಾಣ, ಕಾಲ: 3ಗಂ.42ನಿ.41 ಸೆ.)–3, ಪ್ರಿಯಾಂಕಾ ಪಟೇಲ್ (ಉತ್ತರ ಪ್ರದೇಶ, ಕಾಲ: 3ಗಂ.45 ನಿ.04 ಸೆ.)–4.

ಜೋ ರೂಟ್ ಶತಕ ವೈಭವ

ಆ್ಯಷಸ್ ಸರಣಿ: ಆಸ್ಟ್ರೇಲಿಯಾ ದಾಳಿಗೆ ಇಂಗ್ಲೆಂಡ್ ಉತ್ತರ

ಲಂಡನ್ (ಎಎಫ್‌ಪಿ): ಕಲಾತ್ಮಕ ಶೈಲಿಯ ಬ್ಯಾಟರ್ ಜೋ ರೂಟ್ ಶತಕದ ಬಲದಿಂದ ಇಂಗ್ಲೆಂಡ್ ತಂಡವು ಶುಕ್ರವಾರ ಆರಂಭವಾದ ಆ್ಯಷಸ್ ಸರಣಿಯ ಮೊದಲ ಪಂದ್ಯದಲ್ಲಿ ಉತ್ತಮ ಮೊತ್ತ ಕಲೆಹಾಕಿತು.

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಲ್ಕನೇ ಕ್ರಮಾಂಕದ ಬ್ಯಾಟರ್ ರೂಟ್ (ಔಟಾಗದೆ 118, 152ಎ, 4X7, 6X4) ಚೆಂದದ ಶತಕದ ಬಲದಿಂದ 78 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 393 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ದಿನದಾಟದ ಅಂತ್ಯಕ್ಕೆ ಆಸ್ಟ್ರೇಲಿಯಾ ತಂಡ 4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 14 ರನ್ ಗಳಿಸಿತ್ತು.

ಇಂಗ್ಲೆಂಡ್ ತಂಡದ ಆರಂಭ ಚೆನ್ನಾಗಿರಲಿಲ್ಲ. ವೇಗಿ ಜೋಶ್ ಹ್ಯಾಜಲ್‌ವುಡ್ ನಾಲ್ಕನೇ ಓವರ್‌ನಲ್ಲಿಯೇ ಬೆನ್ ಡಕೆಟ್ ವಿಕೆಟ್ ಗಳಿಸಿದರು. ಈ ಹಂತದಲ್ಲಿ ಜಾಕ್ ಕ್ರಾಲಿ (61; 73ಎ) ಮತ್ತು ಒಲೀ ಪೋಪ್ (31 ರನ್) ಎರಡನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಸೇರಿಸಿದರು. ಸ್ಕಾಟ್ ಬೋಲಾಂಡ್ ಅವರು ಪೋಪ್ ವಿಕೆಟ್ ಕಬಳಿಸಿ ಈ ಜೊತೆಯಾಟವನ್ನು ಮುರಿದರು.

ಈ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ರೂಟ್, ಆಸ್ಟ್ರೇಲಿಯಾ ದಾಳಿಯನ್ನು ಮೆಟ್ಟಿ ನಿಂತರು. ಒಂದು ಕಡೆ ವೇಗಿಗಳಾದ ಪ್ಯಾಟ್ ಕಮಿನ್ಸ್, ಜೋಶ್, ಬೊಲಾಂಡ್ ಮತ್ತು ಕ್ಯಾಮರಾನ್ ಗ್ರೀನ್ ಅವರ ಸ್ವಿಂಗ್ ಮತ್ತು ಬೌನ್ಸರ್‌ಗಳನ್ನು ಸಮರ್ಥವಾಗಿ ಎದುರಿಸಿದರು.


ಇಂಗ್ಲೆಂಡ್ ತಂಡದ ಜೋ ರೂಟ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಇನ್ನೊಂದೆಡೆ ನೇಥನ್ ಲಯನ್ ಅವರ ಪರಿಣಾಮಕಾರಿ ಸ್ಪಿನ್ ದಾಳಿಗೂ ಉತ್ತರ ನೀಡಿದರು.

ಆದರೆ, ಲಯನ್ ಬೌಲಿಂಗ್‌ನಲ್ಲಿ ಹ್ಯಾರಿ ಬ್ರೂಕ್ (32ರನ್) ಔಟಾದರು. ಹ್ಯಾಜಲ್‌ವುಡ್ ಬೌಲಿಂಗ್‌ನಲ್ಲಿ ಬೆನ್ ಸ್ಟೋಕ್ಸ್ ಔಟಾದರು. ಆದರೂ ರೂಟ್ ಏಕಾಗ್ರತೆಗೆ ಭಂಗ ಬರಲಿಲ್ಲ. ಅವರೊಂದಿಗೆ ಸೇರಿದ ಜಾನಿ (78; 78ಎ, 4X12) ರನ್ ಗಳಿಕೆಗೆ ವೇಗ ನೀಡಿದರು. ಇದರಿಂದಾಗಿ ತಂಡವು ಮುನ್ನೂರರ ಗಡಿ ಮುಟ್ಟಿತು.ಇವರಿಬ್ಬರ ಜೊತೆಯಾಟದಲ್ಲಿ 119 ರನ್‌ಗಳು ಸೇರಿದವು. ರೂಟ್ ಟೆಸ್ಟ್‌ನಲ್ಲಿ 30ನೇ ಶತಕ ದಾಖಲಿಸಿದರು.

ಜಾನಿ ಅವರ ವಿಕೆಟ್ ಕೂಡ ಲಯನ್ ಪಾಲಾಯಿತು. ಆಸ್ಟ್ರೇಲಿಯಾ ವಿಕೆಟ್‌ಕೀಪರ್ ಅಲೆಕ್ಸ್ ಕ್ಯಾರಿ ಮೂರು ಕ್ಯಾಚ್ ಮತ್ತು ಎರಡು ಸ್ಟಂಪಿಂಗ್ ಬಲಿ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 78 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 393 ಡಿಕ್ಲೇರ್ಡ್ (ಜ್ಯಾಕ್ ಕ್ರಾಲಿ 61, ಒಲೀ ಪೋಪ್ 31, ಜೋ ರೂಟ್ ಔಟಾಗದೆ 118, ಹ್ಯಾರಿ ಬ್ರೂಕ್ 32, ಜಾನಿ ಬೆಸ್ಟೊ 78, ಜೋಶ್ ಹ್ಯಾಜಲ್‌ವುಡ್ 61ಕ್ಕೆ2, ನೇಥನ್ ಲಯನ್ 149ಕ್ಕೆ4)
ಆಸ್ಟ್ರೇಲಿಯಾ: 4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 14 (ಡೇವಿಡ್ ವಾರ್ನರ್ ಬ್ಯಾಟಿಂಗ್ 8, ಉಸ್ಮಾನ್ ಖ್ವಾಜಾ ಬ್ಯಾಟಿಂಗ್ 4)

ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಸೋಲು

ತಂಡದ ಆಯ್ಕೆಯಲ್ಲಿ ತಪ್ಪಾಗಿದೆ: ಬಿನ್ನಿ

ಚಾಮರಾಜನಗರ: 'ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಭಾರತ ತಂಡದ ಆಯ್ಕೆಯಲ್ಲಿ ಸಣ್ಣ ತಪ್ಪಾಗಿತ್ತು' ಎಂದು ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಶುಕ್ರವಾರ ಹೇಳಿದರು.


ಪಂದ್ಯದ ಸೋಲಿನ ಬಗ್ಗೆ ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಭಿನ್ನ ಪರಿಸ್ಥಿತಿಗಳಲ್ಲಿ ಕ್ರಿಕೆಟ್ ಆಡುವಾಗ ಪಿಚ್ ಅನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತದೆ. ಟೆಸ್ಟ್ ಫೈನಲ್‌ನಲ್ಲಿ ತಂಡದ ಆಯ್ಕೆಯ ವೇಳೆ ಸಣ್ಣ ತಪ್ಪೂ ನಡೆದಿದೆ. ಅಂತಹದ್ದು ನಡೆಯುತ್ತಿರುತ್ತದೆ. ಆರಂಭದಿಂದಲೇ ಉತ್ತಮ ಆಡಿದ್ದರೆ ಗೆಲ್ಲಬಹುದಿತ್ತು. ಮೊದಲ ದಿನ ನಮ್ಮ ಆಟ ಚೆನ್ನಾಗಿರಲಿಲ್ಲ' ಎಂದರು.

ಫೈನಲ್‌ಗೆ ಮುನ್ನ ಅಭ್ಯಾಸಕ್ಕೆ ಆಟಗಾರರಿಗೆ ಸಾಕಷ್ಟು ಸಮಯ ಸಿಗದಿರುವ ಪ್ರಶ್ನೆಗೆ, 'ಆಟಗಾರರು ಈಗ ಇಡೀ ವರ್ಷ ಕ್ರಿಕೆಟ್ ಆಡುತ್ತಾರೆ. ಆಟವಾಡಲು, ಅಭ್ಯಾಸ ನಡೆಸಲು ಸಮಯ ಸಿಗುತ್ತದೆ' ಎಂದು ಉತ್ತರಿಸಿದರು.

'ಟಿ20, ಏಕದಿನ ಹಾಗೂ ಟೆಸ್ಟ್ ಕ್ರಿಕೆಟ್‌ಗಳಿಗೆ ಸಾಕಷ್ಟು ವ್ಯತ್ಯಾಸವಿದೆ. ಟೆಸ್ಟ್ ಕ್ರಿಕೆಟ್ ಅನ್ನು ಯಾವುದೇ ಕಾರಣಕ್ಕೂ ಮರೆಯಬಾರದು. ಕ್ರಿಕೆಟ್ ಆಟದ ಭವಿಷ್ಯ ಟೆಸ್ಟ್ ಕ್ರಿಕೆಟ್. ಜನರ ಮನರಂಜನೆಗಾಗಿ ಐಪಿಎಲ್, ಟಿ–ಟ್ವೆಂಟಿ ಪಂದ್ಯಗಳು ನಡೆಯುತ್ತವೆ' ಎಂದರು.

'ಉತ್ತಮ ಕ್ರಿಕೆಟ್ ಆಟಗಾರರಾಗಲು ಟಿ- ಟ್ವೆಂಟಿ, ಏಕದಿನ ಮತ್ತು ಟೆಸ್ಟ್ ಮೂರೂ ಮಾದರಿಗೂ ಹೊಂದಿಕೊಳ್ಳಬೇಕು' ಎಂದರು.

ಕೃಷಿಗಾಗಿ ಟ್ರ್ಯಾಕ್ಟರ್ ಖರೀದಿ


ರೋಜರ್ ಬಿನ್ನಿ

ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಮೇಲುಕಾಮನಹಳ್ಳಿಯಲ್ಲಿ 36 ಎಕರೆ ಜಮೀನು ಹೊಂದಿರುವ ರೋಜರ್ ಬಿನ್ನಿ ನಗರದಲ್ಲಿ ಟ್ರ್ಯಾಕ್ಟರ್ ಖರೀದಿಸಿದರು.

ನಂಜನಗೂಡು ರಸ್ತೆಯಲ್ಲಿರುವ ಈಶ್ವರಿ ಟ್ರ್ಯಾಕ್ಟರ್ಸ್ ಶೋರೂಂ ಗೆ ಭೇಟಿ ನೀಡಿದ ಅವರನ್ನು ಶೋ ರೂಂ ಮಾಲೀಕರಾದ ಅಶೋಕ್ ಮತ್ತು ಪ್ರಶಾಂತ್ ಸನ್ಮಾನಿಸಿ ಗೌರವಿಸಿದರು. ನಂತರ ಹೊಸ ಟ್ರ್ಯಾಕ್ಟರ್ ಕೀಯನ್ನು ಹಸ್ತಾಂತರಿಸಿದರು. ಇದೇ ಸಂದರ್ಭದಲ್ಲಿ, ಟ್ರ್ಯಾಕ್ಟರ್ ಖರೀದಿಸಿದ ಇತರೆ ಗ್ರಾಹಕರಿಗೆ ಬಿನ್ನಿಯವರು ಕೀಗಳನ್ನು ಹಸ್ತಾಂತರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ನಮ್ಮ ಪೂರ್ವಿಕರು ಕೃಷಿಕರಲ್ಲ. ಆದರೆ, ನನಗೆ ಕೃಷಿ ಬಗ್ಗೆ ವಿಶೇಷ ಆಸಕ್ತಿ. 25 ವರ್ಷಗಳಿಂದ ಕೃಷಿ ಮಾಡುತ್ತಿದ್ದೇನೆ. ಸ್ಥಳೀಯ ಡೀಲರ್ ಬಳಿಯಲ್ಲೇ ಟ್ರ್ಯಾಕ್ಟರ್ ಖರೀದಿಸಬೇಕಾಗಿರುವುದರಿಂದ ಇಲ್ಲಿಗೆ ಬಂದಿದ್ದೇನೆ' ಎಂದರು.

ಅವರು ಬಂದ ಸುದ್ದಿ ತಿಳಿದು ಕ್ರಿಕೆಟ್ ಪ್ರೇಮಿಗಳು ಶೋರೂಂ ಮುಂದೆ ನೆರೆದಿದ್ದರು. ಹಲವರು ಹಸ್ತಾಕ್ಷರ ಪಡೆದರು. ಫೋಟೊ ತೆಗೆಸಿಕೊಂಡರು.

ಕಮರಿಗೆ ಬಿದ್ದು ಸೈಕ್ಲಿಸ್ಟ್ ಸಾವು

ಲುಸಾನ್, ಸ್ವಿಟ್ಜರ್ಲೆಂಡ್ (ಎಎಫ್‌ಪಿ): 'ಟೂರ್ ಆಫ್ ಸ್ವಿಟ್ಜರ್ಲೆಂಡ್' ಸ್ಪರ್ಧೆಯ ವೇಳೆ ಕಮರಿಗೆ ಬಿದ್ದು ಗಾಯಗೊಂಡಿದ್ದ ಸ್ಥಳೀಯ ಸೈಕ್ಲಿಸ್ಟ್ ಗಿನೋ ಮೇಡರ್ (26) ಶುಕ್ರವಾರ ಮೃತಪಟ್ಟಿದ್ದಾರೆ.

2,000 ಮೀಟರ್‌ಗಳಷ್ಟು ಎತ್ತರದ ಮೂರು ಪರ್ವತಯಾನ ಮುಗಿಸಿದ್ದ ಮೇಡರ್, ಫಿಯೆಶ್ ಮತ್ತು ಲಾ ಪಂಟ್ ನಡುವಿನ ಐದನೇ ಹಂತದಲ್ಲಿ ಇಳಿಜಾರಿನಲ್ಲಿ ಕಂದಕಕ್ಕೆ ಬಿದ್ದಿದ್ದರು. ನೀರಿನಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ತಕ್ಷಣ ಏರ್‌ಲಿಫ್ಟ್ ಮಾಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಶುಕ್ರವಾರ ನಿಧನರಾದರು.

ಬೆಂಗಳೂರು ರೇಸ್

ಮರಿಯಾನ ಗೆಲ್ಲುವ ನಿರೀಕ್ಷೆ

ಸರ್ ಸೆಸಿಲ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮರಿಯಾನ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬ್ರೀಝ್ ಬ್ಲಸ್ಟರ್ 3, ಪಿಂಕಿ ಪಿಂಕಿ 4, ದಿ ಗೋಲ್ಡನ್ ಡ್ರೀಮ್ 2
2ನೇ ರೇಸ್: ರೂಲಿಂಗ್ ಡೈನಾಸ್ಟಿ 3, ಕ್ರೌನ್ ವಿಟ್ನೆಸ್ 4
3ನೇ ರೇಸ್: ಈಸ್ಟರನ್ ಸೀ 1, ಮರೂನ್ 2, ಬೆಲ್ಲಿಸಿಮೊ 7
4ನೇ ರೇಸ್: ಡಿವೊ 1, ಎಂಪೈರ್ ಆಫ್ ಡ್ರೀಮ್ಸ್ 7, ಟ್ವಿಲೈಟ್ ಫೇಮ್ 3
5ನೇ ರೇಸ್: ಮರಿಯಾನ 10, ಸ್ಟಾರ್ ಕಾನ್ಸೆಪ್ಟ್ 4, ವ್ಯಾಸ 5
6ನೇ ರೇಸ್: ಸ್ಪ್ಲೆಂಡರ್ ಆನ್ ಗ್ರಾಸ್ 11, ಮಾಂಟೆಲಿನಾ 5, ಡೆಡಿಕೇಟ್ 7
7ನೇ ರೇಸ್: ಅಚ್‌ವೇರ್ 2, ಟ್ವಿಲೈಟ್ ಟೊರ್ನಾಡೊ 3, ಡಿಫೈನಿಂಗ್ ಪವರ್ 7

ಉತ್ತಮ ಬೆಟ್: ರೂಲಿಂಗ್ ಡೈನಾಸ್ಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ವಿಶ್ವಕಪ್ ಸ್ಕ್ವಾಷ್: ಸೆಮಿಯಲ್ಲಿ ಎಡವಿದ ಆತಿಥೇಯರು

ಭಾರತಕ್ಕೆ ಮಲೇಷ್ಯಾ ಆಘಾತ

ಚೆನ್ನೈ (ಪಿಟಿಐ): ಭಾರತ ತಂಡದವರು ವಿಶ್ವಕಪ್ ಸ್ಕ್ವಾಷ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಮಲೇಷ್ಯಾ ತಂಡದ ಕೈಯಲ್ಲಿ ಆಘಾತ ಅನುಭವಿಸಿ ಹೊರಬಿದ್ದರು.

ಟೂರ್ನಿಯಲ್ಲಿ ಎರಡನೇ ಶ್ರೇಯಾಂಕ ಹೊಂದಿದ್ದ ಭಾರತ, ಶುಕ್ರವಾರ ನಡೆದ ಹಣಾಹಣಿಯಲ್ಲಿ ನಾಲ್ಕನೇ ಶ್ರೇಯಾಂಕದ ಎದುರಾಳಿಗಳಿಗೆ 0–3 ರಲ್ಲಿ ಮಣಿಯಿತು.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಮಲೇಷ್ಯಾ ತಂಡ ಹಾಲಿ ಚಾಂಪಿಯನ್ ಈಜಿಪ್ಟ್ ತಂಡವನ್ನು ಎದುರಿಸಲಿದೆ. ದಿನದ ಮತ್ತೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಈಜಿಪ್ಟ್ 4–0 ರಲ್ಲಿ ಜಪಾನ್ ವಿರುದ್ಧ ಗೆದ್ದಿತು.

ಸೆಮಿಫೈನಲ್‌ನ ಮೊದಲ ಪಂದ್ಯದಲ್ಲಿ ಸೆ ಹುಂಗ್ ಅಂಗ್ 7-4, 5-7, 1-7, 7-1, 7-6 ರಿಂದ ಅಭಯ್ ಸಿಂಗ್ ಅವರನ್ನು ಮಣಿಸಿ ಮಲೇಷ್ಯಾಕ್ಕೆ ಮುನ್ನಡೆ ತಂದಿತ್ತರು. ಈ ಜಿದ್ದಾಜಿದ್ದಿನ ಸೆಣಸಾಟ 37 ನಿಮಿಷ ನಡೆಯಿತು.

ಎರಡನೇ ಪಂದ್ಯದಲ್ಲಿ ಅನುಭವಿ ಆಟಗಾರ್ತಿ ಜೋಶ್ನಾ ಚಿಣ್ಣಪ್ಪ 3–7, 3–7, 7–5, 4–7 ರಿಂದ ಐರಾ ಅಜ್ಮಾನ್ ಎದುರು ಪರಾಭವಗೊಂಡರು. 18 ವರ್ಷದ ಐರಾ 21 ನಿಮಿಷಗಳಲ್ಲಿ ಗೆದ್ದರು. ಮೊದಲ ಎರಡು ಗೇಮ್‌ಗಳಲ್ಲಿ ಸೋತ ಜೋಶ್ನಾ, ಮರುಹೋರಾಟ ನಡೆಸಿ ಮೂರನೇ ಗೇಮ್ ಗೆದ್ದರು. ಆದರೆ ನಾಲ್ಕನೇ ಗೇಮ್‌ನಲ್ಲಿ ಎಡವಿದರು. ಮೂರನೇ ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 134ನೇ ಸ್ಥಾನದಲ್ಲಿರುವ ಡರೆನ್ ಪ್ರಗಾಸಂ 7-5, 2-7, 7-6, 7-5 ರಿಂದ 19ನೇ ರ‍್ಯಾಂಕ್‌ನ ಆಟಗಾರ ಸೌರವ್ ಘೋಷಾಲ್ ಅವರಿಗೆ ಆಘಾತ ನೀಡಿದರು.

'ಕುಸ್ತಿ ಟ್ರಯಲ್ಸ್ ಆಗಸ್ಟ್‌ನಲ್ಲಿ ನಡೆಸಿ'

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್‌ಗೆ ಭಾರತ ಕುಸ್ತಿ ತಂಡದ ಆಯ್ಕೆಗೆ ನಡೆಸಲಿರುವ ಟ್ರಯಲ್ಸ್‌ಅನ್ನು ಆಗಸ್ಟ್‌ಗೆ ಮುಂದೂಡುವಂತೆ ಪ್ರಮುಖ ಕುಸ್ತಿಪಟುಗಳು ಕೇಂದ್ರ ಕ್ರೀಡಾ ಸಚಿವಾಲಯವನ್ನು ಕೋರಿದ್ದಾರೆ.

ಬಜರಂಗ್ ಪೂನಿಯಾ ಒಳಗೊಂಡಂತೆ ಬ್ರಿಜ್‌ಭೂಷಣ್ ಸಿಂಗ್ ಶರಣ್ ವಿರುದ್ಧದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕುಸ್ತಿಪಟುಗಳು ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲು ಬಯಸಿದ್ದಾರೆ. ಆದ್ದರಿಂದ ಟ್ರಯಲ್ಸ್‌ಗೆ ಸಜ್ಜಾಗಲು ಹೆಚ್ಚಿನ ಕಾಲಾವಕಾಶ ಬೇಕು ಎಂದು ಮನವಿ ಮಾಡಿದ್ದಾರೆ.

ಈ ಹಿನ್ನೆಲೆಯಲ್ಲಿ, ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ಕುಸ್ತಿ ತಂಡವನ್ನು ಪ್ರಕಟಿಸಲು ನೀಡಿದ್ದ ಜುಲೈ 15ರ ಗಡುವನ್ನು ವಿಸ್ತರಿಸುವಂತೆ ಏಷ್ಯನ್ ಒಲಿಂಪಿಕ್ ಕೌನ್ಸಿಲ್‌ಅನ್ನು (ಒಸಿಎ) ಕೇಳಿಕೊಂಡಿದೆ.

ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತದ ಕ್ರೀಡಾಪಟುಗಳ ಪಟ್ಟಿಯನ್ನು ಐಒಎಯು ಜುಲೈ 15ರ ಒಳಗಾಗಿ ಒಸಿಎಗೆ ಸಲ್ಲಿಸಬೇಕು. ಜೂನ್ 30ರ ಒಳಗಾಗಿ ತಂಡಗಳ ಪಟ್ಟಿ ಕಳುಹಿಸುವಂತೆ ಐಒಎಯು ಎಲ್ಲ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ಸೂಚಿಸಿತ್ತು.


'ಕುಸ್ತಿಪಟುಗಳಿಂದ ಮನವಿ ಬಂದಿರುವ ಹಿನ್ನೆಲೆಯಲ್ಲಿ, ಗಡುವು ವಿಸ್ತರಿಸುವಂತೆ ಏಷ್ಯನ್ ಒಲಿಂಪಿಕ್ ಕೌನ್ಸಿಲ್‌ಅನ್ನು ಕೇಳಿಕೊಂಡಿದ್ದೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಐವರು ವಿದೇಶಿ ಭಯೋತ್ಪಾದಕರ ಹತ್ಯೆ

ಶ್ರೀನಗರ (ಪಿಟಿಐ/ಎಎಫ್‌ಪಿ/ ರಾಯಿಟರ್ಸ್): 'ಉತ್ತರ ಕಾಶ್ಮೀರದ ಕುಪ್ವಾರಾ ಜಿಲ್ಲೆಯಲ್ಲಿ ಶುಕ್ರವಾರ ಭದ್ರತಾ ಪಡೆಗಳು ಹಾಗೂ ಭಯೋತ್ಪಾದಕರ ಮಧ್ಯೆ ಗುಂಡಿನ ಚಕಮಕಿ ನಡೆದಿದ್ದು ಈ ವೇಳೆ ಐವರು ವಿದೇಶಿ ಭಯೋತ್ಪಾದಕರನ್ನು ಯೋಧರು ಹತ್ಯೆ ಮಾಡಿದ್ದಾರೆ' ಎಂದು ಕಾಶ್ಮೀರದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ವಿಜಯ್ ಕುಮಾರ್ ಹೇಳಿದ್ದಾರೆ.

ಜಮ್ಮು ಕಾಶ್ಮೀರದ ಗಡಿ ನಿಯಂತ್ರಣ ರೇಖೆ ಬಳಿಯ ಕುಪ್ವಾರಾದ ಮೂಲಕ ಭಯೋತ್ಪಾದಕರು ಭಾರತದ ಗಡಿ ಒಳಗೆ ನುಸುಳಲು ಯತ್ನಿಸಿದ್ದರು. ಭಯೋತ್ಪಾದಕರು ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಹೊಂದಿದ್ದರು. 2021ರಿಂದ ಈಚೆಗೆ ಇದು 'ಅತ್ಯಂತ ದೊಡ್ಡ ಪ್ರಮಾಣ'ದ ಒಳನುಸುಳುವಿಕೆ ಯತ್ನವಾಗಿದೆ ಎನ್ನಲಾಗಿದೆ.

'ಮೃತರು ಯಾರು ಮತ್ತು ಯಾವ ದೇಶದವರು ಎಂಬ ಕುರಿತು ಪತ್ತೆಯಾಗಿಲ್ಲ. ಇದೇ ಪ್ರದೇಶದಲ್ಲಿ ಕಾರ್ಯಾಚರಣೆ ಮುಂದುವರೆದಿದೆ' ಎಂದರು.



'ಗುಪ್ತಚರ ಮಾಹಿತಿ ಮೇರೆಗೆ ಜುಮಾಗುಂಡ್ ಪ್ರದೇಶದಲ್ಲಿ ಗುರುವಾರ ರಾತ್ರಿ ವೇಳೆ ಕಾರ್ಯಾಚರಣೆ ನಡೆದಿದೆ. ಸೇನೆ ಹಾಗೂ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿದ್ದಾರೆ. ಭಾರತದ ಗಡಿಯೊಳಗೆ ಯಾವೆಲ್ಲಾ ಮಾರ್ಗದಿಂದ ಒಳನುಸುಳಬಹುದೊ ಅಲ್ಲೆಲ್ಲಾ ಸೇನಾ ತಂಡವನ್ನು ನಿಯೋಜಿಸಲಾಗಿದೆ' ಎಂದು ಮೇಜರ್ ಜನರಲ್ ಗಿರೀಶ್ ಕಾಲಿಯಾ ಮಾಹಿತಿ ನೀಡಿದರು.

ಶಸ್ತ್ರಾಸ್ತ್ರ ವಶ: 'ಭಯೋತ್ಪಾದಕರ ಬಳಿ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳಿದ್ದವು. ಶುಕ್ರವಾರ ಬೆಳಿಗ್ಗೆ ಅವುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದರು.

'ಐದು ಎಕೆ ರೈಫಲ್‌ಗಳು, 15 ಸುತ್ತಿನ ಗುಂಡುಗಳು, ಗ್ರಾನೈಡ್‌ಗಳು, ಕತ್ತಲಲ್ಲೂ ನೋಡಲು ಸಾಧ್ಯವಾಗುವ ಸಾಧನ, ಬೈನಾಕುಲರ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಭಾರತದೊಳಗೆ ನುಸುಳುವ ಸಂಭಾವ್ಯದ ಬಗ್ಗೆ ಇತ್ತೀಚೆಗೆ ಮಾಹಿತಿಗಳು ಬರುತ್ತಿವೆ' ಎಂದರು.

'ತಪ್ಪಿಸಿಕೊಂಡರು'

'ಭದ್ರತಾ ಪಡೆಗಳು ಭಯೋತ್ಪಾದಕರೊಂದಿಗೆ ಸಮರ್ಥವಾಗಿ ಹೋರಾಡಿದ್ದಾರೆ. ಆದರೂ ಕೆಲವರು ತಪ್ಪಿಸಿಕೊಂಡಿದ್ದಾರೆ. ಗಾಢವಾಗಿ ಕವಿದಿದ್ದ ಕತ್ತಲು, ಪ್ರತಿಕೂಲ ಹವಾಮಾನ ಹಾಗೂ ದಟ್ಟ ಅರಣ್ಯದ ಕಾರಣದಿಂದ ಈ ರೀತಿಯಾಗಿದೆ' ಎಂದು ಸೇನೆಯ ವಕ್ತಾರ ದೇವೇಂದ್ರ ಆನಂದ್ ಹೇಳಿದರು.

'ಭಾರತದೊಳಗೆ ನುಸುಳಲು ಭಯೋತ್ಪಾದಕರು ಎರಡು ಬಾರಿ ಯತ್ನಿಸಿದ್ದಾರೆ. ನಾವು ಇದನ್ನು ವಿಫಲಗೊಳಸಿದ್ದೇವೆ' ಎಂದು ಭಾರತೀಯ ಸೇನೆ ತಿಳಿಸಿದೆ.

ಸಿರಿಧಾನ್ಯ ಬಳಕೆಗೆ ಉತ್ತೇಜನ: ಗೀತೆ ರಚನೆಗೆ ಪ್ರಧಾನಿ ನೆರವು

ನ್ಯೂಯಾರ್ಕ್ (ಪಿಟಿಐ): ಸಿರಿಧಾನ್ಯಗಳ ಮಹತ್ವ ಕುರಿತು ಉತ್ತೇಜನ ನೀಡಲು, ಭಾರತ ಮೂಲದ ಅಮೆರಿಕನ್ ಗಾಯಕಿ, ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತೆ ಫಲು ರಚಿಸಿರುವ 'ಅಬುಂಡನ್ಸ್ ಇನ್ ಮಿಲೆಟ್ಸ್' ವಿಶೇಷ ಗೀತೆಗೆ ಪ್ರಧಾನಿ ನರೇಂದ್ರ ಮೋದಿ ಕೈಜೋಡಿಸಿದ್ದಾರೆ.

ಫಲು ಎಂದೇ ಪ್ರಸಿದ್ಧಿ ಪಡೆದಿರುವ ಮುಂಬೈ ಸಂಜಾತೆ ಗಾಯಕಿ, ಗೀತರಚನೆಗಾರ್ತಿ ಫಾಲ್ಗುಣಿ ಶಾ ಮತ್ತು ಆಕೆಯ ಪತಿ ಗಾಯಕ ಗೌರವ್ ಶಾ ಈ ಗೀತೆ ರಚಿಸಿದ್ದಾರೆ. ವಿವಿಧ ವೇದಿಕೆಗಳಲ್ಲಿ ಜೂನ್ 16ರಂದು ಗೀತೆ ಬಿಡುಗಡೆ ಆಯಿತು. ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿರುವ ಈ ಗೀತೆಯು ಸಿರಿಧಾನ್ಯಗಳ ಮಹತ್ವವನ್ನು ಸಾರಲಿದ್ದು, ಪ್ರತಿಯೊಬ್ಬರಿಗೂ ತಲುಪುವಂತೆ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಬಸ್–ಟ್ರಕ್ ಡಿಕ್ಕಿ: 15 ಮಂದಿ ಸಾವು

ಟೊರೆಂಟೊ (ಎಪಿ): ಮ್ಯಾನಿಟೋಬಾ ಪ್ರಾಂತ್ಯದ ಗ್ರಾಮೀಣ ಭಾಗದ ಹೆದ್ದಾರಿ ಜಂಕ್ಷನ್ ಬಳಿ ಬಸ್‌ವೊಂದು ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ 15 ಪ್ರಯಾಣಿಕರು ಮೃತಪಟ್ಟಿದ್ದು, 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಕೆನಡಾ ಪೊಲೀಸರು ತಿಳಿಸಿದ್ದಾರೆ.

ಬಸ್‌ನಲ್ಲಿ 25 ಪ್ರಯಾಣಿಕರಿದ್ದು, ಬಹುತೇಕರು ಹಿರಿಯರು. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಕಮಾಂಡಿಂಗ್ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಯೋಗ: ಮೋದಿ ನೇತೃತ್ವ

ವಿಶ್ವಸಂಸ್ಥೆ (ಪಿಟಿಐ): 9ನೇ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಜೂನ್ 21ರಂದು ವಿಶ್ವಸಂಸ್ಥೆಯಲ್ಲಿ ನಡೆಯಲಿರುವ ಯೋಗ ಅಧಿವೇಶನದ ನೇತೃತ್ವವನ್ನು ಪ್ರಧಾನಿ ನರೇಂದ್ರ ಮೋದಿ ವಹಿಸಲಿದ್ದಾರೆ.

ಅಂತರರಾಷ್ಟ್ರೀಯ ಯೋಗ ದಿನವನ್ನು ವಾರ್ಷಿಕ ಸಂಸ್ಮರಣೆಯಾಗಿ ಆಚರಿಸಲು ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಮೋದಿ ಪ್ರಸ್ತಾಪಿಸಿದ ಒಂಬತ್ತು ವರ್ಷಗಳ ಬಳಿಕ, ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಐತಿಹಾಸಿಕ ಸಂಸ್ಮರಣೆಯ ಯೋಗ ಅಧಿವೇಶನ ನಿಗದಿಯಾಗಿದೆ. ಇದರ ನೇತೃತ್ವವನ್ನು ಮೋದಿ ವಹಿಸುತ್ತಿದ್ದಾರೆ.

ಜೂನ್ 21ರಂದು ಬೆಳಿಗ್ಗೆ 8ರಿಂದ 9ರವರೆಗೆ ಯೋಗ ಅಧಿವೇಶನವು ವಿಶ್ವಸಂಸ್ಥೆಯ ಕೇಂದ್ರ ಕಚೇರಿಯ ಉತ್ತರದ ಹುಲ್ಲುಹಾಸಿನಲ್ಲಿ ನಡೆಯಲಿದೆ. ಕಳೆದ ಡಿಸೆಂಬರ್‌ನಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷತೆ ವಹಿಸಿರುವ ಭಾರತವು ವಿಶ್ವಸಂಸ್ಥೆಗೆ ಕೊಡುಗೆಯಾಗಿ ನೀಡಿರುವ ಮಹಾತ್ಮಾ ಗಾಂಧಿ ಅವರ ಪುತ್ಥಳಿಯನ್ನು ಇದೇ ವೇಳೆ ಅನಾವರಣಗೊಳಿಸಲಾಗುತ್ತದೆ.

20ರಿಂದ ವಿದೇಶ ಪ್ರವಾಸ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಜೂನ್ 20ರಿಂದ 25ರವರೆಗೆ ವಿದೇಶ ಪ್ರವಾಸ ಕೈಗೊಳ್ಳಲಿದ್ದು, ಅವರು ಈ ವೇಳೆ ಅಮೆರಿಕ ಮತ್ತು ಈಜಿಪ್ಟ್‌ಗೂ ಪ್ರತ್ಯೇಕ ಭೇಟಿ ನೀಡಲಿದ್ದಾರೆ.

ಅಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರನ್ನು ಭೇಟಿಯಾಗಲಿದ್ದು, ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್‌ನ (ಸಂಸತ್) ಹಿರಿಯ ನಾಯಕರ ಆಹ್ವಾನದ ಮೇರೆಗೆ 22ರಂದು ಜಂಟಿ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ.

ಯುದ್ಧ ಅಂತ್ಯಕ್ಕೆ ಶಾಂತಿ ಮಾತುಕತೆಗೆ ಮಧ್ಯಸ್ಥಿಕೆ

ಉಕ್ರೇನ್‌ಗೆ ಆಫ್ರಿಕಾ ನಾಯಕರ ಭೇಟಿ

ಕೀವ್ (ಎಪಿ): ಉಕ್ರೇನ್ ಮೇಲಿನ ರಷ್ಯಾದ ಯುದ್ಧ ಕೊನೆಗೊಳಿಸಲು ಮತ್ತು ತಮ್ಮ ಖಂಡಕ್ಕೆ ಆಹಾರ ಹಾಗೂ ರಸಗೊಬ್ಬರ ಪೂರೈಕೆ ಖಾತ್ರಿಪಡಿಸುವ ಸಲುವಾಗಿ ಶಾಂತಿ ಮಾತುಕತೆಗೆ ಆಫ್ರಿಕಾದ ನಾಯಕರು ಮತ್ತು ಹಿರಿಯ ಅಧಿಕಾರಿಗಳ ನಿಯೋಗವು ಶುಕ್ರವಾರ ಉಕ್ರೇನ್ ತಲುಪಿದೆ.

ಈ ನಿಯೋಗದಲ್ಲಿ ದಕ್ಷಿಣ ಆಫ್ರಿಕಾ ಅಧ್ಯಕ್ಷ ಕಿರಿಲ್ ರಾಮಫೋಸ ಸೇರಿ ಸೆನೆಗಲ್, ಜಾಂಬಿಯಾ, ಕಾಂಗೊ ಗಣರಾಜ್ಯ, ಕೊಮೊರಸ್ ಐಲ್ಯಾಂಡ್ ಫಸ್ಟ್‌ನ ನಾಯಕರು ಇದ್ದಾರೆ. ಕೀವ್ ಮತ್ತು ಮಾಸ್ಕೊ ನಡುವೆ ಶಾಂತಿ ಮಾತುಕತೆಯ ಮಧ್ಯಸ್ಥಿಕೆ ವಹಿಸುವ ಉದ್ದೇಶದೊಂದಿಗೆ ಆಗಮಿಸಿರುವ ಈ ನಿಯೋಗಕ್ಕೆ ಕೀವ್‌ನಲ್ಲಿ ರಷ್ಯಾದ ಕ್ಷಿಪಣಿಗಳ ಸ್ವಾಗತ ಸಿಕ್ಕಿದೆ. ಕೀವ್ ಉಪನಗರ ಬುಕಾದಲ್ಲಿ ನಿಯೋಗ ಇರುವಾಗಲೇ ವಾಯು ದಾಳಿಯ ಎಚ್ಚರಿಕೆ ಸಂದೇಶ ಮೊಳಗಿವೆ. ನೆರೆಯ ಪೊಡಿಲ್‌ಸ್ಕಿ ಜಿಲ್ಲೆಯಲ್ಲಿ ಎರಡು ಕಡೆ ಸ್ಫೋಟ ಸಂಭವಿಸಿರುವುದನ್ನು ಮೇಯರ್ ವಿಟಾಲಿ ಕ್ಲಿಟ್‌ಸ್ಚ್ಕೊ ಖಚಿತಪಡಿಸಿದ್ದಾರೆ.

ಅದೃಷ್ಟವಶಾತ್ ಯಾವುದೇ ಹಾನಿ ಸಂಭವಿಸಿಲ್ಲ. ಕೀವ್ ಗುರಿಯಾಗಿಸಿಕೊಂಡಿದ್ದ ರಷ್ಯಾದ ಆರು ಕಲಿಬ್ ಕ್ರೂಸ್ ಕ್ಷಿಪಣಿಗಳು, ಆರು ಕಿಂಝಾಲ್ ಹೈಪರ್‌ಸಾನಿಕ್ ಕ್ಷಿಪಣಿಗಳು ಮತ್ತು ಎರಡು ಶಸ್ತ್ರಸಜ್ಜಿತ ಡ್ರೋನ್‌ಗಳನ್ನು ಉಕ್ರೇನ್ ವಾಯುಪಡೆ ಹೊಡೆದುರುಳಿಸಿದೆ.

ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರನ್ನು ಭೇಟಿಯಾಗಿ, ಯುದ್ಧ ಕೊನೆಗೊಳಿಸಲು ಮತ್ತು ಕಪ್ಪು ಸಮುದ್ರದ ಮೂಲಕ ಆಹಾರ ಧಾನ್ಯಗಳ ರಫ್ತು ಒಪ್ಪಂದ ಮುಂದುವರಿಸುವ ಶಾಂತಿ ಮಾತುಕತೆ ನಡೆಸಲು ಬಂದಿರುವ ನಿಯೋಗವು, ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ಗೆ ಪ್ರಯಾಣ ಬೆಳೆಸಲಿದೆ. ಅಲ್ಲಿಅಂತರರಾಷ್ಟ್ರೀಯ ಆರ್ಥಿಕ ಸಮಾವೇಶದ ವೇಳೆ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನೂ ಶನಿವಾರ ಭೇಟಿಯಾಗಿ, ಮಾತುಕತೆ ನಡೆಸಲಿದೆ.

'ರಷ್ಯಾ ಯುದ್ಧವನ್ನು ಹೆಚ್ಚು ಬಯಸುತ್ತದೆಯೇ ಹೊರತು ಶಾಂತಿ ಬಯಸುತ್ತಿಲ್ಲ. ರಷ್ಯಾದ ಕ್ಷಿಪಣಿಗಳು ಆಫ್ರಿಕಾಕ್ಕೆ ಸಂದೇಶವಾಗಿದೆ' ಎಂದು ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಟ್ವೀಟ್ ಮಾಡಿದ್ದಾರೆ.

ಕೆರ್ಸಾನ್ ಜಲಾಶಯ ಧ್ವಂಸಗೊಂಡ ನಂತರ ಪ್ರವಾಹ ಪೀಡಿತವಾಗಿರುವ ಪ್ರದೇಶದ ಮೇಲೆ ಗುರುವಾರ ಶೆಲ್ ದಾಳಿ ನಡೆದಿದ್ದು, ಇಬ್ಬರು ನಾಗರಿಕರು ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ.

ಇಂಡೊನೇಷ್ಯಾ ಓಪನ್: ನಾಲ್ಕರ ಘಟ್ಟಕ್ಕೆ ಸಾತ್ವಿಕ್– ಚಿರಾಗ್ ಜೋಡಿ

ಸಿಂಗಲ್ಸ್ ಸೆಮಿಫೈನಲ್‌ಗೆ ಪ್ರಣಯ್

ಜಕಾರ್ತಾ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್, ಇಂಡೊನೇಷ್ಯಾ ಓಪನ್ ವಿಶ್ವ ಟೂರ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದರು. ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಜೋಡಿಯನ್ನು ಮಣಿಸಿದ ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೂಡ ಶುಕ್ರವಾರ ಸೆಮಿಫೈನಲ್ ತಲುಪಿದರು.

ಏಳನೇ ಶ್ರೇಯಾಂಕದ ಪ್ರಣಯ್ ದಿನದ ಕೊನೆಯ ಕ್ವಾರ್ಟರ್‌ಫೈನ-ಲ್ ಪಂದ್ಯದಲ್ಲಿ ಜಪಾನ್‌ನ ಕೊಡೈ ನರವೊಕಾ ಅವರನ್ನು 21-18, 21-6 ರಲ್ಲಿ ನೇರ ಸೆಟ್‌ಗಳಿಂದ ಸೋಲಿಸಿದರು. ನರವೊಕಾ ಈ ಟೂರ್ನಿಯಲ್ಲಿ ಮೂರನೇ ಶ್ರೇಯಾಂಕ ಪಡೆದಿದ್ದಾರೆ.


ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ —ಎಪಿ ಚಿತ್ರ

ಆದರೆ, ವಿಶ್ವ ಚಾಂಪಿಯನ್‌ಷಿಪ್ ರಜತ ಪದಕ ವಿಜೇತ ಕಿದಂಬಿ ಶ್ರೀಕಾಂತ್ ದಿನದ ಮೊದಲ ಕ್ವಾರ್ಟ-ರ್‌ಫೈನಲ್ ಪಂದ್ಯದಲ್ಲಿ ಚೀನಾದ ಲಿ ಶಿ ಫೆಂಗ್ ಎದುರು ಮೂರು ಗೇಮ್‌ಗಳ ಹೋರಾಟದಲ್ಲಿ ಸೋಲನುಭವಿಸಿದ-ರು. ವಿಶ್ವದ 10ನೇ ನಂಬರ್ ಆಟಗಾರ ಫೆಂಗ್ 69 ನಿಮಿಷಗಳವರೆಗೆ ಬೆಳೆದ ಪಂದ್ಯದಲ್ಲಿ 21-14, 14-21, 21-12 ರಲ್ಲಿ ವಿಶ್ವ ಕ್ರಮಾಂಕದಲ್ಲಿ 22ನೇ ಸ್ಥಾನ-ದಲ್ಲಿರುವ ಶ್ರೀಕಾಂತ್ ಮೇಲೆ ಜಯಗಳಿಸಿ ಸೆಮಿಫೈನಲ್‌ಗೆ ಮುನ್ನಡೆದರು.

ಪ್ರಣಯ್ ಮುಂದಿನ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ವಿಕ್ಟರ್ ಆಕ್ಸೆಲ್‌ಸನ್ ಅವರನ್ನು ಎದುರಿಸಲಿದ್ದಾರೆ. ಡೆನ್ಮಾರ್ಕ್‌ನ ಆಕ್ಸೆಲ್‌ಸನ್ 21-5, 21-19 ರಿಂದ ಚೀನಾ ತೈಪೆಯ ಟಿಯನ್ ಚೆನ್ ಚೌ ವಿರುದ್ಧ ಗೆಲುವನ್ನು ಸಾಧಿಸಿದರು.

ಡಬಲ್ಸ್‌ನಲ್ಲಿ ಏಳನೇ ಶ್ರೇಯಾಂಕ ಪಡೆದಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಶಿಸ್ತಿನ ಆಟವಾಡಿ 21-13, 21-13 ರಿಂದ ಅಗ್ರ ಶ್ರೇಯಾಂಕದ ಇಂಡೊನೇಷ್ಯಾ ಜೋಡಿ ಅಲ್ಫಿಯಾನ್ ಮತ್ತು ಅಡ್ರಿಯಾಂಟೊ ಮೇಲೆ ಜಯಗಳಿಸಲು 41 ನಿಮಿಷ ತೆಗೆದುಕೊಂಡರು.

ಅಖಿಲ ಭಾರತ 16 ವರ್ಷದೊಳಗಿನವರ ಟೆನಿಸ್

ಶ್ರೇಯಾಂತ್, ಕಶ್ವಿಗೆ ‘ಪ್ರಶಸ್ತಿ ಡಬಲ್’

ಮಂಡ್ಯ: ಕಳೆದ ತಿಂಗಳು ಮೊದಲ ಐಟಿಎಫ್ ಟೂರ್ನಿಯಲ್ಲೇ ಗಮನ ಸೆಳೆದಿದ್ದ ಸ್ಥಳೀಯ ಆಟಗಾರ್ತಿ ಕಶ್ವಿ ಸುನೀಲ್ ಮತ್ತು ದಾವಣಗೆರೆಯ ಹುಡುಗ ಶ್ರೇಯಾಂತ್ ಎಂ., ಅಖಿಲ ಭಾರತ ರ್‍ಯಾಂಕಿಂಗ್ (16 ವರ್ಷದೊ-ಳಗಿನವರ) ಟೆನಿಸ್ ಟೂರ್ನಿಯಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್ ಪ್ರಶಸ್ತಿಗಳೆ-ರಡನ್ನೂ ಗೆದ್ದು ‘ಡಬಲ್’ ಸಾಧಿಸಿದ ಹಿರಿಮೆಗೆ ಪಾತ್ರರಾದರು.

ಪಿಇಟಿ ಕಪ್‌ಗಾಗಿ ಶುಕ್ರವಾರ ನಡೆದ ಟೂರ್ನಿಯ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ, ಶ್ರೇಯಾಂಕರಹಿತ ಆಟ ಗಾರ್ತಿ ಕಶ್ವಿ 6-2, 6-3 ರಿಂದ ಕೇರಳದ ಆಟಗಾರ್ತಿ, ಎರಡನೇ ಶ್ರೇಯಾಂಕದ ನೇಹಲ್ ಮರಿಯಾ ಮ್ಯಾಥ್ಯು ವಿರುದ್ಧ ನೇರ ಸೆಟ್‌ಗಳಲ್ಲಿ ಜಯ ಗಳಿಸಿದಳು. ಪಂದ್ಯ 100 ನಿಮಿಷಗಳ ಕಾಲ ನಡೆಯಿತು.

ಸುಮಾರು ಎರಡು ಗಂಟೆ 15 ನಿಮಿಷ ನಡೆದ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಶ್ರೇಯಾಂತ್ 6-4, 5-7, 6-1 ರಿಂದ ಬೆಂಗಳೂರಿನ ಆರುಷ್ ಕೋಟೆ ಮೇಲೆ ಜಯಗಳಿಸಿದನು.


ಬಾಲಕಿಯರ ಸಿಂಗಲ್ಸ್, ಡಬಲ್ಸ್‌ನಲ್ಲಿ ಪ್ರಶಸ್ತಿ ಪಡೆದ ಮಂಡ್ಯದ ಕಶ್ವಿ ಸುನಿಲ್ (ಎಡಚಿತ್ರ). ಬಾಲಕರ ಸಿಂಗಲ್ಸ್, ಡಬಲ್ಸ್‌ನಲ್ಲಿ ಚಾಂಪಿಯನ್ ಆದ ದಾವಣಗೆರೆಯ ಎಂ.ಶ್ರೇಯಾಂತ್; ಬಾಲಕರ ಡಬಲ್ಸ್ ಪ್ರಶಸ್ತಿ ಗೆದ್ದ ಮೈಸೂರಿನ ಕೆ.ನಿಖಿತ್

ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಉನ್ನತಿ ಮುರಳೀಧರ್– ಕಶ್ವಿ ಜೋಡಿ 6-1, 6-1 ರಿಂದ ಅದಿತಿ ಖಾನಾಪುರೆ-ತೀಕ್ಷ್ಣಾ ನಾಗೇಂದ್ರ ಜೋಡಿಯನ್ನು ಸುಲಭವಾಗಿ ಸೋಲಿಸಿತು.

ಬಾಲಕರ ಡಬಲ್ಸ್ ಫೈನಲ್ ಪಂದ್ಯದಲ್ಲಿ ಶ್ರೇಯಾಂತ್ – ಮೈಸೂರಿನ ನಿಖಿತ್ ಕೆ. ಜೋಡಿ 6-4, 6-1 ರಿಂದ ನೇರ ಸೆಟ್‌ಗಳಿಂದ ಆರುಷ್ ಕೋಟೆ-ಚನ್ನಮಲ್ಲಿಕಾರ್ಜುನ ಜೋಡಿಯನ್ನು ಪರಾಭವಗೊಳಿಸಿತು.

ಟಾಪ್ ಸರ್ವ್ ಟೆನಿಸ್ ಅಕಾಡೆಮಿ ಆಶ್ರಯದಲ್ಲಿ ನಡೆದ ಈ ಟೂರ್ನಿಯ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ ಉಪಾಧ್ಯಕ್ಷ ಎಂ.ಬಿ.ದ್ಯಾಬೇರಿ ಮತ್ತು ಪಿಇಟಿ ಸಂಸ್ಥೆಯ ಕಾರ್ಯದರ್ಶಿ ಎಸ್.ಎಲ್.ಶಿವಪ್ರಕಾಶ್ ಬಹುಮಾನ ವಿತರಿಸಿದರು.

ಓವರ್‌ನಲ್ಲಿ ‘ಡಬಲ್ ಹ್ಯಾಟ್ರಿಕ್’ ಸಾಧನೆ

ಲಂಡನ್ (ರಾಯಿಟರ್ಸ್): ಇಂಗ್ಲೆಂಡ್‌ನ 12 ವರ್ಷದ ಬಾಲಕನೊಬ್ಬ ಒಂದೇ ಓವರ್‌ನಲ್ಲಿ ಆರು ವಿಕೆಟ್ (ಡಬಲ್ ಹ್ಯಾಟ್ರಿಕ್) ಪಡೆದ ಅಪರೂಪದ ಸಾಧನೆ ಮಾಡಿದ್ದಾನೆ.

ಬ್ರೊಮ್ಸ್‌ಗ್ರೋವ್ ಕ್ರಿಕೆಟ್ ಕ್ಲಬ್‌ಗೆ ಆಡುತ್ತಿರುವ ಆಲಿವರ್ ವೈಟ್‌ಹೌಸ್, ಕಾಕ್‌ಹಿಲ್ ಕ್ಲಬ್ ವಿರುದ್ಧದ ಪಂದ್ಯದಲ್ಲಿ ಒಂದು ಓವರ್‌ನ ಆರೂ ಎಸೆತಗಳಲ್ಲಿ ವಿಕೆಟ್ ಪಡೆದಿದ್ದಾನೆ. ಆತ ಎಲ್ಲರನ್ನೂ ಬೌಲ್ಡ್ ಮಾಡಿದ್ದು ವಿಶೇಷ. ಪಂದ್ಯದಲ್ಲಿ ಎರಡು ಓವರ್ ಬೌಲ್ ಮಾಡಿದ ಆಲಿವರ್, ಯಾವುದೇ ರನ್ ನೀಡದೆ ಒಟ್ಟು ಎಂಟು ವಿಕೆಟ್ ಗಳಿಸಿದ್ದಾನೆ.

‘ಒಂದು ಓವರ್‌ನಲ್ಲಿ ಡಬಲ್ ಹ್ಯಾಟ್ರಿಕ್ ಪಡೆಯುವುದೆಂದರೆ ಅದ್ಭುತ ಸಾಧನೆಯೇ ಸರಿ. ದೊಡ್ಡವನಾಗುವ-ವರೆಗೂ ಈ ಸಾಧನೆಯ ಮಹತ್ವವನ್ನು ಆತ ಅರಿತುಕೊಳ್ಳುವುದಿಲ್ಲ ಎಂಬುದಾಗಿ ನಾನು ಭಾವಿಸಿದ್ದೇನೆ’ ಎಂದು ಬ್ರೊಮ್ಸ್‌ಗ್ರೋವ್ ಕ್ರಿಕೆಟ್ ಕ್ಲಬ್‌ನ ಸೀನಿಯರ್ ತಂಡದ ನಾಯಕ ಲೆವಿಟ್ ಹೇಳಿದ್ದಾರೆ.

ಆಲಿವರ್‌ನ ಅಜ್ಜಿ, ಆ್ಯನ್ ಜೋನ್ಸ್ ಅವರು 1969 ರ ವಿಂಬಲ್ಡನ್ ಟೆನಿಸ್ ಟೂರ್ನಿಯ ಚಾಂಪಿಯನ್ ಆಗಿದ್ದರು.

ಅಥ್ಲೀಟ್‌ಗಳ ವಸತಿ ಭತ್ಯೆ ಹೆಚ್ಚಳ

ನವದೆಹಲಿ: ಅಂತರರಾಷ್ಟ್ರೀಯ ಸ್ಪರ್ಧೆ-ಗಳಲ್ಲಿ ಭಾಗವಹಿಸುವ ಅಥ್ಲೀಟ್‌ಗಳು ಮತ್ತು ತಂಡದ ಅಧಿಕಾರಿಗಳಿಗೆ ನೀಡಲಾಗುವ ಊಟ ಮತ್ತು ವಸತಿ ಭತ್ಯೆಯನ್ನು ಶೇ 66ರಷ್ಟು ಹೆಚ್ಚಿಸಿ ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ಹೆಚ್ಚಿಸಿದೆ.

ಅಥ್ಲೀಟ್‌ಗಳು ಈ ಹಿಂದೆ ದಿನವೊಂದಕ್ಕೆ ₹12,300 (150 ಡಾಲರ್) ಭತ್ಯೆ ಪಡೆಯುತ್ತಿದ್ದರು. ಪರಿಷ್ಕರಣೆಯ ಬಳಿಕ ₹20,500 (250 ಡಾಲರ್) ಭತ್ಯೆಗೆ ಅರ್ಹರಾಗಲಿದ್ದಾರೆ.

ನ್ಯಾಷನಲ್ ಸ್ಪೋರ್ಟ್ಸ್ ಫೆಡರೇಷನ್‌ನ ಮನವಿಯ ಮೇರೆಗೆ ಭತ್ಯೆಯನ್ನು ಸಚಿವಾಲಯ ಹೆಚ್ಚಿಸಿದೆ. ಈ ಹಿಂದೆ 2015ರಲ್ಲಿ ಪರಿಷ್ಕರಣೆ ಮಾಡಲಾಗಿತ್ತು.



ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

Furnished Office Space Available for Rent
I & II Floor
2400 sqft each,
R V Road, Bangalore
Contact: 88841 01166

REAL ESTATE SELLING

Agricultural Land Converted

AVAILABLE BDA Sites,Banshankari6th,Stage, Anjanapura Visweswaraiah Layout,JPNagar8th,9th,Phase 20x30,30x40 40x60, 50x80,Contact Genuine Buyers: 9945778333

Airport Road

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Brokers excuse.
Genuine Party Contact
9108133206

Sites

BANASHANKARI 6TH Stage, 3rd Block,30x40, West Facing Near Park. Good Location, Genuine Buyers Contact: 9900097239

Arkavathi Layout

ARKAVATHY LAYOUT 20x30, 30x30,30x40,Sites Sale, All Blocks, Genuine Buyer's. Call: USR- 7019770736/ 8951614989.

HBR Layout

PREMIUM BDA Commercial sites for sale HBR Layout 80 Feet Road (Near BDA Complex) Contact 9844039482

Banashankari

BANASHANKARI 6TH Stage 11th Block,30x40,Price 1.10Cr.West, BDA Site Uttarahalli Main Road, 4th_H'Block 20x30,North:8904210201

HRBR Layout

HRBR 2ND Block 40x80 N/F 50 Feet Road, Close to Main Road, Commercial/ Residential. Rs 21,000 Negotiable Call: 73493-22223

Kumaraswamy Layout

25X30 EAST Facing BDA Site Sale Kumaraswamy Layout Near Police Station. Clear Titles. Contact:- 9342197377

Kempegowda Layout

KEMPEGOWDA LAYOUT BDA Sites for Sale Commercial 40x60, 100ft Road Near BDA Complex Mysore Road Metro: 7899570235

Magadi Road

SALE 30X40 EAST FACING, Government GROUP 'D' Employees' society, Block-4, Herohalli, Andrahalli Main Road, Bangalore 9873264644

Mysore Road

SALE 17000 to 87000sft Commercial/ Residential land in Bidadi Highway-Road frontage 525ft. 9620253180/ 9916310226. www. vernadevelopers.com

Jayanagar

"AVAILABLE 45X90 North facing Site for sale Jayanagar 4th T Block, Good location. Contact 9110228719"

Yelahanka

30x40 Converted Plots
Each Plot @ **1,60,000/-**
133/- per sq.ft, 90 minutes Journey from Yelahanka
9343510635, 9010559539

Nelamangala

NELAMANGALA SITE For sale at E.K. Enclave just opp. to RTO Nelamangala. Contact Raju:- 9448082402.

Peenya

SALE: SITE 2080 Sqft with Independent House, 3.5 BHK, carpark, Borewell, 8500/ sft. Hegganahalli,near Peenya 2nd Stage Contact: 9845309926

Rajarajeshwari Nagar

R.R.NAGARA BEML Layout 30X40 House Sale 1.60Cr. Javaregowdana Doddi 30x40 Site Sale 66L. 9148914809, 9740075563.

Uttarahalli

"BHARATH SOCIETY near TV club 40x60 site, Jayanagar society Gubbalalu 30x40, Poorna Pragna 40x60 House. 9845286505"

J P Nagar

JPNAGAR 8TH Phase, Royal County BDA Site Sale,30x50, S/F, 9800/- Negotiable : 9538680364,9513004587

CNR Infocity
READY TO BUILD PLOTS FOR EVERY DREAM HOME
BMRDA APPROVED SITES
AVAILABLE @ **NELAMANGALA**
CONTACT FOR MORE INFORMATION
87222 27780, 87222 27711



BUILDING FOR RENT
GYM/ UNISEX SALOON
NEWLY Constructed, on Prime Location
GUARANTEED BUSINESS ON
JIGANI-BANNERGHATTA MAIN ROAD
FIRST FLOOR, BUILT to SUITABALE
Contact : OWNER **9886198399**

Vishweshwariah Layout

BDA SITE for Sale in Vishweshwaria 9th Block 20X30 N/F Near Nagarabhavi Ring Road: 8217392686/ 9980433004

Commercial Building

Mysore Road

FOR SALE BUILTUP 7500SFT BUILDING WITH 65HP POWER IN INDUSTRIAL AREA MYSORE ROAD CALL: 9886080542

Commerical

Jayanagar

***JAYANAGAR 9TH** Block* Commercial Building 40x70Corner 5-floor Rental income 5.75 Lakhs,Price 9.5cr Contact.9945079777

Flat

Basavanagudi

GAVIPURAM EXTENSION SALE 2 BHK FLAT 1100 SQFT, ALL GENERAL AMENITIES 1.20CR NEGOTIABLE: 9886019240/ 26623994

Kammanahalli

FLAT SALE, renovated, covered carparking, VI Floor, SENAVIHAR, 2 BHK, 903 SQFT. Contact: 7483935020

Kumaraswamy Layout

3-BHK E/F Flat 2250Sqft Fully Teak Wood Italian Marbles 2-Carparking 1.6Cr Kumaraswamy Layout 15F Bustand- 9611144096

M G Road And Around

HOUSE SALE (G+3) 2BHK Per Floor @Banashankari 5th Stage BDA 30x40 Plot Attached, Poornapragna Layout, Rs3.20 Crores Bheeresh 9900471143, 9844888847 Shivakumar 9845875555

EMBASSY OASIS St John's Road 4BHK Furnished Flat, 4100Sft 3Carparks, Upper Floor, with Amenities: 9845022510

Nagarabhavi

MALLATHAHALLI RING Road near Bangalore University, 2 BHK new Flats 45,00,000/- near Jnanabharathi Metro Station -9113209655

Uttarahalli

IMAGE GREENS Apartment 1st Floor, 1300 Sqft, 2 BHK SALE, Poornaprajna Layout, 13 Years old, Call:9945724472

Farm House/ Land/ Resorts

Multiple Locations

1/2 ACRE converted eKhata Property 15 AC rooms resto cafe 6-9L income nandi hills rd connecting STRR 9.1Cr Ph 7019346409

Mysore Road

LANDS FOR sale 4 acre,15 acre,80 acre in yellow zone near Bidadi(Bangalore) housing board layout. Suitable for villas, Layout etc.Contact-9743978646

General

Multiple Locations

BUY, SELL, rent Residential, industrial and farm land, office space available for rent. Contact. 9380586105.

House

Banashankari

ITTAMADU HOUSE SALE. Ground 2 BHK, 1st, 2nd Duplex. Car Parking, Site- South, Door- East. 9945724472.

Hanumanthnagar

"NEAR VIDYAPEETA circle, Katriguppe 30x43 old demolition House A-katha East facing Full Cheque. 9845286505

Industrial & Factory

Out-Station

BUILD-TO-SUIT OR on sale 3 acre Industrial Converted Land at Magadi Singripalya attached STRR corner @ 495 psqf contact 9845851473.

Villas/Bunglows

Thanisandra

SOBHA CITY Tanisandra Main Road, 5 BHK Row House villa for sale. Contact: Chandan: 9900665081

REAL ESTATE BUYING

Farm House/ Land/ Resorts

Mysore

FOR BUYING & Selling any Mysore Properties Contact: Mysore Estates, Vishwanath Gowda 9590911111. "Refer genuine Buyers & Sellers, get attractive gifts. 0% Brokerage

General

General

WE DO Agricultural Land Conversions, Change of Land Use,Phodi Durasti, Survey, Khata, Revenue Department work. Verna Developers, MG-Road, BLR. 9916310226/ 9620253180.

Sites

Banashankari

BDA SITES Wanted Anjanapura Arkavathy Banashankari 6th Stage, Vishweshwaraiah Kempegowda Any BDA Layout,Contact: 9845062822, 8660751654

WANTED BDASITES Banashankari 6th Stage,Vishweswaraiah Layout, Anjanapura,JPNagar 8th,9thPhase,20x30,30x40 40x60,50x80 Call,Genuine Sellers:9845812635

J P Nagar

FOR PURCHASE Sites JP Nagar 7 & 8 Phase 2400 Sqft above Somesh 7411129550

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

Mysore

WANTED SITE in MYSORE, Require site in Telecom layout MYSORE. Santhosh 98456-99488

R T Nagar

WANTED BDASITE 30X50 RTNAGAR I,II HMT ANANDNGR #8217218684

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

BUILDERS ESSENTIAL

Water Proofing Materials

'WE FIX' LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

House

"BANASHANKARI 2ND-STAGE 2BHK near BDA shopping Complex and Metro Station Rent-26000/-. 9845286505"

Upkar Developers is ready to Merge/Takeover with any Genuine Housing Society to develop bulk housing sites for its Members.
Contact or Pls mail details to:
"UPKAR TOWERS", No. 28, 9th Cross, 2nd Block, Jayanagar, Bangalore-560 011
Call: 91-98450 31515
E-mail: cmd@upkardevelopers.com
Website: www.upkardevelopers.com

BDA SITE FOR SALE
360 Sq.mtrs / 4000 Sq ft.
5th 'G' Block, North Facing, Anjanapura, Near Nice Road, Bengaluru.
Genuine Buyers. (Brokers Excuse)
Contact:
9448804191

BUSINESS

Business to Business

Consultants

CONSULTANT
Eco-Flair HVAC&R Consultant Expertise service to reduce power Consumption, Carbon emission, maintain Sustainability in Chiller plant
Mob- 9794810309

Business

BEST INVESTMENT For Petrol Bunk Lease Cum Sale or Partnership Kanakapura Road NH-209 Highway Call:9035963540

Business Offers

Finance

NRI'S INVESTMENT And Finance Now funds are Available on Lowinterest against properties mortgage Land/Building, Land development/ projects Contract-7204995189

JOB OPPORTUNITIES

General

AMAZING OPPORTUNITY. Retired, VRS, Business/ Professionals, Senior Citizens, Earn Lakhs. International Recognition. SUPERB RETIRED LIFE CAREER. 97400-90431/ 97400-76517

Teachers/ Professors

WANTED TEACHERS
HITHACHINTHANA PUBLIC SCHOOL & KIDZEE
Byrashettihalli, Gollahalli Post, Nelamangala-562123
For Preschool and Primary School
Qualification : BA, B.Com, B.Sc (Any Degree with NTT, MTT, DEd, BEd) CPED, BPED. For all subjects
Call: 94481 19275 87222 27710
hithachinthanapublicschool @gmail.com

PERSONAL

Change of Name

DAMMAR KUMARI CHETTRI, Mother/o, 6493459P, HAV/ASH, SURESH CHHETRI, Vill- Teesta Deogram, Teesta Bridge, Kalimpong, Darjeeling, West Bengal changed name DAMMAR KUMARI CHETTRI to DAMMAR KUMARI CHHETRI, 16/06/2023 Notary K.V. Mani Bangalore

CHANGE OF NAME
I, **SATISHA R** S/o K.V. Rangappa R/at. # 41, 3rd A Cross, Nagasandra Post, Vijayalakshmi Lyt, Bagalagunte, Blr-560073, have changed my name to **R. SATISH** vide affidavit dated 16/06/2023 before Notary Gangaraju B.N, Bangalore

TIKARAM CHETTRI, Father/o, 6493459P, HAV/ASH, SURESH CHHETRI, Vill- Teesta Deogram, Teesta Bridge, Kalimpong, Darjeeling, West Bengal changed name TIKARAM CHETTRI to TIKARAM CHHETRI, 16/06/2023 Notary K.V. Mani Bangalore

6493417H, DFR/ASH, ASHOK KUMAR SINGH, Vill - Jogata, Ara, Bhojpur, Bihar changed daughter's name CHANDNI KUMARI to CHANDANI KUMARI, 16/06/2023, Notary K.V. Mani, Bangalore

6493417H, DFR/ASH, ASHOK KUMAR SINGH, Vill - Jogata, Ara, Bhojpur, Bihar changed son's name VIKKEY KUMAR to VIKEY KUMAR SINGH, 16/06/2023, Notary K.V. Mani, Bangalore

Lost

I, ABU Ahmed Hazi Gulam Hussain, F/o. Mohamed Abu Ahmed have lost his class- X marks card of CISCE New Delhi, vide unique id 7451527 issued by S.D.A. Higher Secondary school, 2021 while travelling. Finders please contact: 7337612351

WEEKEND CORNER
ಕ್ಲಾಸಿಫೈಡ್ಸ್

ಆಷಾಡದ ಪ್ರಯುಕ್ತ, ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ
ಅಭಿವೃದ್ಧಿ
ಸಿಲ್ಕ್ ಇಂಡಿಯಾ® 2023
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
16 ರಿಂದ 25 ಜೂನ್ 2023 ರವರೆಗೆ | ಸಮಯ : ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ
ವೈಟ್ ಪೆಟಲ್ಸ್ (ವಿಜಯನಗರ)
ಬಿಎಂಟಿಸಿ ಬಸ್ ಡಿಪೋ, ರಿಲಯನ್ಸ್ ಮಾರ್ಟ್ ಪಕ್ಕ, ಮಾರುತಿ ಮಂದಿರದ ಹತ್ತಿರ, ವಿಜಯನಗರ, ಬೆಂಗಳೂರು.
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು

Last 9 Days



Entry Free | All Credit & Debit Cards Accepted
Contact : +91 86607 14252

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

An Initiative by:

asianet ಸುವರ್ಣ ನ್ಯೂಸ್
ನೇರ. ದಿಟ್ಟ. ನಿರಂತರ

REVA UNIVERSITY
Bengaluru, India

Presents

SUVARNA SHIKSHANA

SEASON - 3

Powered By

A PREMIER INSTITUTE IN INDIA
EXCEL ACADAMICS
Bengaluru
IIT-Main & Advanced | NEET | BITS | AIIMS | JIPMER | CET | COMED-K



Inauguration By
Dr. M.C. Sudhakar
Higher Education Minister, Government of Karnataka

ಇಂದಿನಿಂದ ಪ್ರಾರಂಭ



Celebrity Presence
Smt. Haripriya
Popular Actress - Kannada Film Industry

A Mega Education Expo

STATE BOARD, CBSC, ICSE, COMED K, NEET & CET

ರಿಸಲ್ಟ್ ಬಂದೇ ಬಿಡ್ತು. ಮುಂದೇ ಯಾವ ಕಾಲೇಜು – ಕೋರ್ಸ್ ಎಂಬ ಪ್ರಶ್ನೆಯೇ?...

ಈ ಮೆಗಾ ಎಜುಕೇಷನ್ ಎಕ್ಸ್‌ಪೋಗೆ ಭೇಟಿ ನೀಡಿ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ.

ದಿನಾಂಕ : 17 & 18 ಜೂನ್–2023. ಇದೇ ಶನಿವಾರ ಮತ್ತು ಭಾನುವಾರ

ಸ್ಥಳ : ಮಲ್ಲೇಶ್ವರಂ ಆಟದ ಮೈದಾನ, ಮಾರ್ಗೋಸಾ ರಸ್ತೆ, ಬೆಂಗಳೂರು

- Surprise Gifts
- Spot Admissions
- Scholarships
- Competitions

ENTRY FREE

Platinum Sponsors

RAMAIAH UNIVERSITY OF APPLIED SCIENCES
CAMBRIDGE INSTITUTE OF TECHNOLOGY
ACHARYA

Gold Sponsors

CMR UNIVERSITY
EAST POINT GROUP OF INSTITUTIONS
KLE TECHNOLOGICAL UNIVERSITY
PES UNIVERSITY
PRESIDENCY UNIVERSITY
PARISHRAMA NEET ACADEMY

Silver Sponsors

S.E.A GROUP OF INSTITUTIONS
NAGARJUNA
EAST WEST GROUP OF INSTITUTIONS BENGALURU
Don Bosco Group of Institutions
AMC ENGINEERING COLLEGE
CHANAKYA UNIVERSITY

Stall Partners

AIMS INSTITUTES
MS ENGINEERING COLLEGE
DSR ACADEMY
HARSHA INSTITUTIONS
RV UNIVERSITY
SKYBIRD
LOHIT'S ACADEMY
Vision NEET Academy
YENEPOYA
ADITYA GROUP OF INSTITUTIONS
ATRIA INSTITUTE OF TECHNOLOGY
Bangalore STUDY.com
CITY INSTITUTIONS
RajaRajeswari College of Engineering
R R INSTITUTIONS
IAS BABA
INDIAN ACADEMY GROUP OF INSTITUTION
ST PAULS COLLEGE

In Association With
Ab advertising
SIDEWAYS 6

FOR MORE INFORMATION : Mahesh - 9980735500 | Manoj - 78291 85383 | Mukesh. B - 8197389897

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

